ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 8 ಸಂಚಿಕೆ 33
ಆಗಸ್ಟ್ 17, 2014

ಪುಟ 16 ರೂ. 10/-

Blog :janashakthi.wordpress.com e-mail : js_weekly@yahoo.com





ಅ.ಭಾ.ಕೃಷಿಕೂಲಿಕರರ ಸಮ್ಮೇಳನ


'ಕೇಂದ್ರ ಸರ್ಕಾರ ಜನವಿರೋಧಿ ದಾರಿಯಲ್ಲಿ..'

– ಮಾಣಿಕ್ ಸರ್ಕಾರ್



'ಕೇಂದ್ರದಿಂದ ಕೃಷಿ ಅನುದಾನ ಕಡಿತ'

– 'ಅಚ್ಚೇ ದಿನ್' ಎಲ್ಲಿ ?



'ಬಡರೈತರಿಗೆ ಬ್ಯಾಂಕ್ ಸಾಲ ನೀಡಿ'

ಪ್ರಾಂತ ರೈತ ಸಂಘದ ಚಳುವಳಿ



'ಬ್ರಿಕ್ಸ್' ಬ್ಯಾಂಕ್ ಬಗೆಗೆ ಸಂಭ್ರಮ ಬೇಕೆ ?



ಅರ್ಕಾವತಿ: ಡೀ–ನೋಟಿಫಿಕೇಷನ್ – ಹೊರಬರದ ಸತ್ಯಗಳು

ಬಲಗೊಂಡ ರಾಜ ಪ್ರಭುತ್ವಗಳು - ಬಲಗೊಂಡ ಚಾತುರ್ವರ್ಣ್ಯ ವ್ಯವಸ್ಥೆ

ಭಾಗ - 35



ಚೋಮನ ದುಡಿ

ಜಿ. ಎನ್. ನಾಗರಾಜ್

"ರಾಜ್ಯ ವಿಸ್ತಾರವಾಗಬೇಕು. ರಾಜನ ಕುಟುಂಬಕ್ಕೆ ಹೆಚ್ಚು ಆದಾಯ ದೊರೆಯಬೇಕು. ತನ್ನ ಬುಡಕಟ್ಟಿನ ಜನರಿಗೆ ಹೆಚ್ಚು ಭೂಮಿ ದೊರೆಯಬೇಕು. ಸರಿ. ಪುರೋಹಿತರೊಡನೆ ಚರ್ಚಿಸಿ ಅಶ್ವಮೇಧ ಯಾಗಕ್ಕೆ ಸಿದ್ಧತೆ ನಡೆಸಿದರು. ಶುದ್ಧ ತಳಿಯ, ಸಲ್ಲಕ್ಷಣಗಳ ಕುದುರೆಯನ್ನು ಆರಿಸಿ, ವೇದಮಂತ್ರ ಘೋಷದಿಂದ ಋತ್ವಿಜರು ಅರ್ಚಿಸಿ ಅದನ್ನು ದಿವ್ಯಾಶ್ವವನ್ನಾಗಿಸಿದ್ದಾರೆ. ಈ ಕುದುರೆಯ ಹಿಂದೆ ರಾಜನ ಕುಟುಂಬದ ಅಥವಾ ನಂಬಲರ್ಹ ಸೇನಾಧಿಪತಿಯ ನೇತೃತ್ವದಲ್ಲಿ ಸೈನ್ಯ ದಳವೊಂದು ಸಿದ್ಧವಾಗಿ ಹೊರಟಿತು.

ಒಂದು ವರ್ಷ ಕಾಲ ಯಾವೆಲ್ಲ ಪ್ರದೇಶಗಳಲ್ಲಿ ಅದು ಸುತ್ತಾಡುತ್ತದೆಯೋ ಆ ಎಲ್ಲ ಪ್ರದೇಶಗಳಲ್ಲಿ ರಾಜ ಪ್ರಭುತ್ವಗಳಿದ್ದರೆ ಅವರನ್ನು ಸೋಲಿಸಿ ಕಪ್ಪ ಕಾಣಿಕೆಗಳನ್ನು ಪಡೆಯುತ್ತಾರೆ. ಪೂರ್ವದಲ್ಲಿ, ದಕ್ಷಿಣದಲ್ಲಿ ಅನಾರ್ಯ ಬುಡಕಟ್ಟುಗಳವರು, ಪಶ್ಚಿಮದಲ್ಲಾದರೆ ಹಿಂದಿನ ಜ್ಞಾತಿಗಳು ಈಗ ಇರಾನಿಯನ್ನರು, ಗಾಂಧಾರರು, ಬಾಹ್ಲಿಕರು. ಅವರಿಗೆ ದೇವತೆಗಳೇ ಶತ್ರು ಅಸುರನೇ ದೈವ. ಕೆಲವೊಮ್ಮೆ ಸಿಂಧೂ ನದಿ ಮತ್ತು ಗಂಗಾ ನದಿಯ ಬಯಲುಗಳಲ್ಲಿ ವಾಸಿಸುತ್ತಿರುವ, ರಾಜ್ಯಗಳನ್ನು ಸ್ಥಾಪಿಸಿಕೊಂಡಿರುವ ತಮ್ಮವರೇ ಆದ ಕುರು, ಪಾಂಚಾಲ, ಕಾಶಿ, ವಿದೇಹ ಮೊದಲಾದ ಬುಡಕಟ್ಟಿನವರೂ ಇರಬಹುದು.

ರಾಜರುಗಳಿಲ್ಲದಿದ್ದರೆ ಅಲ್ಲಿರುವ ವಿವಿಧ ಬುಡಕಟ್ಟು ಜನರನ್ನು ಬೆದರಿಸಿ ಅಧೀನರನ್ನಾಗಿಸುತ್ತಾರೆ. ಅವರಿಂದ ಪಡೆಯಬಹುದಾದುನ್ನೆಲ್ಲ ಸುಲಿಯುತ್ತಾರೆ. ಬಹಳ ಸಂಪತ್ತೇನೂ ಇಲ್ಲದ ಸರಳ ಜೀವನದ ಈ ಬುಡಕಟ್ಟುಗಳ ಬಳಿ ಹೆಚ್ಚೇನೂ ಇಲ್ಲದಿರುವ ಪರಿಸ್ಥಿತಿಯೇ ಬಹಳ. ಅವರಿಂದ ಬೇರೇನೂ ಸಿಗದಿದ್ದರೆ ಅವರನ್ನೇ ಯುವಕ, ಯುವತಿಯರನ್ನು ತೊತ್ತಾಗಿ ಪಡೆದು ವಿಜಯ ಘೋಷ ಹಾಕುತ್ತಾ ಸೈನ್ಯ ಹಿಂದಿರುಗುತ್ತದೆ. ರಾಜನಿಗೆ ಒಪ್ಪಿಸುತ್ತದೆ.

ಕುದುರೆಯ ಬರವಿನೊಂದಿಗೆ ಅಶ್ವಮೇಧ ಯಾಗ ಭರದಿಂದ ನಡೆಯುತ್ತದೆ. ಸಾವಿರಾರು ಋತ್ವಿಜರುಗಳನ್ನು ಸೇರಿಸಲಾಗುತ್ತದೆ. ಅವರಲ್ಲಿ ಹೋತೃ, ..ಮೊದಲಾದ ವಿಭಜನೆಗಳು. ಯಾಗ ನಡೆಯುವಷ್ಟು ದಿನವೂ ಮಂತ್ರಘೋಷ. ಈ ಯಾಗದ ಸುದ್ದಿ ಕೇಳಿಯೇ ಮತ್ತಷ್ಟು ಬ್ರಾಹ್ಮಣರುಗಳು ನೆರೆಯುತ್ತಾರೆ. ಹಲವಾರು ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮದಲ್ಲಿ ರಾಜ ಯಾಗದ ಯಜಮಾನನಾದರೆ ರಾಣಿಗೂ ಒಂದು ಮುಖ್ಯ ಪಾತ್ರವುಂಟು. (ನೇರವಾಗಿ ಈ ಲೇಖನ ಮಾಲೆಗೆ ಸಂಬಂಧಿಸದ ವಿಷಯವಾದ್ದರಿಂದ ಆ ವಿವರಗಳಿಗೆ ಹೋಗುವುದಿಲ್ಲ. ಆಸಕ್ತರು ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಎನ್. ಎನ್. ಭಟ್ಟಾಚಾರ್ಯ ಅಥವಾ ಕನ್ನಡದಲ್ಲಿ ಬಿ.ವಿ. ವೀರಭದ್ರಪ್ಪ ಇವರ ಬರಹಗಳನ್ನು ಓದಬಹುದು.) ಈ ಯಾಗದ ಕೊನೆಯಲ್ಲಿ ರಾಜನಿಗೆ ಎಲ್ಲಾ ಅಧೀನ ರಾಜರುಗಳು, ಮುಖ್ಯಸ್ಥರು, ವಿವಿಧ ಪ್ರದೇಶಗಳ/ ಗ್ರಾಮಗಳ ಜನ ಸಮುದಾಯಗಳ ಮುಖ್ಯಸ್ಥರು ಬುಡಕಟ್ಟುಗಳ ನಾಯಕರುಗಳು ಇತ್ಯಾದಿ ಜನರಿಂದ ಕಪ್ಪ, ಕಾಣಿಕೆಗಳ ಸಮರ್ಪಣೆ, ತಮ್ಮ ಸಮಾನರಾದ ನೆರೆಹೊರೆಯ ರಾಜರುಗಳಿಗೂ ಆಹ್ವಾನ. ಅವರಿಂದಲೂ ಕೊಡುಗೆಗಳು ಮತ್ತು ಅವರಿಗೆ ರಾಜನಿಂದ ಗೌರವ. ಯಾಗದ ಕೊನೆಗೆ ಋತ್ವಜರಿಗೆ ಅವರವರ ಪಾತ್ರಕ್ಕೆ ಅನುಗುಣವಾಗಿ ಭೂರಿ ದಕ್ಷಿಣೆ."

ಇದು ಯಜುರ್ವೇದ, ವಿವಿಧ ಬ್ರಾಹ್ಮಣಗಳಲ್ಲಿ ದೊರೆಯುವ ಯಾಗದ ಒಂದು ಸ್ಥೂಲ ಚಿತ್ರಣ. ಇದರಿಂದ ಅಂದಿನ ಸಮಾಜದ ರಚನೆಯ ವಿವಿಧ



ಸ್ತರಗಳ, ತರತಮಗಳ ಒಂದು ಚಿತ್ರಣವನ್ನೂ ನೀಡುತ್ತದೆ.

ಈ ಅಶ್ವ ಮೇಧವೆಂಬುದು ಹಿಂದೆ ಪಶು ಸಂಗೋಪನೆಯ ಕಾಲದಲ್ಲಿ ಮೇವಿನ ಲಭ್ಯತೆ, ಮಳೆಯ ಕಾಲ ಬದ್ಧತೆ, ಹುಲ್ಲುಗಾವಲುಗಳ ವಿಸ್ತಾರ ಇವುಗಳಿಗನುಗುಣವಾದ ದನಗಳ ಹಾಗೂ ಕುದುರೆಗಳ ತಂಡದ ಹಿಂದೆ ಬುಡಕಟ್ಟು ಜನರ ವಾರ್ಷಿಕ ಸಂಚಾರ ಚಕ್ರದ ಆಚರಣೆಯಾಗಿತ್ತು ಅಶ್ವಮೇಧ. ದನಗಳ ದೊಡ್ಡ ಹಿಂಡುಗಳು ಮತ್ತು ಜನರು ಹೋಗುವ ಮೊದಲೇ ಕುದುರೆಯೊಂದಿಗೆ ಕೆಲ ಜನರು ಹೋಗಿ ಪರಿಸ್ಥಿತಿಯನ್ನು ಅಜಮಾಹಿಷಿ ಮಾಡಿ ಬರುವ ಪದ್ಧತಿಯ ಭಾಗ. ಅದು ಕುದುರೆಗಳು ಕೂಡ ಮುಖ್ಯ ಆಹಾರವಾಗಿದ್ದ ಕಾಲವೂ ಹೌದು. ಆಗ ಅದು ಬಹಳ ಸರಳವಾದ, ಆದಿಮ ಬುಡಕಟ್ಟು ಕಲ್ಪನೆಗಳಿಗೆ ಸಂಬಂಧಿಸಿದ ಆಚರಣೆ.

ರಾಜ ಪ್ರಭುತ್ವಗಳು ಬಲಗೊಳ್ಳುತ್ತಿರುವ ಸಂದರ್ಭದಲ್ಲಿ ಅವರದೇ ಬುಡಕಟ್ಟಿನ ಇತರ ಜನರಿಂದ ಬೇರೆಯಾಗಿ ಎಲ್ಲ ಜನರಿಂದ ಬಹಳ ಮೇಲ್ಮಟ್ಟದವರೆಂದು ಸ್ಥಾಪಿಸಲು, ಉಳಿದೆಲ್ಲರನ್ನು ಅವರಿಗೆ ವಿಧೇಯರನ್ನಾಗಿಸಲು ಒಂದೆಡೆ ಕ್ಷತ್ರಿಯ ವರ್ಗ ಮತ್ತು ಸೈನ್ಯ ಮತ್ತೊಂದೆಡೆ ರಾಜಸೂಯ, ಅಶ್ವಮೇಧ ಯಾಗಗಳಂತಹ ವಿವಿಧ ರೀತಿಯ ಆಚರಣೆಗಳನ್ನು ಬಹಳ ವಿಸ್ತಾರವಾಗಿಸಲಾಯಿತು ಎಂಬುದನ್ನು ಹಿಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಇಂತಹ ಆಚರಣೆಗಳನ್ನು ವಿಸ್ತಾರವಾದ ರೂಪದಲ್ಲಿ ಶಾಸ್ತ್ರಬದ್ಧಗೊಳಿಸುವುದಕ್ಕಾಗಿಯೇ ಯಜುರ್ವೇದ ಹಾಗೂ ಅದಕ್ಕೆ ಸಂಬಂಧಿಸಿದ ವಿಧಿಗಳನ್ನು ಬಿಗಿಗೊಳಿಸುವುದಕ್ಕಾಗಿಯೇ ಬ್ರಾಹ್ಮಣಗಳ ರಚನೆಯಾಗಿವೆ.

ಈ ಹಿನ್ನೆಲೆಯಲ್ಲಿ ಬ್ರಾಹ್ಮಣರ ಸ್ಥಾನ ಎಲ್ಲಕ್ಕಿಂತ ಮೇಲಿನದೆಂದು ಚಿತ್ರಿತವಾಯಿತು. ಅವರು ಆದಾಯಿ(ದಕ್ಷಿಣೆಗಳ ಸ್ವೀಕಾರ ಮಾಡುವವರು, ಆಪಾಯಿ(ಆರಾಧನೆಯ ವಸ್ತುಗಳನ್ನು ಪಡೆಯುವವರು) ಎಂದು ಐತರೇಯ ಬ್ರಾಹ್ಮಣ–7, 29.2 ಹೇಳುತ್ತದೆ. ಅವರಿಗೆ ಭೂರಿ ದಕ್ಷಿಣೆಗಳನ್ನು ನೀಡಬೇಕೆಂದು ಧನ, ಧಾನ್ಯ, ಗೋವುಗಳ ದೊಡ್ಡ ಹಿಂಡು ಮತ್ತು ಭೂಮಿಯನ್ನು ನೀಡಬೇಕೆಂದು ಇವುಗಳಲ್ಲಿ ವಿಧಿಸಲಾಗಿದೆ. ವಿವಿಧ ಬ್ರಾಹ್ಮಣಗಳಲ್ಲಿ ಉಲ್ಲೇಖಿತವಾದ ಈ ದಕ್ಷಿಣೆಗಳ ಪ್ರಮಾಣ ಎಷ್ಟಿವೆಯೆಂದರೆ ಇಂದು ಕೂಡ ಯಾರಾದರೂ ಬೆಚ್ಚಿ ಬೀಳುವಷ್ಟಿದೆ. ಭೂಮಿಯ ಬಗ್ಗೆ ಅಂದೇ ಆರಂಭವಾದ, ಮುಂದೆ ಅನೇಕ ಶತ ಶತಮಾನಗಳ ಕಾಲ ಮುಂದುವರೆದ ಪದ್ಧತಿ ಎಂದರೆ ಬೇರೊಬ್ಬ ಬ್ರಾಹ್ಮಣನಿಗೆ ಸೇರದ, ಇತರ ಯಾರಿಗೆ ಸೇರಿದ ಭೂಮಿಯನ್ನಾದರೂ ಬ್ರಾಹ್ಮಣರಿಗೆ ದಕ್ಷಿಣೆ–ಯಾಗಿ ನೀಡಬಹುದು ಎಂಬುದು. (ಶಥಪಥ ಬ್ರಾಹ್ಮಣ, 13, 6.2.18,7.1.13)

ಅಥರ್ವಣ ವೇದವು ಬ್ರಾಹ್ಮಣರು ದೇವತೆಗಳಿಗೆ ಪ್ರಿಯರಾದವರು ಆದ್ದರಿಂದ ಪೂಜಾರ್ಹರು, ಅವರ ಪತ್ನಿಯರು ಮತ್ತು ಗೋವುಗಳನ್ನು ಯಾರೂ ಮುಟ್ಟಬಾರದು ಎಂದು ವಿಧಿಸುತ್ತದೆ. ಹಾಗೆಯೇ ಅವರು ಪ್ರದೇಶದಿಂದ ಪ್ರದೇಶಕ್ಕೆ ಸಂಚರಿಸುವುದಕ್ಕೆ ಯಾರೂ ಅಡ್ಡಿ ಪಡಿಸಬಾರದು ಎಂದು ಐತ–ರೇಯ ಬ್ರಾಹ್ಮಣ ಹೇಳುತ್ತದೆ. ಆ ಮೂಲಕ ರಾಜರುಗಳು ಹೇಗೆ ತಮ್ಮ ಬುಡಕಟ್ಟುಗಳಿಗೆ ಮಾತ್ರ ಸೀಮಿತರಾಗಿದ್ದವರು ಒಂದು ಪ್ರದೇಶದ ಇತರೆಲ್ಲಾ ಜನರಿಗೂ ರಾಜರಾದ–ರೋ ಹಾಗೆಯೇ ಬ್ರಾಹ್ಮಣರೂ ಕೂಡ ತಮ್ಮ ಬುಡಕಟ್ಟುಗಳಿಗೆ ಮಾತ್ರ ಬದ್ಧರಾದ ಪುರೋಹಿತರಾಗಿದ್ದವರು ಬೇರೆ ಯಾವ ರಾಜ ಅಥವ ಸಮುದಾಯಕ್ಕೂ ಸೇವೆ ಸಲ್ಲಿಸುವ ಚಲನೆಯನ್ನು ಪಡೆದುಕೊಂಡದ್ದನ್ನು ಸೂಚಿಸುತ್ತದೆ.

ಕ್ಷತ್ರಿಯರು ಮತ್ತು ರಾಜನ್ಯರು ಎಂಬ ಪದಗಳು ಪರ್ಯಾಯವಾಗಿ ಬಳಕೆಯಾಗಿವೆ. ಹಿಂದಿನ ಸಂಚಿಕೆಯಲ್ಲಿ ಆರ್ಯರು ವಲಸೆ ತ್ಯಜಿಸಿ ನೆಲೆಕಂಡುಕೊಳ್ಳುವುದರೊಂದಿಗೆ ಒಂದು ಪ್ರದೇಶದ ಮೇಲಿನ ಯಾಜಮಾನ್ಯದ ಸ್ಥಾಪನೆಗಾಗಿ ಯುದ್ಧಗಳು, ಅದರೊಂದಿಗೆ ಕ್ಷತ್ರಿಯ ವರ್ಗದ ಸಂಖ್ಯೆ ಮತ್ತು ಪ್ರಾಬಲ್ಯ ಹೆಚ್ಚಿದ್ದನ್ನು ವಿವರಿಸಲಾಗಿದೆ.

ವೈಶ್ಯರು ಎಂಬ ಪದದ ಬಳಕೆ ಋಗ್ವೇದದಲ್ಲಿರುವಂತೆಯೇ ಅಥರ್ವಣ ವೇದದಲ್ಲಿಯೂ ಬಹು ಅಪರೂಪ. ಐತ–ರೇಯ ಬ್ರಾಹ್ಮಣದಲ್ಲಿ ವೈಶ್ಯರನ್ನು ಉಲ್ಲೇಖಿಸಿ ಅವರನ್ನು ಅನ್ಯಾಸ್ಯ (ಬಲಿ, ತೆ–ರಿಗೆ, ಕಪ್ಪಗಳನ್ನು ಕೊಡಬೇಕಾದವರು) ಯಥಾಕಾಮ ಜಯೇಯಾಃ(ಬೇರೆಯವರಿಂದ ಜಯಿಸಲ್ಪಡಬಹುದಾದವರು ಎಂದು ವರ್ಣಿಸಿದೆ. ಅವರ ಬಗೆಗಿನ ವರ್ಣನೆಗಳನ್ನು ನೋಡಿದರೆ ಅವರು ಬ್ರಾಹ್ಮಣರಲ್ಲದ, ಕ್ಷತ್ರಿಯರಲ್ಲದ ಇತರೆಲ್ಲಾ ಸಾಮಾನ್ಯ ಆರ್ಯ ಜನರು. ರಾಜರಿಗೆ ತೆರಿಗೆ, ಬ್ರಾಹ್ಮಣರಿಗೆ ದಕ್ಷಿಣೆ ಯನ್ನು ಕೊಡಬೇಕಾದ ವಿವಿಧ ವೃತ್ತಿಗಳಲ್ಲಿ ತೊಡಗಿದ ದುಡಿಮೆಗಾರರು ಎಂಬುದನ್ನು ಸೂಚಿಸುತ್ತದೆ. ಅವರು ಕೃಷಿಕರೂ, ಪಶು ಸಂಗೋಪನೆಗಾರರೂ, ಕುಶಲ ಕರ್ಮಿಗಳೂ ಆಗಿರಬಹುದು.

ಶೂದ್ರರು–ಈ ಕಾಲಘಟ್ಟದ ವೇಳೆಗೆ ದಾಸ, ದಸ್ಯು ಎಂಬ ಜನ ಸಮುದಾಯಗಳ ಉಲ್ಲೇಖ ಅಪರೂಪವಾಗತೊಡಗಿದೆ. ಆ ಜಾಗದಲ್ಲಿ ಶೂದ್ರ ಎಂಬ ಪದ ಬಳಕೆಯಾಗಿದೆ. ಶೂದ್ರರು ಅಂದಿನ ಅರ್ಯೇತರ ಜನರು ಎಂಬುದನ್ನು ಇದು ಸೂಚಿಸುತ್ತದೆ. ಐತರೇಯ ಬ್ರಾಹ್ಮಣದ ಪ್ರಕಾರ ಅವನು ವೈಶ್ಯರಂತೆ ಅನ್ಯಾಸ್ಯ ಮಾತ್ರವಲ್ಲ ಅನ್ಯಾಸ್ಯ ಪ್ರೇಕ್ಷ್ಯ(ಬೇರೆಯವರ ಸೇವಕನಾಗಿರಬೇಕಾದವನು.), ಕಾಮೋತ್ಥಾಪ್ಯ (ಯಜಮಾನನ ಇಚ್ಛೆಯಂತೆ ಹೊರಹಾಕಲ್ಪಡುವವನು, ಯಥಾ ಕಾಮ ವಧ್ಯ(ಇಚ್ಛೆ ಬಂದರೆ ಕೊಲ್ಲಿಸಬಹುದಾದವನೂ ಕೂಡ). (7, 29.4). ಪಂಚವಿಂಶ ಬ್ರಾಹ್ಮಣದ ಪ್ರಕಾರ ಅವನು ಹಲವು ಗೋವುಗಳ ಒಡೆಯನಾದರೂ ಅವನ ಸೇವಕ ಸ್ಥಾನ ಹೋಗುವುದಿಲ್ಲ (6, 1.11), ತಪಸ್ಸು ಮಾಡಿದವನಾದರೂ ಕೂಡ ಅವನ ಶೂದ್ರತ್ವ ಹೋಗುವುದಿಲ್ಲ. (ವಾಜಸನೇಯಿ 30, 5)

ಇದರಿಂದೆಲ್ಲ ಶೂದ್ರರು ಆರ್ಯ ಜನರೊಂದಿಗೆ ಜೀವಿಸುತ್ತಿದ್ದ ಆದರೆ ಯಾವ ಹಕ್ಕುಗಳೂ ಇಲ್ಲದ ಆರ್ಯೇತರ ಜನ ಸಮುದಾಯಗಳು ಎಂಬುದು ಶ್ರುತವಾಗುತ್ತದೆ. ಅದೇ ಸಮಯದಲ್ಲಿ ಶೂದ್ರರನ್ನು ಪ್ರತ್ಯೇಕಿಸಲೆಂದೇ ಹೊಸ ಪದ್ಧತಿ ಆರಂಭವಾಗುತ್ತದೆ. ಅದೆಂದರೆ ಭಾರತವನ್ನು ಇಂದೂ ಕಾಡುತ್ತಿರುವ ಶೂದ್ರರು ಮಾತ್ರವೇ ಅಲ್ಲದೆ ಬೇರೆಲ್ಲರಿಗೂ ವ್ಯಾಪಿಸಿದ ಮಡಿ, ಮೈಲಿಗೆಯ ಪದ್ಧತಿ. ಶಥಪಥ ಬ್ರಾಹ್ಮಣ ಹೇಳುತ್ತದೆ : ಶೂದ್ರರು ಯಾವುದೇ ಯಜ್ಞ ಯಾಗದಿಗಳನ್ನು ಮಡುವಂತಿಲ್ಲ. ಮಾತ್ರವಲ್ಲ, ಯಜ್ಞದ ಯಜಮಾನನು ಅವನೊಂದಿಗೆ ನೇರವಾಗಿ ಮಾತನಾಡುವಂತಿಲ್ಲ. ಒಬ್ಬ ಋತ್ವಿಜನು ಶೂದ್ರರನ್ನು ಮುಟ್ಟಿಸಿಕೊಳ್ಳುವುದಿರಲಿ ಒಬ್ಬ ಹೆಂಗಸನ್ನು ಹಾಗೂ ಶೂದ್ರನನ್ನು ನೋಡಲೂ ಬಾರದು.

ಅಥರ್ವಣ ವೇದದಲ್ಲಿ ಹಾಗೂ ಬ್ರಾಹ್ಮಣಗಳಲ್ಲಿ ಇರುವ ದಾಸ, ದಾಸೀ ಉಲ್ಲೇಖಗಳು ಶೂದ್ರರಿಗೆ ಸಂಬಂಧಿಸಿದ ಅತ್ಯಂತ ಶ್ರಮದಾಯಕ ಹಾಗೂ ಕೀಳು ಕೆಲಸಗಳನ್ನು ವಿಧಿಸುತ್ತವೆ. ಆರ್ಯ ಜನರಿಗೆ ಬರುವ ಜ್ವರ ಮತ್ತು ಕಾಯಿಲೆಗಳು ಇವರ ಕಡೆಗೆ ಹೋಗಲಿ ಎಂಬ ಹಾರೈಕೆಗಳೂ ಕಾಣುತ್ತವೆ.

ಒಟ್ಟಿನಲ್ಲಿ ಯಜುರ್ವೇದ, ಅಥರ್ವಣ ವೇದ, ಬ್ರಾಹ್ಮಣಗಳ ಕಾಲಘಟ್ಟದಲ್ಲಿ ಆರ್ಯರಾದ ಮೂರು ವರ್ಣಗಳು, ಅರ್ಯೇತರವಾದ ಶೂದ್ರ ವರ್ಣ ಸೇರಿ ನಾಲ್ಕು ವರ್ಣಗಳ ಪದ್ಧತಿ ಋಗ್ವೇದಕ್ಕಿಂತಲೂ ಗಾಢವಾಗಿ, ಮಡಿ, ಮೈಲಿಗೆಯೊಂದಿಗೆ ಕಟ್ಟುನಿಟ್ಟಾಗಿ ಅಸ್ತಿತ್ವಕ್ಕೆ ಬಂದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಶತಪಥ ಬ್ರಾಹ್ಮಣವು ಬಾಹ್ಮಣರಿಗೆ ಅಧ್ಯಯನ, ಅಧ್ಯಾಪನವನ್ನು ವಿಧಿಸುವಾಗಲೂ ಕೂಡ ಬ್ರಾಹ್ಮಣ್ಯವೆಂಬುದು ವಂಶಾನುಕ್ರಮವಾಗಿ ಬರುವಂತಹುದು ಎಂಬುದನ್ನು ಸೂಚಿಸುತ್ತದೆ. ರಾಜ ಪ್ರಭುತ್ವ ಸ್ಥಾಪನೆಗೆ ಮತ್ತು ಗಟ್ಟಿಗೊಳ್ಳುವುದಕ್ಕೆ ಬ್ರಾಹ್ಮಣರ ಯಜ್ಞ ಯಾಗಾದಿಗಳು, ಕ್ಷತ್ರಿಯರ ಸೈನ್ಯಾಧಿಪತ್ಯ ಒಂದು ಕಡೆ ಮುಖ್ಯ ಆಧಾರಗಳಾದರೆ ಮತ್ತೊಂದು ಕಡೆ ಶೂದ್ರ ದಾಸತ್ವದ ದುಡಿಮೆ ಮತ್ತು ಅದರಿಂದ ಉಂಟಾದ ಸಂಪತ್ತಿನ ಹೆಚ್ಚಳವೂ ಕಾರಣವಾಗಿದೆ. ●

ಸಂಪಾದಕೀಯ

ಭೈರಪ್ಪನವರ ಪೂರ್ವಾಗ್ರಹಗಳಿಗೆ ಪತ್ರಿಕೆಯೊಂದರ ಪುರಸ್ಕಾರ!


ನಿತ್ಯಾನಂದಸ್ವಾಮಿ

'ಜವಾಹರಲಾಲ್ ನೆಹರೂ ಅವರ ಕಾಲದಿಂದಲೂ ಎಡಪಂಥೀಯ ಸಿದ್ಧಾಂತದಿಂದ ಪ್ರಣೀತವಾದ ಆರ್ಥಿಕ ನೀತಿಗಳೇ ದೇಶದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಬೆಳೆದು ಅಭಿವೃದ್ಧಿ ಕುಂಠಿತವಾಗಲು ಕಾರಣವಾಗಿವೆ' ಎಂದು ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅಭಿಪ್ರಾಯ ಪಟ್ಟಿದ್ದಾರೆ. ಅವರು ಇತ್ತೀಚೆಗೆ 'ಪ್ರಜಾವಾಣಿ' ಕಛೇರಿಗೆ ಬೇಟಿಕೊಟ್ಟು ಪತ್ರಿಕೆಯ ಸಂಪಾದಕೀಯ ಸಿಬ್ಬಂದಿ ಜತೆ ಮಾತನಾಡುತ್ತಾ ಹೀಗೆ ಹೇಳಿದ್ದಾರೆ ಎಂದು ಪತ್ರಿಕೆಯು ಸಂಚಿಕೆ 216 ರ ಮುಖಪುಟದಲ್ಲಿ ಪ್ರಮುಖವಾಗಿ ಪ್ರಕಟಿಸಿದೆ.

ಭೈರಪ್ಪನವರ ಈ ಮಾತುಗಳನ್ನು ಗಮನಿಸುವಾಗ ಅವರಿಗೆ ಎಡಪಂಥದ ಬಗ್ಗೆ ಎಳ್ಳಷ್ಟೂ ಜ್ಞಾನವಿಲ್ಲ ಎಂದು ಒಬ್ಬ ಸಾಮಾನ್ಯ ಎಡಪಂಥೀಯ ಕಾರ್ಯಕರ್ತನಿಗೆ ಅನಿಸಬಹುದು. ಆದರೆ ಇಷ್ಟೊಂದು ಖ್ಯಾತನಾಮರಾದ ಭೈರಪ್ಪನವರಿಗೆ ಎಡಪಂಥದ ಬಗ್ಗೆ ತಿಳುವಳಿಕೆಯೇ ಇಲ್ಲ ಎಂದು ಆರೋಪಿಸುವುದು ಸಮಂಜಸವಾಗದು. ಭೈರಪ್ಪನವರ ಈ ಮಾತುಗಳು ಮತ್ತು ಅವರು ತಮ್ಮ ಮಾತುಗಳನ್ನು ಮುಂದುವರೆಸಿ ಹೇಳಿದ್ದು ಎಡಪಂಥದ ಬಗ್ಗೆ ಅವರಿಗಿರುವ ಪೂರ್ವಾಗ್ರಹಗಳ ಅಭಿವ್ಯಕ್ತಿಯಾಗಿದೆ ಎಂದರೆ ಸರಿಯಾದೀತು.

'ರಷ್ಯಾದ ಎಡಪಂಥೀಯ ಸಿದ್ಧಾಂತದಿಂದ ಪ್ರಭಾವಿತರಾದವರು ನೆಹರೂ' ಎನ್ನುತ್ತಾರೆ ಭೈರಪ್ಪನವರು. ಇದು ಸತ್ಯಕ್ಕೆ ದೂರವಾದ ಮಾತು. ನೆಹರೂ ಎಂದೂ ಎಡಪಂಥೀಯರು ಆಗಿರಲಿಲ್ಲ. ಸಮಾಜವಾದಿ ರಷ್ಯಾದ 'ಯೋಜನಾ ಅರ್ಥವ್ಯವಸ್ಥೆ' ಮತ್ತು ವಿಶೇಷವಾಗಿ ಅಲ್ಲಿಯ ಸಾರ್ವಜನಿಕ ರಂಗದ ಅದ್ಭುತ ಸಾಧನೆಯಿಂದ ನೆಹರೂ ಪ್ರಭಾವಿತರಾಗಿದ್ದರು.

ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಿ ನೆಹರೂ ಭಾರತದಲ್ಲಿ ಬಂಡವಾಳಶಾಹಿ ಅಭಿವೃದ್ಧಿಯ ದಾರಿಯನ್ನೇ ಅನುಸರಿಸಿದರೇ ಹೊರತು ರಷ್ಯಾದ ಸಮಾಜವಾದಿ ಅಭಿವೃದ್ಧಿಯ ದಾರಿಯನ್ನಲ್ಲ. ತಕ್ಷಣಕ್ಕೆ ಲಾಭ ದೊರೆಯುವುದಿಲ್ಲ ಎಂಬ ಕಾರಣಕ್ಕಾಗಿ ಅಂದು ಭಾರತದ ಬಂಡವಾಳಿಗರು ವಿದ್ಯುತ್, ಗಣಿ, ರೈಲ್ವೆ ಮೊದಲಾದ ಬೃಹತ್ ಕೈಗಾರಿಕೆಗಳಿಗೆ ಬಂಡವಾಳ ಹೂಡಲು ಹಿಂದೇಟು ಹಾಕತೊಡಗಿದಾಗ ನೆಹರೂ ರಷ್ಯಾ ದೇಶವೂ ಸೇರಿದಂತೆ ಇತರ ಯೂರೋಪಿಯನ್ ದೇಶಗಳಿಂದ ನೆರವು ಪಡೆದು ದೇಶದಲ್ಲಿ ಸಾರ್ವಜನಿಕ ರಂಗದ ಕೈಗಾರಿಕೆಗಳ ಸ್ಥಾಪನೆಗೆ ಕಾರಣ–ರಾದರು. 'ಸಾರ್ವಜನಿಕ ರಂಗದ ಕೈಗಾರಿಕೆಗಳು ಆಧುನಿಕ ಭಾರತದ ದೇವಾಲಯಗಳು' ಎಂದು ಅವರು ವರ್ಣಿಸಿದರು. ಇಷ್ಟಕ್ಕೇ ನೆಹರೂ ಎಡಪಂಥೀಯರಾಗಲಾರರು.

'ಸಂಪತ್ತು ಬೆಳೆಸಲು, ಉದ್ಯೋಗ ಸೃಷ್ಟಿಸಲು ಬಂಡವಾಳಶಾಹಿಗಳು ಬೇಕೇ ಬೇಕು' ಎನ್ನುತ್ತಾರೆ ಭೈರಪ್ಪನವರು. ಸಂಪತ್ತು ಬೆಳೆಸಲು, ಉದ್ಯೋಗ ಸೃಷ್ಟಿಸಲು ಬಂಡವಾಳ ಬೇಕೇ ಬೇಕು ಎಂದು ಭೈರಪ್ಪನವರು ತಮ್ಮ ಮಾತನ್ನು ತಿದ್ದಿಕೊಳ್ಳಲು ಒಪ್ಪಿದರೆ ಅದು ಹೆಚ್ಚು ಸಮಂಜಸವಾದೀತು.

ಬಂಡವಾಳಶಾಹಿಯ ಬಂಡವಾಳ ಹೂಡಿಕೆಯಿಂದ ಸೃಷ್ಟಿಯಾಗುವ ಸಂಪತ್ತು ಆತನ ಖಜಾನೆಗೆ ಸೇರಿಕೊಳ್ಳುತ್ತದೆ. ಸಾರ್ವಜನಿಕ ರಂಗದಲ್ಲಿ ದೇಶದ ಜನತೆ ಹೂಡುವ ಬಂಡವಾಳದಿಂದ ಸೃಷ್ಟಿಯಾಗುವ ಸಂಪತ್ತು ದೇಶದ ಜನತೆಯ ಸೊತ್ತಾಗುತ್ತದೆ. ಈ ಕಾರಣಕ್ಕಾಗಿ ಎಡಪಂಥ ಸಾರ್ವಜನಿಕ ರಂಗದ ಉಳಿವಿಗಾಗಿ, ವಿದೇಶಿ ನೇರ ಬಂಡವಾಳ ಅದನ್ನು ಕಬಳಿಸಲು ಪ್ರಯತ್ನಿಸುತ್ತಿರುವುದನ್ನು ವಿರೋಧಿಸುತ್ತದೆ.

'ಎಲ್ಲವನ್ನೂ ಸರ್ಕಾರವೇ ಮಾಡಬೇಕು ಎನ್ನುತ್ತದೆ ಎಡಪಂಥೀಯ ಸಿದ್ಧಾಂತ' ಎನ್ನುತ್ತಾರೆ ಭೈರಪ್ಪನವರು. ಇದು ಸುಳ್ಳು. ಸರ್ಕಾರ ಎಂಬ ದಮನಕಾರಿ ಯಂತ್ರದ ಆವಶ್ಯಕತೆಯನ್ನೇ ಇಲ್ಲದಂತೆ ಮಾಡುವುದು ಎಡಪಂಥದ ಅಂತಿಮ ಗುರಿ. ಅಲ್ಲಿಯ ವರೆಗೆ, ಬಂಡವಾಳಶಾಹಿ ಪ್ರಜಾಪ್ರಭುತ್ವ ಜನತೆಗೆ ನೀಡುವ ಭರವಸೆಗಳನ್ನು ಸರ್ಕಾರ ಈಡೇರಿಸುವಂತೆ ಎಡಪಂಥ ಒತ್ತಾಯಿಸುತ್ತದೆ. ಅಲ್ಲಿಯವರೆಗೆ ಬಂಡವಾಶಶಾಹಿಗಳೂ ಇರ್ತಾರೆ, ಅವರು ದುಡಿಮೆಗಾರರ ಶೋಷಣೆ ಮಾಡಿ ಲಾಭ ಗಳಿಸುತ್ತಿರುತ್ತಾರೆ. ಶೋಷಣೆಯ ವಿರುದ್ಧದ ಹೋರಾಟವನ್ನು ಎಡಪಂಥ ಮುನ್ನಡೆಸುತ್ತಿರುತ್ತದೆ.

'ಎಡಪಂಥೀಯ ಸಿದ್ಧಾಂತದಿಂದ ಪ್ರಣೀತವಾದ ಆರ್ಥಿಕ ನೀತಿಗಳೇ ದೇಶದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಬೆಳೆದು ಅಭಿವೃದ್ಧಿ ಕುಂಠಿತವಾಗಲು ಕಾರಣವಾಗಿದೆ' ಎಂದು ಭೈರಪ್ಪ ಹೇಳಿರುವುದು ಸತ್ಯವನ್ನು ಮರೆಮಾಚುವ ಪ್ರಯತ್ನವಾಗಿದೆ. ನೆಹರೂ ಕಾಲದಿಂದ ಹಿಡಿದು ನರೇಂದ್ರ ಮೋದಿ ಕಾಲದ ವರೆಗೂ ಭಾರತದಲ್ಲಿ ಎಂದೂ ಎಡಪಂಥೀಯ ಸಿದ್ಧಾಂತ ಆಧಾರಿತ ಆರ್ಥಿಕ ನೀತಿಗಳನ್ನು ಅನುಸರಿಸಿದ್ದು ಇಲ್ಲ. ಇಂದಿರಾಗಾಂಧಿಯವರು ಬಂಡವಾಳಿಗರ ಮೇಲೆ ಹೆಚ್ಚು ತೆ–ರಿಗೆ ವಿಧಿಸಿದ್ದು ಒಂದು ಎಡಪಂಥೀಯ ಕ್ರಮವಲ್ಲ. ಎಲ್ಲ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಅದನ್ನೇ ಮಾಡುತ್ತಿರುತ್ತಾರೆ. ಭ್ರಷ್ಟಾಚಾರ ಎಂಬುದು ಬಂಡವಾಳಶಾಹಿ ಪದ್ಧತಿಯ ಒಂದು ಅವಿಭಾಜ್ಯ ಅಂಗ. ಅಕ್ರಮವಾಗಿ ಲಾಭಗಳಿಸುವ ಬಂಡವಾಳಶಾಹಿ ಪದ್ಧತಿ ಭ್ರಷ್ಟಾಚಾರವನ್ನೂ ಬೆಳೆಸುತ್ತದೆ. ವಿಶ್ವದ ದೊಡ್ಡ ದೊಡ್ಡ ಬಂಡವಾಳಶಾಹಿ ರಾಷ್ಟ್ರಗಳಲ್ಲೇ ಭ್ರಷ್ಟಾಚಾರದ ದೊಡ್ಡ ದೊಡ್ಡ ಹಗರಣಗಳು ನಡೆಯುತ್ತಿರುವುದನ್ನು ನಾವು ಕಾಣುತ್ತಿರುತ್ತೇವೆ. ಇಂದು ಭಾರತದಲ್ಲಿ ಭ್ರಷ್ಟಾಚಾರ ಹೆಚ್ಚಾಗಲು ಸರ್ಕಾರ ಬಂಡವಾಳಶಾಹಿಗಳಿಗೆ ಉದಾರವಾಗಿರಲು ಮುಂದಾದದ್ದೇ ಕಾರಣವಾಗಿದೆ. ದೇಶದ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳಲು ಹೊಂಚು ಹಾಕುತ್ತಿರುವ ದೊಡ್ಡ ಬಂಡವಾಳಿಗರು ಮತ್ತು ಅವರ ವಿದೇಶಿ ಸಹೋದ್ಯೋಗಿಗಳು ವೊಡ್ಡುತ್ತಿರುವ ಆಸೆ ಆಮಿಷಗಳಿಂದಾಗಿ ಇಂದು ದೇಶದಲ್ಲಿ ಭ್ರಷ್ಟಾಚಾರಕ್ಕೆ ಒಂದು ಸಾಂಸ್ಥಿಕ ರೂಪವೇ ಬಂದು ಬಿಟ್ಟಿದೆ. ಅದೇ ಉದಾರೀಕರಣದ ನೀತಿಗಳಿಗೆ ಬದ್ಧವಾಗಿರುವ ಮೋದಿ ಸರ್ಕಾರವೂ ಸಹ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕದು.

ಅರ್ಕಾವತಿ ಡೀನೋಟಿಫಿಕೇಷನ್: ಹೊರ ಬರದ ಸತ್ಯಗಳು

ಕೆಲವು ತಿಂಗಳುಗಳಿಂದ ಸಾರ್ವಜನಿಕರ ಗಮನದಿಂದ ನೇಪಥ್ಯಕ್ಕೆ ಸರಿದಿದೆಯೇನೋ ಎಂಬಂತಿದ್ದ ಕುಖ್ಯಾತ 'ಡೀ ನೋಟಿಫಿಕೇಷನ್' ವಿಷಯ ಮತ್ತೇ ಇದೀಗ ವಿವಾದದ ರಂಗ–ಕ್ಕೆ ಏರಿದೆ. ವಿಷಯ–ವಿವಾದ ಹೊಸದೇನಲ್ಲ, ಆದರೆ ಅದು ಕಾಲದಿಂದ ಕಾಲಕ್ಕೆ ರೆಕ್ಕೆ–ಪುಕ್ಕ ಹಚ್ಚಿಕೊಂಡು ಹೊಸ ವಿನ್ಯಾಸ ತಾಳಿ ವಿವಾದ, ಹಗರಣಗಳ ಬಿರುಗಾಳಿ ಎಬ್ಬಿಸುತ್ತಲೇ ಬಂದಿದೆ. ಆದರೆ ಪಾತ್ರಧಾರಿಗಳಷ್ಟೇ ಬದಲು, ಸೂತ್ರಧಾರಿಗಳು ಅವರೇ!



ಎಸ್.ವೈ.ಗುರುಶಾಂತ್

ನಾಗರೀಕರಿಗೆ ನಿವೇಶನ ನೀಡುವ ಹೆಸರಿನಲ್ಲಿ ಎಷ್ಟೆಲ್ಲಾ ವಂಚನೆಗಳ ನಾಟಕದ ಆಡಬಹುದು ಎಂಬುದಕ್ಕೆ ಒಂದು ಜ್ವಲಂತ ಉದಾಹರಣೆ ಬೆಂಗಳೂರಿನ ಈ ಅರ್ಕಾವತಿ ಬಡಾವಣೆ ! ದಶಕದ ಹಿಂದೆ ಹಣ ಕಟ್ಟಿ ಅರ್ಕಾವತಿ ಬಡಾಣೆಯಲ್ಲಿ ಬಿ.ಡಿ.ಎ. ನಿವೇಶನಕ್ಕೆ ಕಾದು ಕುಳಿತ ಸಾವಿರಾರು ನಾಗರೀಕರ ಕನಸಿಗೆ ದಶಕವೇ ಸರಿದಿದೆ. ಆದರೆ ಅವರಿಗೆ ನಿವೇಶನ ಎಂಬುದು 'ಕುದುರೆಯ ಮುಂದೆ ಕಟ್ಟಿದ ಹುಲ್ಲು' ಎಂಬಂತಾಗಿದೆ. ಹಾಗೆಯೇ ಕೆಲವರಿಗೆ ಆ ಹೆಸರಿನಲ್ಲಿ ಭರಪೂರ ಮೇಯುವ ಹಸಿರು ಹುಲ್ಲೂ ಆಗಿದೆ.

ಕರ್ನಾಟಕದಲ್ಲಿ ಭೂ ಡೀ–ನೋಟಿಪಿಕೇಷನ್ ಹಗರಣಗಳು ಎಂಬುದು ಅಪರಿಚಿತವೇನಲ್ಲ. ಬಹುಶಃ ಡೀ–ನೋಟಿಫಿಕೇಷನ್ ಎಂಬ ಒಂದು ಅವಕಾಶವನ್ನೇ ಬಳಸಿ ಏನೆಲ್ಲಾ ಮಾಡಬಹುದು, ಎಷ್ಟೆಲ್ಲಾ ದೋಚಬಹುದು ಎಂಬುದರಲ್ಲಿ ಜಗತ್ತಿಗೆ ಹೇಳಿಕೊಡಬಹುದಾದಷ್ಟು ಪರಿಣಿತಿ ಕರ್ನಾಟಕದಲ್ಲಿ ಅಧಿಕಾರ ನಡೆಸಿದ ಬಹುತೇಕ ಪಕ್ಷಗಳ ರಾಜಕೀಯ ನಾಯಕರಿಗೆ, ಅಧಿಕಾರಶಾಹಿಗಳಿಗೆ ಇದೆ ಎಂದರೆ ತಪ್ಪಾಗಲಾರದು.

ಮಾನ್ಯ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಪರಪ್ಪನ ಅಗ್ರಹಾರ ಜೈಲಿಗೆ ಹೋಗಿ ಬಂದ ಘಟನೆಯನ್ನು ಸ್ವಲ್ಪ ನೆನಪಿಸಿಕೊಳ್ಳಿ. (ಇದನ್ನು ಜನ ನಿಧಾನವಾಗಿ ಮರೆಯುತ್ತಿದ್ದಾರಲ್ಲಾ!) ಅದಕ್ಕೆ ಕಾರಣವಾದ ಒಂದು ಪ್ರಕರಣ ಅರ್ಕಾವತಿ ಬಡಾವಣೆ ಡಿ–ನೋಟಿಫೈ ಹಗರಣ ಅಲ್ಲವೇ.

ಇದೀಗ ಅವರ ಪಕ್ಷದವರೇ ಹಾಲಿ ಮುಖ್ಯಮಂತ್ರಿ, ಅಧಿಕಾರದಲ್ಲಿರುವ ಕಾಂಗ್ರೆಸ್ ರಾಜ್ಯ ಸರಕಾರದ ವಿರುದ್ಧ ಹಗರಣದ ಆರೋಪ ಮಾಡುತ್ತಿದ್ದಾರೆ. ಅದೇ ಅರ್ಕಾವತಿ ಬಡಾವಣೆಯ ಲೇಔಟ್ ನ ಜಮೀನು ಡೀ–ನೋಟಿಫಿಕೇಷನ್ ವ್ಯವಹಾರದಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ ಎಂದೂ ಆರೋಪಿಸಿ ಸಿದ್ದು ರಾಜಿನಾಮೆಗಾಗಿ ಚಳುವಳಿಯನ್ನೂ ನಡೆಸಲಾಗುತ್ತಿದೆ. ರಾಜೀನಾಮೆ ಪಡೆಯುವವರೆಗೂ ಬಿಡಬಾರದೆಂದು ಹೊಸ ಅಧ್ಯಕ್ಷ ಅಮಿತ್ ಷಾ ಹೇಳಿ ಬಿಟ್ಟಿದ್ದಾರಂತೆ! (ಏನನ್ನಾದರೂ ಪಡೆಯದೇ ಇವರ ಚಳುವಳಿ ನಿಲ್ಲುವುದಾದರೂ ಹೇಗೆ?) ಹಾಗಾಗಿ ಇದೇ ಆಗಸ್ಟ್ 8ರಿಂದ ಬಿಜೆಪಿಯದ್ದು ಒಂದೇ ವರಾತದ ಚಳುವಳಿ!

ಈ ಅರ್ಕಾವತಿ ಬಡಾವಣೆಯ ಒಟ್ಟು ವಿದ್ಯಾಮಾನಗಳನ್ನು ಪರಿಶೀಲಿಸಿದರೆ ಆರಂಭದ ದಿನಗಳಿಂದಲೂ ಒಂದಿಲ್ಲ ಒಂದು ವಿವಾದ, ಗೊಂದಲ–ಗೋಜಲುಗಳ ಪ್ರಕರಣದಿಂದ ಹೊರತಾಗಿಲ್ಲ. ನಾಡಿನ ವಸತಿಹೀನ ನಾಗರೀಕರಿಗೆ ಮುಖ್ಯವಾಗಿ ಬೆಂಗಳೂರಿಗರಿಗೆ 22,000 ನಿವೇಶನ ನೀಡುವ ಮಹತ್ವಾಕಾಂಕ್ಷೆ ಅರ್ಕಾವತಿ ಯೋಜನೆಯೊಂದನ್ನು ಬಿ.ಡಿ.ಎ ಪ್ರಕಟಿಸಿ 2003 ಸೆಪ್ಟಂಬರ್ ನಲ್ಲಿ 3839 ಎಕರೆ ಜಮೀನನ್ನು ರೈತರಿಂದ ಸ್ವಾಧೀನ ಪಡಿಸಿಕೊಂಡಿತು. ಈ ಭೂಸ್ವಾಧೀನದ ಬಗ್ಗೆ ಸಾಕಷ್ಟು ಆಕ್ಷೇಪಗಳು ವ್ಯಕ್ತಗೊಂಡು ನ್ಯಾಯಾಲಯವು (ಸುಪ್ರಿಂ ಕೋರ್ಟ್‌ಗೂ ಹೋಗಿ) ಬಂದ ಅಹವಾಲುಗಳ ಆಧಾರದಲ್ಲಿ ಆರು ಮಾರ್ಗದರ್ಶಕ ಅಂಶಗಳ ಆಧಾರದಲ್ಲಿ ಪ್ರಕರಣಗಳನ್ನು ಇತ್ಯರ್ಥ ಮಾಡುವಂತೆ ನಿರ್ದೇಶಿಸಿತು.(ಹಸಿರು ವಲಯ, ನರ್ಸರಿ, ಕಾರ್ಖಾನೆ, ಶಾಲೆ ಇತ್ಯಾದಿ ಕಟ್ಟಡಗಳು, ದತ್ತಿ, ಧಾರ್ಮಿಕ ಉದ್ದೇಶಗಳು) ಅದರಂತೆ 1089 ಎಕರೆ ಜಮೀನನ್ನು ಹಲವು ಹಂತಗಳಲ್ಲಿ ಸರಕಾರಗಳು ಡೀ–ನೋಟಿಫೈ ಮಾಡಿದವು. (ಯಡಿಯೂರಪ್ಪನವರ ಸರಕಾರ ಮಾಡಿದ್ದ ಒಂದು ಪ್ರಕರಣ 198 ಎಕರೆ.) ವಿವಾದ ಇಲ್ಲಿಗೆ ನಿಲ್ಲದೇ ಮುಂದುವರಿದಿದ್ದರಿಂದ ಮತ್ತಷ್ಟು ಜಮೀನನ್ನು ಡೀ–ನೋಟಿಫೈ ಮಾಡಲು ಸರಕಾರಗಳು ಮುಂದಾಗಿವೆ. ಈ ಅವಧಿಯಲ್ಲಿ ಎಸ್.ಎಂ.ಕೃಷ್ಣ, ಧರಂಸಿಂಗ್ , ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಸದಾನಂದಗೌಡ, ಜಗದೀಶ್ ಶೆಟ್ಟರ್, ಸರಕಾರಗಳು ಅಧಿಕಾರ ನಡೆಸಿವೆ ಎಂಬುದನ್ನೂ, ಈ ಕಾಲಾವಧಿಯಲ್ಲಿ ಗಣಿ ಹಾಗೂ ಭೂಮಾಫಿಯಾಗಳದ್ದೇ ಅಧಿಕಾರ ನಡೆಯುತ್ತಿತ್ತು ಹತ್ತಾರು ಭಾರೀ ಹಗರಣಗಳು ನಡೆದವು ಎಂಬುದನ್ನೂ ನೆನಪಿಸಿಕೊಳ್ಳಬೇಕು.

ಇದೀಗ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರಕಾರವಿರುವಾಗ ಡೀ–ನೋಟಿಫಿಕೇಷನ್ ಪ್ರಕ್ರಿಯೆ ಮುಂದುವರಿದು ಸಿದ್ದರಾಮಯ್ಯನವರ ಸರಕಾರ ಪರಿಷ್ಕೃತ ಯೋಜನೆಯ ಹೆಸರಿನಲ್ಲಿ ಮತ್ತೇ 541.34 ಎಕರೆಯನ್ನು ಡೀ–ನೋಟಿಫೈ ಮಾಡಿದೆ.

ಈಗ ಬಿಜೆಪಿ ಪಕ್ಷದ–ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್‌ರವರ ತಕರಾರು

ಪುಟ 4 ಕ್ಕೆ





'ತ್ಯಾಗ ಮತ್ತು ಹೋರಾಟದಿಂದ ಕಟ್ಟಿದ ಸಂಘಟನೆಯನ್ನು ವಿಸ್ತರಿಸಿ' –ಆಟೋ ರಿಕ್ಷಾಚಾಲಕರ ಸಂಘದ ಬೆಂ.ದಕ್ಷಿಣ ವಲಯ ಸಮ್ಮೇಳನದಲ್ಲಿ ಕೆ.ಎನ್. ಉಮೇಶ್ ಕರೆ

ಎಂತಹ ಉಸಿರುಗಟ್ಟಿಸುವ ಉದ್ಯೋಗದ ಪರಿಸ್ಥಿತಿ ಮತ್ತು ಒತ್ತಡಗಳಿದ್ದರೂ ಸಹ ಐಟಿ–ಬಿಟಿ ಎನ್ನಲಾಗುವ ಮಾಹಿತಿ ತಂತ್ರಜ್ಞಾನ ಕ್ಷೇತ್ರ–ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ನಡುವೆ ತಮ್ಮ ಸಂವಿಧಾನ ಬದ್ದ ಪ್ರಜಾಸತ್ತಾತ್ಮಕ ಹಕ್ಕುಗಳ ಬಗೆಗೆ ಎಷ್ಟು ಅರಿವಿದೆ ಎಂಬ ಪ್ರಶ್ನೆ ಕುತೂಹಲಕಾರಿಯಾದುದು. ಆ ಕ್ಷೇತ್ರದಲ್ಲಿ ಉದ್ಯೋಗಿಗಳ ಹಕ್ಕು ಚಲಾವಣೆಗೆ ಎಷ್ಟು ಅವಕಾಶವಿದೆ ಎಂಬುದು ಬೇರೆ ವಿಷಯ. ಉನ್ನತ ವಿಶ್ವವಿದ್ಯಾಲಯ ಕೇಂದ್ರಗಳಲ್ಲಿ ಪದವಿ ಪಡೆದ ಪದವೀಧರರು, ಸ್ನಾತ–ಕೋತ್ತರ ಪದವೀಧರರು ಸಹ ಇಂದು ಆಟೋ ಚಾಲಕರಾಗಿ ದುಡಿಯುತ್ತಿರುವ ಸನ್ನಿವೇಶ ಇದ್ದರೂ ಕೂಡ ಆಟೋ ಚಾಲಕರ ನಡುವೆ ಉನ್ನತ ಶಿಕ್ಷಣ ಪಡೆಯಲಾರದವರೆ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಸಹಜ. ಆದರೆ ಈ ಆಟೋ ಚಾಲಕರ ನಡುವೆ ಇರುವ ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳ ಪ್ರಜ್ಞೆಯನ್ನು ಎಲ್ಲರೂ ಮೆಚ್ಚಬೇಕಾದದ್ದು. ಆಟೋ ಚಾಲಕರ ನಡುವೆ ಇಂತಹ ಪ್ರಜಾಸತ್ತಾತ್ಮಕ ಪ್ರಜ್ಞೆ ಮೂಡಿಸುವ ನಿಟ್ಟಿನಲ್ಲಿ ಸಿಐಟಿಯು ಸಂಘಟನೆಯು ಸುದೀರ್ಘ ಕಾಲದಿಂದ ಶ್ರಮಿಸುತ್ತ ಬರುತ್ತಿದೆ. ಇದೇ ಪರಂಪರೆಯ ಭಾಗವಾಗಿ ಆಟೋ ರಿಕ್ಷಾಚಾಲಕರ ಸಂಘ(ಸಿಐಟಿಯು) ದ ಬೆಂಗಳೂರು ದಕ್ಷಿಣ ವಲಯ 2014–15 ನೇ ಸಾಲಿನ ಸರ್ವಸದಸ್ಯರ ಸಭೆಯು ಜುಲೈ 20, 2014 ರಂದು ಬೆಂಗಳೂರಿನ ಬಸವನ ಗುಡಿ ಪ್ರದೇಶದ ಜ್ಯೋತಿಬಸು ಭವನದಲ್ಲಿ ನಡೆಯಿತು. ಆಟೋ ಚಾಲಕರ ಸಮಸ್ಯೆಗಳ ಕುರಿತು, ಸಮಸ್ಯೆಗಳ ಪರಿಹಾರದ ದೃಷ್ಟಿಯಿಂದ ನಡೆಸಬೇಕಾದ ಹೋರಾಟದ ದಾರಿಯ ಕುರಿತು ಪ್ರಜಾಸತ್ತಾತ್ಮಕವಾದ ಚರ್ಚೆಗಳು ನಡೆದವು. ಈ ಸಭೆಯಲ್ಲಿ 2014 ರ ಸಾಲಿನಲ್ಲಿ 5,000 ಸದಸ್ಯತ್ವವನ್ನು ನೋಂದಾಯಿಸುವ ಗುರಿಯನ್ನು ತೀರ್ಮಾನಿಸಲಾಯಿತು. ಸ್ವತಂತ್ರ ಮತ್ತು ಮುಕ್ತ ವಾತಾವರಣದಲ್ಲಿ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಪದಾಧಿಕಾರಿಗಳ ವಿವರ ಹೀಗಿದೆ.

ಅಧ್ಯಕ್ಷರು : ಬಿ.ಎನ್.ರಘು,
ಉಪಾಧ್ಯಕ್ಷರು : ಗೋವಿಂದಪ್ಪ,
ಪ್ರಧಾನ ಕಾರ್ಯದರ್ಶಿ: ಎನ್.ಶ್ರೀನಿವಾಸ್,
ಜಂಟಿ ಕಾರ್ಯದರ್ಶಿ: ಸುಬ್ರಮಣಿ ರಾವ್,
ಸಂಘಟನಾ ಕಾರ್ಯದರ್ಶಿ: ಲಕ್ಷ್ಮೀಕಾಂತ್,
ಸಹಾಕಾರ್ಯದರ್ಶಿಗಳು: ಟಿ.ಎನ್.ಮಂಜುನಾಥ್,
ಖಂಜಾಜಿಯಾಗಿ : ಬಸವರಾಜ್,

ಇವರನ್ನು ಒಳಗೊಂಡಂತೆ ಶಾಖೆಗಳ ಪದಾಧಿಕಾರಿಗಳನ್ನು ಕಾರ್ಯಕಾರಿ ಸಮಿತಿಗೆ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

'ತ್ಯಾಗ–ಹೋರಾಟದಿಂದ ಕಟ್ಟಿದ ಸಂಘಟನೆಯನ್ನು ವಿಸ್ತರಿಸಿ'
– ಕೆ.ಎನ್. ಉಮೇಶ್ ಕರೆ



ಸಮ್ಮೇಳನವನ್ನು ಉದ್ಘಾಟನೆ ಮಾಡಿ ಮಾತನಾಡಿದ ಸಿಐಟಿಯುನ ಬೆಂಗಳೂರು ದಕ್ಷಿಣ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್. ಉಮೇಶ್, ಆಟೋ ಚಾಲಕರ ಸಂಘವು ನಡೆದು ಬಂದ ಸುದೀರ್ಘ ಹೋರಾಟದ ದಾರಿಯನ್ನು ನೆನಪಿಸಿದರು. ಸಂಘಟನೆಯನ್ನು ವಿಸ್ತಾರಗೊಳಿಸಿ ಸದಸ್ಯತ್ವವನ್ನು ಹೆಚ್ಚಿಸುವುದರ ಅಗತ್ಯದ ಬಗೆಗೆ ಅವರು ಚಾಲಕರ ಗಮನ ಸೆಳೆದರು. ಈ ಸಮ್ಮೇಳನದಲ್ಲಿ ಹಲವಾರು ನಿರ್ಣಯಗಳನ್ನು ಅಂಗೀಕರಿಸಲಾಯಿತು.



ಆಟೋ ಚಾಲಕರಿಗೆ ಬಿಪಿಎಲ್ ಕಾರ್ಡ್ ನೀಡಲು ಆಗ್ರಹಿಸಿ ಪ್ರತಿಭಟನೆ

ಬಿಪಿಎಲ್ ಆಟೋ ಚಾಲಕರು ಅಸಂಘಟಿತರು. ಪೆಟ್ರೋಲ್, ಡಿಸೇಲ್, ಗ್ಯಾಸ್ ದರಗಳಲ್ಲಿ ನಿರಂತರ ಬೆಲೆ ಏರಿಕೆಯಿಂದ ಮತ್ತು ಅವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಇವರಿಗೆ, ಬಡತನ ರೇಖೆಯಡಿಯಲ್ಲಿರುವರಿಗೆ ನೀಡಲಾಗುವ ಬಿಪಿಎಲ್ ಪಡಿತರ ಚೀಟಿಯನ್ನು ಕೊಡಬೇಕಾದದ್ದು ಅತ್ಯಂತ ಅವಶ್ಯಕ. ಅಮಾನವೀಯವಾದ ಮಾನದಂಡಗಳನ್ನು ತೋರಿಸಿ ಆಟೋ ಚಾಲಕರಿಗೆ ಬಿಪಿಎಲ್ ಕಾರ್ಡ್ ನಿರಾಕರಿಸುವುದು ಒಂದು ಕ್ರೂರ ನೀತಿ. ಈ ಸಂಬಂಧವಾಗಿ ಬಿಪಿಎಲ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿ ನೊಂದಾಯಿಸಿದಂತಹ ಎಲ್ಲರಿಗೂ ಈ ಕೂಡಲೇ ಬಿಪಿಎಲ್ ಕಾರ್ಡ್ ನೀಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಬೇಕೆಂದು ಸಮ್ಮೇಳನವು ನಿರ್ಣಯ ಅಂಗೀಕರಿಸಿತ್ತು. ಅದರಂತೆ ಬೆಂಗಳೂರಿನ ಚಾಮರಾಜಪೇಟೆಯ ದಕ್ಷಿಣ ವಲಯ ಆಹಾರ ನಿಗಮದ ಕಛೇರಿ ಮುಂದೆ ಜುಲೈ 26, 2014 ರಂದು ಹೋರಾಟವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಸಂಬಂಧಪಟ್ಟ ಉಪನಿರ್ದೇಶಕರಿಗೆ ಮನವಿಯನ್ನು ನೀಡಲಾಯಿತು. ಈ ಹೋರಾಟದ ನೇತೃತ್ವವನ್ನು ಸಂಘದ ಅಧ್ಯಕ್ಷರಾದ ಬಿ.ಎನ್.ರಘುರವರು ವಹಿಸಿಕೊಂಡಿದ್ದರು. ವಲಯ ಪದಾಧಿಕಾರಿಗಳು ಎಲ್ಲರೂ ಉಪಸ್ಥಿತಿಯಿದ್ದರು. ಶಾಖೆಯ ಮುಖಂಡರು ಮತ್ತು ನೂರಾರು ಸದಸ್ಯರು ಭಾಗವಹಿಸಿದ್ದರು. ಸಮ್ಮೇಳನದ ಒಂದು ಮುಖ್ಯ ತೀರ್ಮಾನವು ಉತ್ಸಾಹದಿಂದ ಜಾರಿಯಾಯಿತು.

–ಬಿ.ಎನ್.ರಘು

ಈ ವಾರ..........

ಪುಟ 3 ರಿಂದ

ಏನೆಂದರೆ ಅವರ ಅವಧಿಯಲ್ಲಿ 422.25 ಎಕರೆ ಜಮೀನನ್ನು 'ಡೀ' ಮಾಡಲು ಸಿದ್ಧಗೊಂಡ ವರದಿಯಿತ್ತು, ಆದರೆ ಸಿದ್ಧರಾಮಯ್ಯನವರ ಸರಕಾರ 541.34 ಎಕರೆ ಮಾಡಲು ಪರಿಷ್ಕೃತ ಯೋಜನೆಯ ಮೂಲಕ ಮುಂದಾಗಿರುವುದು ಹೇಗೆ? ಎಂಬುದಾಗಿದೆ. ಅಂದರೆ ಸಿದ್ದು 119.09 ಎಕರೆಯನ್ನು ಸೇರಿಸಿ ಮಾಡಿದ್ದೇಗೆ ಎಂದು, ಆದರೆ ಡೀ–ನೋಟಿಫಿಕೇಷನ್ ವ್ಯವಹಾರಕ್ಕೆ ವಿರೋಧವಿಲ್ಲವೆಂದೂ ಬಿ.ಜೆಪಿ. ನಾಯಕರ ಮಾತುಗಳಿಂದ ತಿಳಿಯಬಹುದಾಗಿದೆ. ಈ ವಿಷಯದಲ್ಲಿ ಪರಸ್ಪರರು ದೋಷಾರೋಪ, ವಾಗ್ವಾದಗಳಲ್ಲಿ ತೊಡಗಿದ್ದಾರೆ ಹೊರತು ನಿಜವಾದ ಕಾರಣಗಳೇನು? ಸತ್ಯವೇನಿದೆ ಎಂಬುದನ್ನು ಜನರಿಗೆ ತಿಳಿಸುತ್ತಿಲ್ಲ!

ಮುಖ್ಯವಾಗಿ ಈ ಎಲ್ಲಾ ಡೀ–ನೋಟಿಫಿಕೇಷನ್ ಪ್ರಕ್ರಿಯೆಯಲ್ಲಿ ಸುಪ್ರಿಂಕೋರ್ಟ್‌ನ ಆದೇಶವನ್ನು ಹೇಗೆ ಜಾರಿಗೊಳಿಸಲಾಗುತ್ತಿದೆ ಎಂಬುದು, ಕೇಸ್‌ವಾರಾಗಿ ಹೇಗೆ ಪರಿಗಣಿಸಲಾಗಿದೆ ಎಂಬುದರ ವಿವರಗಳು ಸಾರ್ವನಿಕವಾಗಿ ಬಹಿರಂಗವಾಗಬೇಕಿದೆ. ಇಲ್ಲವಾದಲ್ಲಿ ನ್ಯಾಯಾಲಯದ ಆದೇಶವನ್ನೇ ನೆಪವಾಗಿರಿಸಿ ಅದು ಹೇಳಿದ ಒಂದೊಂದು ಅಂಶವನ್ನೇ ತಮಗೆ ಅನುಕೂಲವಾಗುವಂತೆ ಬಳಸಿರಬಹುದಾದ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ. ಉದಾಹರಣೆಗೆ 'ನರ್ಸರಿ' ಎಂಬುದು ಯಾವಾಗ ಬೇಕಾದರೂ ರೆಕಾರ್ಡ್‌ನಲ್ಲಿ ಚಿಗುರಬಹುದು. ಈಗಾಗಲೇ ಈ ಪ್ರದೇಶ ಸಾಕಷ್ಟು ಅಭಿವೃದ್ಧಿ ಹೊಂದಿ ವಾಣಿಜ್ಯ ಬೆಲೆ ಹೆಚ್ಚಾಗಿರುವಾಗ, ಬೇಡಿಕೆಯೂ ಬಂದಿರುವಾಗ ಎಳೆ ಕೊಟ್ಟರೆ ಹಚ್ಚಡ ನುಂಗುವ ಇಂತಹ ಕರಾತಾಲಮಲಕದಲ್ಲಿ ಭೂ ಮಾಫಿಯಾಗಳು ಸಿದ್ಧ ಹಸ್ತರು ಎಂಬುದನ್ನು ಬೇರೆ ಹೇಳಬೇಕಿಲ್ಲ. 'ಡೀ' ಆದ ಭೂಮಿ ನಿಜಕ್ಕೂ ಆ ರೈತನಿಗೇ ಹೋಗಲಿದೆಯೇ? ಅಥವಾ ಹಿಂದೆ ನಿಂತಿರುವ ಭೂ ಮಾಫಿಯಾಗಳ ವಶಕ್ಕೆ ಸಿಗುವುದೇ? ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಈ ಗ್ಯಾಂಗ್‌ಗಳಿಂದ ಮುಕ್ತವೇ?

ಏಕೆಂದರೆ ಹಿಂದೆಲ್ಲಾ ಮೊದಲು ನೋಟಿಫೈ ಮಾಡುವುದು, ಬೆದರಿಸುವುದು, ನಂತರ 'ಡೀಲ್' ಮಾಡಿಕೊಂಡು ಡೀ–ನೋಟಿಫೈ ಮಾಡುವುದು ಎಗ್ಗಿಲ್ಲದೇ ನಡೆದಿವೆ. ಅಧಿಕಾರಕ್ಕೆ ಬಂದ ಬಹುತೇಕರು ಈ ದಂಧೆಯಲ್ಲಿ ಮಿಂದು ಎದ್ದವರೇ, ಸರಕಾರಗಳನ್ನು ಉರುಳಿಸಿದವರೇ, ಸರಕಾರ ರಚಿಸಿದವರೇ.

ನಮ್ಮಲ್ಲಿ ಏಳುವ ಪ್ರಶ್ನೆ ಎಂದರೆ ಈ ಕಾಂಗ್ರೆಸ್ ವಿಶೇಷವಾಗಿ ಗಣಿ–ಭೂ ಹಗರಣಗಳ ವಿರುದ್ಧ ಮಾತನಾಡಿಕೊಂಡು ಬಂದ ಸಿದ್ಧರಾಮಯ್ಯನವರೇ ಅಧಿಕಾರದಲ್ಲಿರುವಾಗ ಈ ಡೀನೋಟಿಫಿಕೇಷನ್ ವಿವಾದ ರಹಿತವಾಗಿರಬೇಕಿತ್ತಲ್ಲ, ಯಾಕೆ ಅಗಲಿಲ್ಲ. ಇದು ವಿರೋಧ ಪಕ್ಷದ ಹುನ್ನಾರ, ಅನಗತ್ಯ ಆರೋಪ ಎಂದು ಹೇಳುವುದಾದರೆ ವಾಸ್ತವಗಳನ್ನು ಯಾಕೆ ಬಹಿರಂಗಗೊಳಿಸಬಾರದು? ಪಾರದರ್ಶಕವಾಗಿರಬಾರದು.

ಈಗಂತೂ ಈ ಪ್ರಕರಣವನ್ನು ಬಿಜೆಪಿಯು ಸಿ.ಬಿ.ಐ ತನಿಖೆಗೆ ಒಪ್ಪಿಸಬೇಕೆಂದು ಕೇಳುತ್ತಿದೆ. ಹಿಂದೆ ಸಿ.ಬಿ.ಐ ಅಂದರೆ ಕೇಂದ್ರದ ಕೈಗೊಂಬೆ, ಸಾಕು ನಾಯಿ ಎಂದೆಲ್ಲಾ ಗಂಟಲು ಹರಿದುಕೊಳ್ಳುತ್ತಿದ್ದ ಅದಕ್ಕೆ ಈಗ ಆ ನಾಯಿಯೇ ಬೇಕು ಎನ್ನುವುದು ಯಾಕೆ? ಯಾಕೆಂದರೆ ಅವರೇ ಅಲ್ಲಿ ಅಧಿಕಾರದಲ್ಲಿದ್ದಾರಲ್ಲಾ. ಕಾಂಗ್ರೆಸ್ ಈಗ ಸಿ.ಓ.ಡಿ ತನಿಖೆಗೆ ಸಿದ್ಧ ಎಂಬುದೂ ಬಿಜೆಪಿಗಿಂತ ಭಿನ್ನ ಬಯಕೆ ಎಂದೇನಲ್ಲ. ಇಬ್ಬರೂ ತಮ್ಮ ಅಡಿಯಲ್ಲಿರುವ ತನಿಖಾ ಸಂಸ್ಥೆಗಳಿಂದಲೇ ವರದಿ ತರಿಸಿಕೊಂಡು 'ಸತ್ಯವಂತರಾಗಬೇಕು, ಬೇಳೆ ಬೇಯಿಸಿಕೊಳ್ಳಬೇಕು' ಎಂದೇ ಬಯಸುತ್ತಿದ್ದಾರೆ ಅಷ್ಟೇ. ಈಗೇನೋ ನಿವೃತ್ತ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಲು ಸಿದ್ಧವೆಂದು ಸರಕಾರ ಹೇಳುತ್ತಿದೆ.

ಲೋಕಸಭಾ ಚುನಾವಣಾ ಫಲಿತಾಂಶದ ಬಳಿಕ ರಾಜ್ಯದಲ್ಲಿ ಬಿಜೆಪಿಯ ಹಾರಾಟ ಆಕ್ರಮಣಕಾರಿಯಾಗಿ ಬದಲಾಗಿದೆ. ಕಾಂಗ್ರೆಸ್ ಸರಕಾರದ ಪ್ರತಿಯೊಂದು ವಿಷಯ, ವೈಫಲ್ಯಗಳನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದೆ. ವಿಶೇಷವಾಗಿ ಕಾಂಗ್ರೆಸ್‌ನಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಆಂತರಿಕ ಭಿನ್ನಮತ, ಬಲಗೊಳ್ಳುತ್ತಿರುವ ಗುಂಪುಗಾರಿಕೆ, ಅಧಿಕಾರ ಲಾಲಸೆಗಳನ್ನು ಅತ್ಯಂತ ವ್ಯವಸ್ಥಿತವಾಗಿ ಬಳಸಿಕೊಳ್ಳಲು ಮುಂದಾಗುತ್ತಿದೆ. ಅರ್ಕಾವತಿ ಪರಿಷ್ಕೃತ 'ಡೀ' ವ್ಯವಹಾರದಲ್ಲೂ ಸಿದ್ದುಗೆ ಗುದ್ದು ಕೊಡಲು ಹೊರಟಿದೆ. ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು(?) ಸಿದ್ದು ಏಕಪಕ್ಷೀಯವಾಗಿ ನಡೆದುಕೊಂಡಿದ್ದಾರೆಂದು ಹೈಕಮಾಂಡ್‌ಗೆ ದೂರು ನೀಡಲು ಪತ್ರ ಸಿದ್ಧಗೊಳಿಸುತ್ತಿದ್ದಾರಂತೆ. (ಬಿಜೆಪಿಯವರು ಉತ್ತಮ ಕರಡು ತಯಾರಿಸಿ ಕೊಡಬಹುದು) ಪಕ್ಷದ ರಾಜ್ಯಾಧ್ಯಕ್ಷರೂ ಹುಟ್ಟು ಹಬ್ಬ ಆಚರಿಸಿಕೊಂಡು ಹೆಚ್ಚಿನ ಬಲ ಪಡೆದಿರುವಾಗ ವಿದ್ಯಾಮಾನಗಳು ಹೇಗೆ ಸಾಗಬಹುದು, ಹೈಕಮಾಂಡ್ ಯಾವ ಉತ್ತರದಿಂದ ಹೇಗೆ ತೃಪ್ತಗೊಳ್ಳಬಹುದು ಎಂದು ನೋಡಬೇಕು. ಇಲ್ಲಿ ಬಿಜೆಪಿಯ ನಡೆಯೂ ರಾಜಕೀಯ ಬೆಳವಣಿಗೆಯ ಮೇಲೆ ಪರಿಣಾಮ ಬೀರುವಲ್ಲಿ ಮುಖ್ಯವೂ ಇದೆ. ಇಲ್ಲಿ ಸತ್ಯ, ನ್ಯಾಯಕ್ಕಿಂತ ರಾಜಕೀಯ ಮೇಲಾಟಗಳೇ, ಹೊಂದಾಣಿಕೆ, ಒತ್ತಡಗಳೇ ಪ್ರಧಾನವಾಗಿ ಕಾಣುತ್ತವೆ.

ಆದರೆ ಈಗಾಲೇ ಲಕ್ಷಾಂತರ ರೂಪಾಯಿಗಳನ್ನು ಸಾಲ ಸೋಲ ಮಾಡಿ ಹಣ ತುಂಬ ಸೈಟಿಗಾಗಿ ಕಾದಿರುವ 'ಅರ್ಹ ಫಲಾನುಭವಿಗಳು' ಇಂತಹ ವಿವಾದಗಳು, ತನಿಖೆಯ ಕ್ರಮಗಳು ತಮ್ಮನ್ನು ಹೀಗೆ ಶಾಶ್ವತವಾಗಿ ಕಾಯಿಸುವ, ನರಳಿಸುವ ಹಂಚಿಕೆ ಎಂದು ತಮ್ಮ ಆಶೆ ಕರಗುತ್ತಿದೆ–ಯೆಂದು ನೊಂದು ನುಡಿದಿದ್ದಾರೆ. ಮತ್ತೊಂದಡೆ ಒಪ್ಪಂದಂತೆ ರೈತರಿಗೆ ಅಭಿವೃದ್ಧಿ ಪಡಿಸಿದ ನಿವೇಶನಗಳಲ್ಲಿ ಪಾಲು ಸಿಗಬೇಕಿದೆ. ಕುಗ್ಗಿದ ಭೂಮಿ ಲಭ್ಯತೆಯಿಂದ ಅರ್ಹರಿಗೂ ಪೂರ್ಣವಾಗಿ ಹಂಚಲು ನಿವೇಶನಗಳಂತೂ ಅಲ್ಲಿ ಇಲ್ಲವಾಗಿದೆ. ಹಾಗೆಯೇ ಜಮೀನು ಇಲ್ಲದೇ, ನ್ಯಾಯವೂ ಸಿಗದೇ ಪರದಾಡುವ ರೈತರನ್ನು ಕೇಳುವವರಾರು? ●

ಕೃಷಿ ಅನುದಾನ 18,000 ದಿಂದ 11,500 ಕೋಟಿ ರೂ.ಗೆ ಕಡಿತ – ಮೋದಿ ಸರ್ಕಾರದ 'ಅಚ್ಚೇ ದಿನ್' ಎಲ್ಲಿ ????

ಪ್ರಾಂತ ರೈತ ಸಂಘದ ರಾಜ್ಯ ಮಟ್ಟದ ಅಧ್ಯಯನ ಶಿಬಿರದಲ್ಲಿ ಕೆ. ವರದರಾಜನ್ ಪ್ರಶ್ನೆ



ಎಚ್.ಆರ್. ನವೀನ್‌ಕುಮಾರ್

"ಬಾರೀ ನಿರೀಕ್ಷೆಗಳನ್ನು ಹುಟ್ಟುಹಾಕಿದ ಕೇಂದ್ರ ಸರ್ಕಾರದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಕಿಂಚಿತ್ತೂ ರೈತ ಪರ ಕಾಳಜಿ ಇಲ್ಲ" ಎಂದು ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಕೆ. ವರದರಾಜನ್ ಕಟುವಾಗಿ ಟೀಕಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು, ಗುಲ್ಬರ್ಗಾದ ಕೆಇಬಿ ನೌಕರರ ಕಲ್ಯಾಣ ಮಂಟಪದಲ್ಲಿ ಆಗಸ್ಟ್ 04 ರಿಂದ 07, 2014 ರವರೆಗೆ ಸಂಘಟಿಸಿದ ರಾಜ್ಯ ಮಟ್ಟದ ಅಧ್ಯಯನ ಶಿಬಿರದ ಅಂಗವಾಗಿ ಆಗಸ್ಟ್ 04 ರಂದು ಏರ್ಪಡಿಸಲಾಗಿದ್ದ –'ಬಹುರಾಷ್ಟ್ರೀಯ ಕಂಪನಿ ಕೃಷಿ'ಯನ್ನು ವಿರೋಧಿಸಿ, 'ರೈತ–ಕೂಲಿಕಾರರ ಕೃಷಿ'ಯನ್ನು ಸಂರಕ್ಷಿಸಿ" ಎನ್ನುವ ಘೋಷಣೆಯಡಿಯಲ್ಲಿ ನಡೆಸಲಾದ, 'ಕೃಷಿ ಉತ್ಪನ್ನದ ಬೆಲೆ ಕುಸಿತದ ಕಾರಣಗಳು ಮತ್ತು ಪರಿಹಾರಗಳು' ಎಂಬ ವಿಚಾರ ಸಂಕಿರಣವನ್ನು ಉಧ್ಘಾಟಿಸಿ ಅವರು ಮಾತನಾಡುತ್ತಿದ್ದರು. ಮೋದಿ ಸರ್ಕಾರವು 'ಅಚ್ಚೇ ದಿನ್ ಆಯೇಗಾ' ಎನ್ನುತ್ತಲೇ ಅಧಿಕಾರಕ್ಕೆ ಬಂದು, ಹಿಂದಿನ ಕಾಂಗ್ರೇಸ್ ಸರ್ಕಾರದ ರೈತ ವಿರೋಧಿ ಹಾಗು ಬೆಲೆಯೇರಿಕೆಗೆ ಕಾರಣವಾಗುವಂತಹ ನೀತಿಗಳನ್ನೇ ಮುಂದುವರೆಸಿಕೊಂಡು ಹೋಗುತ್ತಿದೆ. ರೈತ ಪರವಾದ ಸರ್ಕಾರ ಮತ್ತು ಜನಸ್ನೇಹಿ ಆಡಳಿತ ನೀಡುತ್ತೇವೆ ಎಂದು ಹೇಳಿಕೊಂಡೇ ಅಧಿಕಾರಕ್ಕೆ ಬಂದಿರುವ ಮೋದಿ ಸರ್ಕಾರ, ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ನೀಡುವ ಹಣಕ್ಕೆ ಬಾರೀ ಪ್ರಮಾಣದಲ್ಲಿ ಕತ್ತರಿ ಹಾಕಿದೆ. ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಿಜೆಪಿ ಪ್ರಣಾಳಿಕೆಯಲ್ಲಿ ಘೋಷಿಸಿರುವ ಭರವಸೆಗಳಿಗೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಕೃಷಿ ಕ್ಷೇತ್ರ–ಕ್ಕೆ ಹಿಂದಿನ ಕಾಂಗ್ರೇಸ್ ನೇತೃತ್ವದ ಸರ್ಕಾರ 18 ಸಾವಿರ ಕೋಟಿ ರೂಪಾಯಿ ನೀಡಿತ್ತು. ಚುನಾವಣೆ ಪೂರ್ವದಲ್ಲಿ ರೈತರು ಹಾಗೂ ಕೃಷಿ ಮೇಲೆ ಅಪಾರ ಕಾಳಜಿ ವ್ಯಕ್ತಪಡಿಸಿದ್ದ ಬಿಜೆಪಿಯ ಮೋದಿ ಸರ್ಕಾರ ಕೇವಲ 11.5 ಸಾವಿರ ಕೋಟಿ ಮಾತ್ರ ನೀಡಿದೆ. ರೈತರನ್ನು ಸ್ವರ್ಗದಲ್ಲಿ ಇಡುತ್ತೇವೆಂದು ಬೊಗಳೆ ಬಿಟ್ಟ ಬಿಜೆಪಿಯವರು ಈಗೇನು ಮಾಡುತ್ತಿದ್ದಾರೆಂದು ಖಾರವಾಗಿ ಪ್ರಶ್ನಿಸಿದರು. ಕಾಂಗ್ರೇಸ್ ಸರಿ ಇಲ್ಲ ಎಂದುಕೊಂಡು ಜನರು ಬಿಜೆಪಿಗೆ ಜನಾದೇಶ ನೀಡಿದರೇ ಬಜೆಟ್ಟಿನಲ್ಲಿ ಕಳೆದ ಕಾಂಗ್ರೆಸ್ ಸರ್ಕಾರಕ್ಕಿಂತ ಸುಮಾರು 6,500 ಕೋಟಿ ಕಡಿಮೆ ಹಣ ನಿಗದಿಸಿ, ನಂಬಿ ಮತ ನೀಡಿದ ಗ್ರಾಮೀಣ ಜನರ ಬಾಯಿಗೆ ಬರೆ ಎಳೆದಿದ್ದಾರೆ. ಇದರಿಂದಾಗಿ ಜನತೆ ಈಗ ಪಶ್ಚಾತ್ತಾಪ ಪಡುವಂತಾಗಿದೆ ಎಂದು ಅವರು ಹೇಳಿದರು.

'ಕುದುರೆ ಸವೆದು ಗೊದ್ದ ಆಯ್ತು. ಗೊದ್ದ ಸವೆದು...'

ತೊಗರಿ ಬೆಳೆಗಾರರು ಹಿಂದಿನ ಕಾಂಗ್ರೆಸ್ ಸರ್ಕಾರ ತೊಗರಿಗೆ ನಿಗದಿಸಿದ ಕನಿಷ್ಠ ಬೆಂಬಲ ಬೆಲೆ ಬಹಳ ಅನ್ಯಾಯವೆಂದು ಮತ್ತು ಕ್ವಿಂಟಲ್‌ಗೆ ಕನಿಷ್ಠ 6,000 ರೂ. ದರ ನಿಗದಿಗೊಳಿಸಬೇಕೆಂದು ಗುಲಬರ್ಗಾ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಚಳುವಳಿ ಮಾಡಿದ್ದರು. ಚಳುವಳಿಗೆ ಮಣಿದ ರಾಜ್ಯ ಸರ್ಕಾರ 5,000 ರೂ. ವರೆಗೆ ಖರೀದಿಸಿತು ಎಂದು ನಾನು ಕೇಳಿದ್ದೇನೆ. ಆದರೆ ಈಗಿನ ಮೋದಿ ಸರ್ಕಾರ ಅದೂ ಹಲವು ಸಹಾಯಧನ ಕಡಿತಗೊಂಡಿರುವಾಗ ಮತ್ತು ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಗಗನ ಮುಖಿಯಾಗಿರುವಾಗ ಕ್ವಿಂಟಲ್ ತೋ ಗರಿಗೆ 5,000 ರೂ.ಗಿಂತ ಹೆಚ್ಚು ನಿಗದಿ ಮಾಡಬೇಕಾದ ಕಡೆ ಹಿಂದಿನ ಕೇಂದ್ರ ಸರ್ಕಾರ ನಿಗದಿಪಡಿಸಿದುದಕ್ಕಿಂತ 300 ರೂ. ಕಡಿಮೆ ಮಾಡಿ ಕೇವಲ 4,700 ರೂ. ನಿಗದಿ ಪಡಿಸಿದೆ. ವಾಸ್ತವದಲ್ಲಿ ಅಂದರೆ ಮಾರುಕಟ್ಟೆಯಲ್ಲಿ ಅದಕ್ಕೂ ಕಡಿಮೆ ಬೆಲೆಗೆ ಖರೀದಿಯಾಗುತ್ತಿದೆ. ಇದನ್ನು ನೋಡಿದರೆ ತಮಿಳಿನ ನಾಣ್ಣುಡಿ ನೆನಪಾಗುತ್ತದೆ. 'ಕುದುರೇ ಸವೆದು ಗೊದ್ದ ಆಯ್ತು, ಮತ್ತೆ ಗೊದ್ದ ಸವೆದು ಇರುವೆ ಯಾಯ್ತು...' ಎಂಬಂತೆ ಸರ್ಕಾರ ಮತ್ತು ಅದರ ಆಡಳಿತವಾಯ್ತು ಎಂದು ಟೀಕಿಸಿದ ಅವರು ಮತ್ತು ತೊಗರಿಗೆ ಕ್ವಿಂಟಾಲಿಗೆ 6 ಸಾವಿರ ರೂ. ಬೆಂಬಲ ಬೆಲೆಯನ್ನು ನೀಡಬೇಕು ಎಂದು ಆಗ್ರಹಿಸಿದರು.

ರೈತರಿಗೆ ವಂಚನೆಯಾಗುವ ಹಾಗೂ ರಿಯಲ್ ಎಸ್ಟೇಟ್ ದಂಧೆಗೆ ಕುಮ್ಮಕ್ಕು ಕೊಡುವಂತಹ ಭೂಸ್ವಾಧೀನ ಕಾಯ್ದೆಯನ್ನು ಕೇಂದ್ರ ಸರ್ಕಾರವು ಅನುಸರಿಸುತ್ತಿದೆ. ಕೇಂದ್ರ ಸರ್ಕಾರವು ರಿಯಲ್ ಎಸ್ಟೇಟ್ ದಂಧೆಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿರುವುದರಿಂದ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ರೈತರಿಗೆ ನೀಡಲಾಗುತ್ತಿದ್ದ ಸಹಾಯ ಧನವನ್ನು ಕಡಿತಗೊಳಸಲಾಗುತ್ತಿದೆ. ರಾಷ್ಟ್ರದಲ್ಲಿ ತೆರಿಗೆ ವಂಚನೆ ಶೇ. 75 ರಷ್ಟು ಪ್ರಮಾಣದಲ್ಲಿದೆ. ವಂಚಿಸುವ ಬೆಲೆಯಲ್ಲಿ ರೈತರ ಭೂಮಿಯನ್ನು ಪಡೆದುಕೊಂಡು, ಹೆಚ್ಚಿನ ಬೆಲೆಗೆ ಮಾರಾಟ ಮಾಡಿ, ಭಾರಿ ಲಾಭ ಗಳಿಸಿ ಸರ್ಕಾರಕ್ಕೂ ತೆರಿಗೆ ನೀಡದೇ, ಮರಳಿ ಅದೇ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿಸಿ ಬಾರೀ ಪ್ರಮಾಣದ ಕಪ್ಪು ಹಣವನ್ನು ಸಂಗ್ರಹಿಸಲಾಗಿದೆ. ಇಂತಹ ಕಪ್ಪು ಹಣವನ್ನು ಬಯಲಿಗೆಳೆದಲ್ಲಿ ಕೃಷಿಗೆ ಹಾಗೂ ಗ್ರಾಮೀಣಾಭಿವೃದ್ಧಿಗೆ ಈಗಿನ ಎರಡು ಪಟ್ಟು ಹಣವನ್ನು ಬಜೆಟ್‌ನಲ್ಲಿ ಒದಗಿಸಲು ಸಾಧ್ಯವಾಗುತ್ತದೆ. ಆದರೆ ಈ ಸರ್ಕಾರಗಳು ಅವರ ಜೊತೆ ಶಾಮೀಲಾತಿ ಹೊಂದಿರುವುದರಿಂದ ಅದನ್ನು ಹೊರಗೆಳೆಯುತ್ತಿಲ್ಲವೆಂದು ತಿಳಿಸಿದರು. ಮಾತ್ರವಲ್ಲ, ರೈತ ವಿರೋಧಿ ನೀತಿಗಳು ಮತ್ತು ರಿಯಲ್ ಎಸ್ಟೇಟ್ ದಂಧೆಗೆ ಪ್ರೋತ್ಸಾಹ ನೀಡುವುದರಿಂದ ಇಡೀ ರಾಷ್ಟ್ರದ ಆರ್ಥಿಕ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮವಾಗಲಿದೆ. ಈ ರೈತ ವಿರೋಧಿ ನೀತಿಯ ವಿರುದ್ಧ ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರವ್ಯಾಪಿ ಚಳುವಳಿಯನ್ನು ಹುಟ್ಟು ಹಾಕಲಿದೆ ಎಂದರು.

ವಿಚಾರ ಸಂಕಿರಣದ ವಿಷಯ ಮಂಡಿಸಿದ, ರಾಜ್ಯ ಕೃಷಿ ಉತ್ಪನ್ನಗಳ ಬೆಲೆ ಆಯೋಗದ ಅಧ್ಯಕ್ಷರಾದ ಡಾ॥ ಪ್ರಕಾಶ್ ಕಮರಡಗಿಯವರು ಗ್ರಾಹಕ ಪಾವತಿಸುವ ಹಣವನ್ನು ನೇರವಾಗಿ ರೈತರಿಗೆ ತಲುಪುವಂತಹ ವ್ಯವಸ್ಥೆ ಮಾಡಿದರೆ, ರೈತರು ಆರ್ಥಿಕವಾಗಿ ಮುಂದುವರೆಯುತ್ತಾರೆ. ಮಾಧ್ಯಮಗಳು ಮತ್ತು ನಾಗರೀಕರು ಬೆಲೆ ಏರಿಕೆಯ ಸಂದರ್ಭದಲ್ಲಿ ರೈತರನ್ನು ದೂಷಣೆ ಮಾಡುವುದು ಸರಿಯಲ್ಲ, ಏಕೆಂದರೆ ಆ ಹಣದ ಬಹುಪಾಲು ಮಧ್ಯವರ್ತಿಗಳ ಪಾಲಾಗುತ್ತಿದೆ. ಪ್ರತಿಯೊಬ್ಬ ಉತ್ಪಾದಕರಿಗೂ ತಾನು ಉತ್ಪಾದನೆ ಮಾಡಿದ ವಸ್ತುವಿಗೆ ಬೆಲೆ ನಿಗದಿ ಮಾಡುವ ಅಧಿಕಾರವಿದೆ. ಆದರೆ ರೈತನಿಗೆ ಮಾತ್ರ ಇಂತಹ ಅಧಿಕಾರವಿಲ್ಲ. ಅವನು ಮಾರುಕಟ್ಟೆ ಬೆಲೆ ಕುಸಿತಕ್ಕೆ ಬಲಿಪಶುವಾಗಬೇಕಾಗಿದೆ. ಇದು ರೈತ ವಿರೋಧಿ ನೀತಿ ಎಂದು ಟೀಕಿಸಿದರು. ರೈತರು ನಮ್ಮ ದೇಶದ ಆಹಾರ ಉತ್ಪಾದನೆಗೆ ಅಪಾರವಾದ ಕೊಡುಗೆ ನೀಡುತ್ತಿದ್ದಾರೆ ಪ್ರತಿವರ್ಷ 26 ದಶಲಕ್ಷ ಟನ್ ಕಾಳುಗಳು, 250 ದಶಲಕ್ಷ ಟನ್ ಆಹಾರ ಧಾನ್ಯಗಳು, ಹಣ್ಣು ತರಕಾರಿಗಳು ಹಾಗೂ 100 ಮಿಲಿಯನ್ ಟನ್‌ನಷ್ಟು ಹಾಲು ಉತ್ಪಾದನೆ ಮಾಡುತ್ತಿದ್ದಾರೆ. ಆದರೆ ಇಷ್ಟು ಬೃಹತ್ ಪ್ರಮಾಣದ ಉತ್ಪಾದನೆಗೆ ವೈಜ್ಞಾನಿಕ ರೀತಿಯಲ್ಲಿ ಬೆಲೆ ನಿಗದಿ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾಜಿ ಶಾಸಕರು, ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರು ಆದ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿ, ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳು ಕೃಷಿ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದು ಇದರ ಪರಿಣಾಮವಾಗಿ ರೈತರು ಸಾಲು ಸಾಲಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದು ದೇಶದಲ್ಲಿ ಪ್ರತಿ ಗಂಟೆಗೆ ಇಬ್ಬರು ರೈತರು ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಪ್ರಾಂತ ರೈತ ಸಂಘ ಪ್ರಕಟಿಸಿರುವ 'ತೆಲಂಗಾಣ ರೈತ ಹೋರಾಟ', 'ಪರ್ಯಾಯ ಕೃಷಿ ನೀತಿ' ಮತ್ತು 'ಅಖಿಲ ಭಾತರ ಕಿಸಾನ್ ಸಭಾದ ಸಂವಿಧಾನ' ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಯು. ಬಸವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಸಹಕಾರ್ಯದರ್ಶಿಗಳಾದ ವಿಜುಕೃಷ್ಣನ್ ಮತ್ತು ಪ್ರಾಂತ ರೈತ ಸಂಘದ ರಾಜ್ಯ ಪದಾಧಿಕಾರಿಗಳು ಹಾಜರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಪ್ರಾಂತ ರೈತ ಸಂಘದ ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿಗಳಾದ ಗೌರಮ್ಮ ಪಾಟೀಲ್ ಮತ್ತು ವಂದನಾರ್ಪಣೆಯನ್ನು ಜಿಲ್ಲಾಧ್ಯಕ್ಷರಾದ ಶರಣಬಸಪ್ಪ ಮಮಶೆಟ್ಟಿ ಮಾಡಿದರು. ●

'ಬಾಲಿ–ಡಬ್ಲ್ಯೂಟಿಓ ಶೃಂಗ ಸಭೆ'ಯಲ್ಲಿ ಭಾರತದ ರೈತರ ಹಿತ 'ಬಲಿ'

'ಇತ್ತೀಚೆಗೆ ಇಂಡೋನೇಷಿಯಾದ ಬಾಲಿಯಲ್ಲಿ ನಡೆದ ವಿಶ್ವ ವಾಣಿಜ್ಯ ಸಂಘಟನೆ (ಡಬ್ಲ್ಯೂಟಿಓ) ಯ ಶೃಂಗ ಸಭೆಯಲ್ಲಿ ಮುಂದುವರೆದ ರಾಷ್ಟ್ರಗಳ ಒತ್ತಡ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ



ಲಾಭವಾಗುವಂತಹ ನೀತಿಗಳ ಒಪ್ಪಂದಗಳಿಗೆ ಸಮ್ಮತಿ ನೀಡುವ ಮೂಲಕ ಭಾರತದ ಬಹುಸಂಖ್ಯಾತ ರೈತರ ಹಿತವನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬಲಿಕೊಟ್ಟಿದೆ.' ಎಂದು ಆಲ್ ಇಂಡಿಯಾ ಕಿಸಾನ್ ಸಭಾದ ರಾಷ್ಟ್ರೀಯ ಸಹಕಾರ್ಯದಶಿಗಳಾದ ವಿಜುಕೃಷ್ಣನ್ ಕಿಡಿಕಾರಿದರು.

ಅಧ್ಯಯನ ಶಿಬಿರದ ಮೂರನೇ ದಿನದಂದು 'ಕೃಷಿ ಬಿಕ್ಕಟ್ಟು ಮತ್ತು ಪರ್ಯಾಯ ಕೃಷಿ ನೀತಿ' ಕುರಿತು ಉಪನ್ಯಾಸ ನೀಡುತ್ತ ಮಾತನಾಡಿದ ಅವರು 'ವಿಶ್ವ ವಾಣಿಜ್ಯ ಸಂಘಟನೆ'ಯ ಶೃಂಗ ಸಭೆಯಲ್ಲಿ ಆಹಾರ ಭದ್ರತೆಯ ಸಹಾಯ ಧನ, ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಮತ್ತು ಸಾರ್ವಜನಿಕ ಉಗ್ರಾಣ ನಿಯಮಗಳ ಕುರಿತು ಚರ್ಚಿಸಲಾಗಿತ್ತು. ಈ ಮೂರು ವಿಚಾರಗಳ ಕುರಿತಂತೆ ಭಾರತದಂತಹ ರಾಷ್ಟ್ರಗಳು ಯಾವುದೇ ರೀತಿಯ ಅನುದಾನವನ್ನು ಬಿಡುಗಡೆ ಮಾಡಬಾರದು ಎಂಬ ಒಪ್ಪಂದಕ್ಕೆ ಬರಲಾಗಿದ್ದು ಈ ಒಪ್ಪಂದಕ್ಕೆ ಭಾರತ ಸರ್ಕಾರ ಸಹಿ ಹಾಕಿದೆ.

'ಕೃಷಿ ಉತ್ಪನ್ನಗಳ ನಿಗದಿತ ಬೆಲೆ ಹೆಚ್ಚಳಕ್ಕೆ ಕೇಂದ್ರದ ನಿರ್ಬಂಧ – ಅನುದಾನ ಕಡಿತದ ಎಚ್ಚರಿಕೆ' !!

ಒಂದೆಡೆ ವಿಶ್ವ ವಾಣಿಜ್ಯ ಸಂಘಟನೆಗೆ ಭಾರತ ತಲೆ ಬಾಗಿಲ್ಲ ಎಂದು ಮಾಧ್ಯಮಗಳಲ್ಲಿ ಸುದ್ದಿ ಬಿಂಬಿತವಾಗುತ್ತಿದೆ. ಆದರೆ ಮತ್ತೊಂದು ಕಡೆ ಇದೇ ಮೋದಿ ಸರ್ಕಾರ ರಾಜ್ಯಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸುವ ಮೂಲಕ ಕೃಷಿ ಉತ್ಪನ್ನಗಳ ಬೆಲೆ ನಿಗದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ಕೇಂದ್ರ ನಿಗದಿ ಮಾಡುವ ಬೆಲೆಗಿಂತ ಹೆಚ್ಚಿನ ಬೆಲೆಗೆ ಕೊಂಡುಕೊಳ್ಳಬಾರದು ಮತ್ತು ಯಾವುದೇ ರೀತಿಯ ಸಹಾಯ ಧನವನ್ನೂ ಕೂಡ ಬಿಡುಗಡೆ ಮಾಡಬಾರದೆಂದು ಸೂಚಿಸಿದೆ. ಒಂದು ಪಕ್ಷ ಕೇಂದ್ರ ಸರ್ಕಾರದ ಈ ನಿಯಮಗಳನ್ನು ಉಲ್ಲಂಘಿಸಿದರೆ ರಾಜ್ಯ ಸರ್ಕಾರಗಳಿಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಕಡಿತಕೊಳಿಸಲಾಗುತ್ತದೆ ಎನ್ನುವ ಎಚ್ಚರಿಕೆಯನ್ನು ನೀಡಿದೆ. ಇದು ಅತ್ಯಂತ ರೈತ ವಿರೋಧಿ ನೀತಿಯಾಗಿದ್ದು ಈ ನೀತಿಗಳಿಂದ ಈಗಾಗಲೇ ಕೃಷಿ ಚಟುವಟಿಕೆಗಳಿಂದ ದೂರವಾಗುತ್ತಿರುವ ರೈತರು ಕೃಷಿಯನ್ನು ಸಂಪೂರ್ಣವಾಗಿ ಬಿಡಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದರು.

ದೇಶದ ಕೃಷಿ ಬಿಕ್ಕಟ್ಟು ದಿನೇ ದಿನೇ ಹೆಚ್ಚುತ್ತಿದ್ದು ಇದನ್ನು ತಡೆಗಟ್ಟಬೇಕಾದರೆ ರೈತಪರವಾದ ಪ್ರಗತಿಪರ ಭೂಸುಧಾರಣಾ ನೀತಿ ಜಾರಿಯಾಗಬೇಕು ಮತ್ತು ದೇಶದ ರೈತರ ಹಿತವನ್ನು ಬಲಿಕೊಡುವ ಒಪ್ಪಂದಗಳನ್ನು ತಿರುವು ಮುರುವು ಮಾಡುವಂತಹ ರೈತ ಚಳುವಳಿಯನ್ನು ಕಟ್ಟಬೇಕೆಂದು ಹೇಳಿದರು. ●

ಮಹಿಳೆಯರ ಮೇಲೆ ದೌರ್ಜನ್ಯ – ಎರಡು ಪ್ರತಿಭಟನೆಗಳು

ಎನ್.ಪ್ರಭಾ ಬಗ್ಗೆ ಅವಹೇಳನದ ವರದಿಗಳ ಬಗ್ಗೆ ಪ್ರತಿಭಟನೆ:

ಸಾಮಾಜಿಕ ತಾಣಗಳನ್ನು ಜನತೆಯ ಮಾಹಿತಿ ಹಾಗೂ ತಿಳಿವಳಿಕೆ ಹೆಚ್ಚಿಸಲು ಬಳಸಬೇಕಾಗಿದೆಯೇ ಹೊರತು ವಿಕೃತ ಬೆದರಿಕೆ ಒಡ್ಡುವುದಕ್ಕೆ ಅಥವಾ ಯಾರನ್ನೋ ನಿಂದಿಸಿ ಅವಹೇಳನ ಮಾಡಲಿಕ್ಕಲ್ಲ.




ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಸಮಿತಿ ಅಧ್ಯಕ್ಷೆಯೂ ಮಹಿಳಾ ಹೋರಾಟಗಾರ್ತಿಯೂ ಆದ ಎನ್.ಪ್ರಭಾ ಅವರು ಜನವಿಜ್ಞಾನ ಕಾರ್ಯಕರ್ತರಾಗಿ ಪತ್ರಿಕೆ, ದೃಶ್ಯ ಮಾಧ್ಯಮ ಹಾಗೂ ಸಾಮಾಜಿಕ ತಾಣಗಳಲ್ಲಿ ಮೂಢನಂಬಿಕೆಗಳನ್ನು ದೂರ ಮಾಡಲು ವೈಜ್ಞಾನಿಕ ವಿಚಾರಗಳನ್ನು ತಿಳಿಸುವಲ್ಲಿ ತುಂಬಾ ಸಕ್ರಿಯರಾಗಿರುವವರು. ಅಂಥವರ ಮೇಲೆ ಮಾನಹಾನಿಕರವಾದ ಕ್ರಿಮಿನಲ್ ಪ್ರವೃತ್ತಿಯ ಸಂದೇಶಗಳನ್ನು ಫೇಸ್‌ಬುಕ್‌ನ ಜಾಲತಾಣಗಳಲ್ಲಿ ದಾಖಲು ಮಾಡಲು ಪ್ರಯತ್ನಿಸುತ್ತಿರುವ ಪತ್ರಕರ್ತನೆನ್ನಲಾದ ವಿ.ಆರ್.ಭಟ್ ಎಂಬವರ ಕೃತ್ಯ ಅತ್ಯಂತ ಖಂಡನೀಯ. ಆತನ ಧೋರಣೆ ಸ್ತ್ರೀ ವಿರೋಧಿ ಮಾತ್ರವಲ್ಲ, ದೇಶದ ಮತನಿರಪೇಕ್ಷ ಸಿದ್ಧಾಂತಕ್ಕೆ ವಿರುದ್ಧವಾದದ್ದು. ಈಗಾಗಲೇ ಈ ಬಗ್ಗೆ ಎಚ್ಚೆತ್ತ ನಾಗರಿಕರು ಸಾಮಾಜಿಕ ತಾಣದಲ್ಲೂ, ಬಹಿರಂಗ ಕಾರ್ಯಕ್ರಮಗಳಲ್ಲೂ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ.

ಆಗಸ್ಟ್ 1 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಡಿವೈಎಫ್‌ಐ, ಎಸ್‌ಎಫ್‌ಐ, ಜನವಾದಿ ಮಹಿಳಾ ಸಂಘಟನೆ, ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಗಳ ಪಾಲ್ಗೊಳ್ಳುವಿಕೆಯಲ್ಲಿ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ವೈಚಾರಿಕ ಸಂಗತಿಗಳನ್ನು ಸಾಮಾಜಿಕ ತಾಣಗಳಲ್ಲಿ ಪಸರಿಸುತ್ತಿರುವ ಎನ್.ಪ್ರಭಾ ಹಾಗೂ ಸಾಹಿತಿ ಡಾ|ಮಲ್ಲಿಕಾ ಘಂಟಿ ಅವರ ವಿರುದ್ಧ ನೀಚ ಭಾಷೆಯ ನಿಂದನೆಗಳನ್ನು ಮಾಡಿರುವ ವಿ.ಆರ್.ಭಟ್ ಮತ್ತು ಶಂಕರಗೌಡ ಇವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಘೋಷಣೆಗಳನ್ನು ಕೂಗಲಾಯಿತು. ಉಜಿರೆ–ಯ ಸಂಘಪರಿವಾರದ ಗ್ಯಾಂಗೊಂದು ನೈತಿಕ ಪೋಲೀಸ್‌ಗಿರಿ ನಡೆಸಿ ಅಮಾಯಕ ಯುವಕ ಯುವತಿಯರ ಮೇಲೆ ದಾಳಿ ಮಾಡಿದ್ದಲ್ಲದೆ, ಸಾಮಾಜಿಕ ತಾಣಗಳಲ್ಲೂ ತಮ್ಮ ಕೃತ್ಯಗಳನ್ನು ಸಮರ್ಥಿಸುತ್ತಿದ್ದರೂ, ಪೋಲೀಸ್ ಇಲಾಖೆ ಅವರ ಬಗ್ಗೆ ಕ್ರಮ ಕೈಗೊಳ್ಳದೆ ಇರುವ ಬಗ್ಗೆ ಖಂಡನೆಯನ್ನು ವ್ಯಕ್ತಪಡಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ವಿಚಾರವಾದಿ ಸಂಘಗಳ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷ ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್ ಮಾತನಾಡಿದರು. ಲೇಖಕಿಯರಾದ ಬಿ.ಎಂ. ರೋಹಿಣಿ, ಜ್ಯೋತಿ ಚೇಳ್ಯಾರು, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ್, ಚಿಂತಕ ಪಿ.ವಿ.ಪ್ರಸನ್ನ, ಜನವಾದಿ ಮಹಿಳಾ ಸಂಘಟನೆಯ ನಗರ ಅಧ್ಯಕ್ಷೆ ಜಯಂತಿ ಶೆಟ್ಟಿ, ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ವರದಿ : ವಾ. ಉಚ್ಚಿಲ್

ಮಹಿಳೆಯರಿಗೆ ರಕ್ಷಣೆ ನೀಡಲು 'ಜನವಾದಿ' ಆಗ್ರಹ:

ಇತ್ತೀಚೆಗೆ ಬೆಂಗಳೂರಿನಲ್ಲಿ 6 ವರ್ಷದ ಬಾಲಕಿಯೋರ್ವಳ ಮೇಲೆ ಕ್ರೀಡಾ ಶಿಕ್ಷಕ ವರ್ಗದವರು ಅತ್ಯಾಚಾರವೆಸಗಿದ್ದು ವರದಿಯಾಗಿದೆ. ರತ್ನಾ ಕೊಟ್ಟಾರಿ ಎಂಬ 17 ವರ್ಷದ ವಿದ್ಯಾರ್ಥಿನಿ ಉಡುಪಿ ಜಿಲ್ಲೆ ಬೈಂದೂರು ಸಮೀಪದ ತನ್ನ ಮನೆ ದಾರಿಯಲ್ಲಿ ನಿಗೂಢವಾಗಿ ಕೊಲೆಯಾಗಿದ್ದಾಳೆ. ಕೆಲವೇ ದಿನಗಳ ಅವಧಿಯಲ್ಲಿ ಜಿಲ್ಲೆಯಲ್ಲೂ, ರಾಜ್ಯದಲ್ಲೂ ಮಹಿಳೆಯರ ಮೇಲೆ ದೌರ್ಜನ್ಯ ಅತ್ಯಾಚಾರ ಕೊಲೆಗಳಾಗುವುದು ವರದಿಯಾಗುತ್ತಲೇ ಇವೆ. ರಾಜ್ಯ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ ಮಹಿಳೆಯರಿಗೆ ಭದ್ರತೆ ನೀಡುವಲ್ಲಿ ವಿಫಲವಾಗಿವೆ. ಇದನ್ನು ಪ್ರತಿಭಟಿಸಿ ಜನವಾದಿ ಮಹಿಳಾ ಸಂಘಟನೆಯ ಮಂಗಳೂರು ನಗರ ಸಮಿತಿ ವತಿಯಿಂದ ಆಗಸ್ಟ್ 4 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆಯನ್ನು ಏರ್ಪಡಿಸಲಾಯಿತು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಹೋಗಿ, ಕಾಂಗ್ರೆಸ್ ನೇತೃತ್ವದ ಬಂದಿದೆ. ಆದರೆ ಮಹಿಳೆಯರ ಮೇಲೆ ನಡೆಯುವ ದಾಳಿಗಳನ್ನು ತಡೆಯಲು ಈ ಸರಕಾರವೂ ವಿಫಲವಾಗಿದೆ. ಈ ಬಗ್ಗೆ ಪ್ರಗತಿಪರ ಸಂಘಟನೆಗಳು ಒಂದೆಡೆ ಪ್ರತಿಭಟನೆ ನಡೆಸುತ್ತಿದ್ದರೆ, ಹಿಂದೂ ಮತೀಯವಾದಿ ವಿದ್ಯಾರ್ಥಿ ಸಂಘಟನೆಗಳೂ, ಬಿಜೆಪಿ ಪಕ್ಷವೂ ಇನ್ನೊಂದೆಡೆ ಪ್ರತಿಭಟನೆ ನಡೆಸುತ್ತಿದೆ. ಆದರೆ ಈ ಸಂಘ ಪರಿವಾರದ ಸಂಘಟನೆಗಳು ಈ ಹಿಂದೆ ಬಿಜೆಪಿ ನೇತೃತ್ವದ ರಾಜ್ಯ ಸರಕಾರದ ಅವಧಿಯಲ್ಲಿ ಮಹಿಳೆಯರ ಮೇಲೆ ನಡೆದಿದ್ದ ದಾಳಿಗಳನ್ನು ಖಂಡಿಸಿರಲಿಲ್ಲ. ಈಗ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಈ ಪ್ರತಿಭಟನೆಗಳನ್ನು ನಡೆಸಿವೆ ಎಂಬುದಾಗಿ ಮಾತನಾಡಿದ ಮುಖಂಡರು ಬಿಜೆಪಿಯ ದ್ವಿಮುಖ ಧೋರಣೆಯನ್ನು ಖಂಡಿಸಿದರು. ಅಲ್ಲದೆ ಮಹಿಳಾ ಚಿಂತಕಿಯರಾದ ಎನ್.ಪ್ರಭಾ ಮತ್ತು ಡಾ|ಮಲ್ಲಿಕಾ ಘಂಟೆಯವರ ಮೇಲೆ ಮತೀಯವಾದಿ ದುಷ್ಟ ಮನಸ್ಸಿನ ವಿ.ಆರ್.ಭಟ್ಟರಂಥವರು ಸಾಮಾಜಿಕ ತಾಣಗಳಲ್ಲಿ ಕೀಳು ಭಾಷೆಯಲ್ಲಿ ಬರೆಯುತ್ತಿರುವುದನ್ನು ಖಂಡಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಜನವಾದಿಯ ಮಂಗಳೂರು ನಗರ ಸಮಿತಿ ಅಧ್ಯಕ್ಷೆ ಹಾಗೂ ಪಾಲಿಕೆಯ ಮಾಜಿ ಸದಸ್ಯೆ ಜಯಂತಿ ಶೆಟ್ಟಿ, ಜಿಲ್ಲಾ ಸಮಿತಿಯ ಅಧ್ಯಕ್ಷೆ ಹೇಮಲತಾ, ಉಪಾಧ್ಯಕ್ಷೆ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಕಿರಣಪ್ರಭಾ ಮಾತನಾಡಿದರು. ನಗರ ಸಮಿತಿ ಕಾರ್ಯದರ್ಶಿ ಸಾಜಿದಾ ಸ್ವಾಗತಿಸಿ, ಖಜಾಂಚಿ ಭಾರತಿ ಬೋಳಾರ ವಂದಿಸಿದರು. ಪ್ರತಿಭಟನೆಯಲ್ಲಿ ಸುಮಾರು 25 ಮುಸ್ಲಿಂ ಮಹಿಳೆಯರನ್ನೂ ಒಳಗೊಂಡಂತೆ 75 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.

'ಸ್ಥಾಪಿತ ಹಿತಾಸಕ್ತಿಗಳ ಸ್ವಾರ್ಥ ಸಾಧನೆಗಾಗಿ ಯುದ್ಧ'

– ಪ್ರೊ. ಜಿ.ಎಂ. ಶ್ರೀನಿವಾಸಯ್ಯ

"ಜಗತ್ತಿನ ಜನರು ಅಹಿಂಸೆ ಮತ್ತು ಸಂಕಷ್ಟಗಳಿಂದ ತುಂಬಿರುವ ಬದುಕನ್ನು ಬಯಸದೆ ಶಾಂತಿ ಮತ್ತು ಸೌಹಾರ್ದಯುತ ಬದುಕನ್ನು ಬಯಸುತ್ತಾರೆ. ಆದರೆ ಕೆಲವು ಸ್ಥಾಪಿತ ಹಿತಾಸಕ್ತಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಯುದ್ಧಗಳನ್ನು ನಡೆಸುವ ಮೂಲಕ ಜಗತ್ತಿನ ಶಾಂತಿಯನ್ನು ಹಾಳು ಮಾಡುತ್ತಿದ್ದಾರೆ." ಎಂದು ಹಿರಿಯ ಇತಿಹಾಸ ತಜ್ಞ ಪ್ರೊ. ಜಿ.ಎಂ. ಶ್ರೀನಿವಾಸಯ್ಯ ಅಭಿಪ್ರಾಯಪಟ್ಟರು ಆಗಸ್ಟ್ 6, 2014ರಂದು 'ಅಣ್ವಸ್ತ್ರ ಮುಕ್ತ ವಿಶ್ವಕ್ಕಾಗಿ–ಶಾಂತಿಗಾಗಿ ನಾವೂ ನೀವೂ' ಎಂಬ ಘೋಷಣೆಯೊಂದಿಗೆ ವಿದ್ಯಾರ್ಥಿ–ಯುವಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ತುಮಕೂರು ತಾಲ್ಲೂಕು ಸಮಿತಿ ವತಿಯಿಂದ ನಗರದ ಯೂನಿಯನ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಹಿರೋಶಿಮಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಎರಡನೇ ಮಹಾಯುದ್ದದಲ್ಲಿ ವಿಶ್ವದ 32 ರಾಷ್ಟ್ರಗಳು ತಮಗೆ ಇಷ್ಟ ಇಲ್ಲದೆ ಇದ್ದರೂ ಸಹ ಯುದ್ದದಲ್ಲಿ ಭಾಗವಹಿಸಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣಗೊಂಡಿತು ಎಂದ ಅವರು ಹಾಲಿ ಭೂ ಗ್ರಹವನ್ನು ಒಂದು ಸಾವಿರ ಬಾರಿ ಸುಟ್ಟು ಭಸ್ಮ ಮಾಡಬಹುದಾದ ಅಣ್ವಸ್ತ್ರಗಳಿದ್ದು ಜಾಗತಿಕ ಶಾಂತಿ ಚಳುವಳಿಯ ಒತ್ತಾಯದಂತೆ ಇವನ್ನು ನಾಶಪಡಿಸಬೇಕೆಂದು ಒತ್ತಾಯಿಸಿದರು.

ವಿಶ್ವಶಾಂತಿ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ತೆರಳಿದ್ದ ಸಿಐಟಿಯುನ ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್ ಮಾತನಾಡಿ ಇಂದು ವೈಜ್ಞಾನಿಕ ಅವಿಷ್ಕಾರವೊಂದರ ದುರ್ಬಳಕೆಯಿಂದಾಗಿ ವಿಜ್ಞಾನವನ್ನು ದೂಷಿಸುವದು ಸರಿಯಲ್ಲ, ವೈಜ್ಞಾನಿಕ ಅವಿಷ್ಕಾರಗಳು ಮಾನವ ಸಮಾಜದ ಕಲ್ಯಾಣಾಭಿವೃದ್ಧಿಗೆ ಬಳಕೆಯಾಗಬೇಕು. ರಕ್ಷಣೆ–ಯ ಹೆಸರಿನಲ್ಲಿ ಬಾಂಬ್, ಮಿಸೈಲ್‌ಗಳಿಗೆ ಮಿಲಿಯಗಟ್ಟಲೇ ದುಡ್ಡು ಸುರಿಯುತ್ತಿರುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದ ಅವರು ಸಂಪನ್ಮೂಲವನ್ನು ಜನರ ಸಂಕಷ್ಟಗಳಾದ ಹಸಿವು, ಬಡತನ, ನಿರುದ್ಯೋಗ, ಶಿಕ್ಷಣ, ಆರೋಗ್ಯ, ವಸತಿ ಪ್ರಶ್ನೆಗಳಿಗೆ ಸಮಸ್ಯೆಗಳ ನಿವಾರಣೆಗೆ ವಿನಿಯೋಗಿಸಬೇಕಿದೆ ಎಂದು ಪ್ರತಿಪಾದಿಸಿದರು.



ಜಾಗತಿಕ ನಿಶಸ್ತ್ರೀಕರಣದ (ಎನ್.ಪಿ.ಟಿ.–2015) ಅಣು ಅಸ್ತ್ರಗಳನ್ನು ನಾಶ ಪಡಿಸುವ ನಿಟ್ಟಿನಲ್ಲಿ ಜನಪರ ಶಾಂತಿ ಚಳುವಳಿ ಬೆಳೆದು ಬರಬೇಕಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಉಪಪ್ರಾಂಶುಪಾಲರಾದ ಪ್ರೊ. ಡ್ಯಾನಿಯಲ್ ಮನೋರಾಜ್ ಯುದ್ದ ತಡೆಯುವುದು ಹಾಗೂ ಜಾಗತಿಕ ಶಾಂತಿ ಇಂದಿನ ಅಗತ್ಯ ಎಂದರು. ವೇದಿಕೆಯಲ್ಲಿ ಪ್ರಾಧ್ಯಾಪಕರ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್, ಉಪನ್ಯಾಸಕರಾದ ಮಹದೇವ್, ಸದಾಶಿವು ಎಸ್‌ಎಫ್‌ಐನ ಜಿಲ್ಲಾ ಕಾರ್ಯದರ್ಶಿ ಇ. ಶಿವಣ್ಣ, ಡಿವೈಎಫ್‌ಐನ ಜಿಲ್ಲಾ ಸಮಿತಿ ಅಧ್ಯಕ್ಷ ಎಸ್. ರಾಘವೇಂದ್ರ, ನಾರಾಯಣಸ್ವಾಮಿ ಎಸ್‌ಎಫ್‌ಐನ ಜ್ಯೋತಿ, ದಿವ್ಯ ಉಪಸ್ಥಿತರಿದ್ದರು. ಆರಂಭದಲ್ಲಿ ಸುನಿಲ್‌ನಾಯಕ್ ಸ್ವಾಗತಿಸಿ ಎಸ್‌ಎಫ್‌ಐನ ನಗರಾಧ್ಯಕ್ಷ ಜಿ. ದರ್ಶನ್ ವಂದಿಸಿದರು.

– ಎಸ್. ರಾಘವೇಂದ್ರ.

ಮುನ್ನೆಚ್ಚರಿಕೆ ಬಂದಿದೆ, ಸಮರಕ್ಕೆ ಸನ್ನದ್ಧರಾಗಬೇಕಿದೆ

ಸಾರ್ವತ್ರಿಕ ಚುನಾವಣೆಗಳಲ್ಲಿ ಗೆದ್ದು ಕೇಂದ್ರ ಸರಕಾರವನ್ನು ರಚಿಸಿದ ಮೇಲೆ ಬಿಜೆಪಿ 'ಅಚ್ಛೇ ದಿನ್ ಆನೇವಾಲೇ ಹೈಂ'(ಒಳ್ಳೆಯ ದಿನಗಳು ಬರಲಿವೆ) ಮುಂತಾದ ತನ್ನ ಘೋಷಣೆಗಳನ್ನು ಮೂಲೆಗೆ ಎಸೆದಿದೆ, ಇನ್ನಷ್ಟು ಚುನಾವಣಾ ಗಳಿಕೆಗಳಿಗಾಗಿ ಭಂಡತನದಿಂದ ತನ್ನ ಆರೆಸ್ಸೆಸ್ ಬೇರುಗಳಿಗೆ ಮರಳಿದೆ ಎಂಬುದೀಗ ಸ್ಪಷ್ಟ. ತಮ್ಮ ಚುನಾವಣಾ ಮತ್ತು ರಾಜಕೀಯ ಗಳಿಕೆಗಳ ಮೇಲಷ್ಟೇ ಗಮನವಿಟ್ಟಿರುವ ಆರೆಸ್ಸೆಸ್/ಬಿಜೆಪಿಗೆ ಈ ರೀತಿ ನಮ್ಮ ಜನಗಳ ನಡುವಿನ ಸಾಮರಸ್ಯವನ್ನು ನಾಶಗೊಳಿಸುತ್ತಿರುವ ಬಗ್ಗೆ ಎಳ್ಳಷ್ಟೂ ಅಳುಕು ಇದ್ದಂತಿಲ್ಲ.

ಸೀತಾರಾಮ್ ಯೆಚೂರಿ



2014ರ ಸಾರ್ವತ್ರಿಕ ಚುನಾವಣೆಗಳ ಸಮಯದಲ್ಲಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿಯ ಪ್ರಚಾರದ ವಿವಿಧ ಲಕ್ಷಣಗಳ ಬಗ್ಗೆ ಈ ಅಂಕಣದಲ್ಲಿ ಗಮನ ಸೆಳೆಯಲಾಗಿತ್ತು. ಈ ಲಕ್ಷಣಗಳೆಲ್ಲ, ಚುನಾವಣಾ ಲಾಂಛನಗಳಾಗಿ ಬಳಸಿಕೊಳ್ಳುತ್ತಿದ್ದ 'ಅಭಿವೃದ್ಧಿ ಮತ್ತು 'ಗುಜರಾತ ಮಾದರಿ'ಗಳು ಕೇವಲ ಬುಡಮಟ್ಟದ ಪ್ರಚಾರದ ವಾಸ್ತವವನ್ನು ಮರೆಮಾಚುವ ಪರದೆಯಷ್ಟೇ ಎಂಬ ತೀರ್ಮಾನದತ್ತಲೇ ಒಯ್ಯುತ್ತವೆ. ಬುಡಮಟ್ಟದ ಪ್ರಚಾರ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದರ ಮೇಲೆಯೇ ಗಮನ ಕೇಂದ್ರೀಕರಿಸಿತ್ತು ಎಂದು ನಾವು ಗಮನಿಸಿದ್ದೆವು.

ಹೀಗೆ ಬಿಜೆಪಿ ಚುನಾವಣಾ ಗಳಿಕೆಯು ಬಹುಪಾಲು, ಇಂತಹ ನಗ್ನ 'ವೋಟ್ ಬ್ಯಾಂಕ್' ರಾಜಕೀಯದ, ಅಂದರೆ 'ಹಿಂದೂ ವೋಟ್ ಬ್ಯಾಂಕ್'ನ ಕ್ರೋಡೀಕರಣದಿಂದ ಬಂದಿದೆ. ನಿಜ, ಕಳೆದ ಕೆಲವು ವರ್ಷಗಳಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ–2 ಸರಕಾರದ ಆಳ್ವಿಕೆಯ ಬಗ್ಗೆ ವ್ಯಾಪಕ ಜಿಗುಪ್ಸೆಯೂ ಸೇರಿದಂತೆ ಬೇರೆ ಕೆಲವು ಕಾರಣಗಳೂ ಇದ್ದವು. ಆದ್ದರಿಂದ ಬಿಜೆಪಿಯ ಈ ವಿಜಯ, ಮತದಾನ ಮಾಡಿದವರಲ್ಲಿ ಕೇವಲ 31ಶೇ. ಮತಗಳಿಂದ ದೊರಕಿದ್ದರೂ, ಸಹಜವಾಗಿಯೇ ಜಾತ್ಯಾತೀತ ಪ್ರಜಾಪಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್ ಸೈದ್ಧಾಂತಿಕ ಯೋಜನೆಯನ್ನು ಮತ್ತು ಕಣ್ಣೋಟವನ್ನು ಅತ್ಯಂತ ಆಕ್ರಮಣಕಾರಿಯಾಗಿ ಅನುಸರಿಸುವತ್ತ ಸಾಗುತ್ತಿದೆ.

ಎಷ್ಟೆಂದರೂ, ಬಿಜೆಪಿ ಎಂಬುದು ಆರೆಸ್ಸೆಸ್‌ನ ರಾಜಕೀಯ 'ಕಬಂಧ' ಬಾಹು ತಾನೇ. 'ಹನಿಮೂನ್ ಅವಧಿ' ಮುಗಿಯುವ ಮೊದಲೇ, ಈ ಸರಕಾರದ ಮೊದಲ ನೂರು ದಿನಗಳು ಪೂರೈಸುವ ಮೊದಲೇ, ಈ ಅಜೆಂಡಾ ಆಗಲೇ ತ್ವರಿತವಾಗಿ ಅನಾವರಣಗೊಳ್ಳುತ್ತಿದೆ. 'ಅಭಿವೃದ್ಧಿ ಚುನಾವಣಾ ಅಜೆಂಡಾ'ದ ಜನತಾ ಅಂಶ ಆಗಲೇ ಗಾಳಿಯಲ್ಲಿ ಲೀನವಾಗಿ ಬಿಡುತ್ತಿದೆ. ಅಧಿಕಾರ ವಹಿಸಿಕೊಂಡ ಕೂಡಲೇ ಈ ಸರಕಾರ ಡೀಸೆಲ್, ಅಡುಗೆ ಅನಿಲ ಮುಂತಾದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸಿತು, ರೈಲ್ವೆ ದರಗಳನ್ನು ವಿಪರೀತವಾಗಿ ಏರಿಸಿತು. ಅದರ ಬಜೆಟ್ ಮತ್ತು ಸಂಸತ್ತಿನಲ್ಲಿ ತರುತ್ತಿರುವ ಮಸೂದೆಗಳ ಆದ್ಯತೆಗಳು ನವ–ಉದಾರವಾದಿ ಆರ್ಥಿಕ ಸುಧಾರಣೆಗಳನ್ನು ಯಾವುದೇ ನಾಚಿಕೆಯಿಲ್ಲದೆ ತರಲು ಅದು ಸನ್ನದ್ಧವಾಗಿದೆ ಎಂಬುದನ್ನು ತೋರಿಸುತ್ತಿವೆ.

ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಬೆಂಬಲ ಪಡೆದ ಭಾರತದ ಕಾರ್ಪೊರೇಟ್ ವಲಯದಿಂದ ಮೋದಿ ಚುನಾವಣಾ ಪ್ರಚಾರ–ಕ್ಕೆ ದೊರೆತ ಬೃಹತ್ ಬೆಂಬಲದ ಹಿನ್ನೆಲೆಯಲ್ಲಿ ಬಹುಶಃ ಸಹಜವಾಗಿಯೇ ಮೋದಿ ಸರಕಾರಕ್ಕೆ ಈ ಹಾದಿ ಹಿಡಿಯುವುದು ಅನಿವಾರ್ಯವಾಗಿದೆ. ಇದರ ಫಲಿತಾಂಶವೇ, ಜನತೆಯ ಹಿತಗಳನ್ನು, ದೇಶದ ಸಾರ್ವಭೌಮತೆಯನ್ನು ಬಲಿಗೊಟ್ಟಾದರೂ ವಿದೇಶಿ ಹೂಡಿಕೆಗಳು ಹೆಚ್ಚೆಚ್ಚಾಗಿ ಹರಿದು ಬರಲು ಸೌಕರ್ಯಗಳನ್ನು ಮತ್ತು ಭಾರತದ ಕಾರ್ಪೊರೇಟ್ ವಲಯಕ್ಕೆ ಇನ್ನಷ್ಟು ರಿಯಾಯ್ತಿಗಳನ್ನು ಒದಗಿಸುತ್ತಿರುವುದು.

ಬಾಯಿ ಮುಚ್ಚಿಸುವ ಭ್ರಮನಿರಸನ

ಬಿಜೆಪಿ ಈ ಬಾರಿ ಕೋಮುವಾದಿ ಅಜೆಂಡಾಕ್ಕೆ ಹೆಚ್ಚೇನೂ ಒತ್ತು ಕೊಡುತ್ತಿಲ್ಲ ಎಂದು ಚುನಾವಣಾ ಪ್ರಚಾರದ ವೇಳೆಯಲ್ಲಿ ವಾದ ಹೂಡುತ್ತಿದ್ದವರಲ್ಲಿ ಆಗಲೇ, ಈಗ ಹೊಸ ಸರಕಾರ ಅಧಿಕಾರ ವಹಿಸಿಕೊಂಡ ಕೆಲವೇ ವಾರಗಳಲ್ಲಿ, ತಮಗೆ ವಿಶ್ವಾಸಘಾತವಾಗಿದೆ ಎಂಬ ಭಾವನೆ ಉಂಟಾಗಿದೆ. ಅವರು ಬಾಯಿ ಮುಚ್ಚಿಕೊಳ್ಳಬೇಕಾಗಿ ಬಂದಿದೆ. ಹಿಂದುತ್ವದ ಮೂಲ ಅಜೆಂಡಾ – ಕಲಮು 370ರ ರದ್ದತಿ, ಸಮರೂಪದ ನಾಗರಿಕ ಸಂಹಿತೆ, ಅಯೋಧ್ಯೆಯ ವಿವಾದಿತ ಸ್ಥಳದಲ್ಲೇ ರಾಮ ಮಂದಿರ– ಎಲ್ಲವುಗಳೂ ಕೇಂದ್ರ ಸಂಪುಟದ ಮಂತ್ರಿಗಳ ಬಾಯಿಗಳಿಂದ ಹೊಮ್ಮಿವೆ. ಗೋವಾದ ಒಬ್ಬ ಮಂತ್ರಿ, ಬಿಜೆಪಿಯ ವಿಜಯದೊಂದಿಗೆ 'ಹಿಂದೂ ರಾಷ್ಟ್ರ' ಸ್ಥಾಪನೆ ಆರಂಭವಾಗಿದೆ ಎಂದೇ ಹೇಳಿಬಿಟ್ಟಿದ್ದಾರೆ!

ದೇಶಾದ್ಯಂತ ಕೋಮು ಧ್ರುವೀಕರಣ ತೀಕ್ಷ್ಣಗೊಂಡಿರುವುದು ಬುಡಮಟ್ಟದಲ್ಲಿ ಪ್ರಕಟವಾಗುತ್ತಿದೆ. ಇದರಿಂದಾಗಿ ಕೆಲವೆಡೆಗಳಲ್ಲಿ ಅಮಾನುಷ ಗಲಭೆಗಳು ನಡೆದಿವೆ. ಅಮಾಯಕ ಭಾರತೀಯರ ಜೀವಬಲಿ ನಡೆದಿದೆ. ಚುನಾವಣೆಗಳು ನಡೆಯಲಿದ್ದ ಸಂದರ್ಭದಲ್ಲೇ ಇಂತಹ ಕೋಮುವಾದಿ ಧ್ರುವೀಕರಣವನ್ನು ತರಲಾಗುತ್ತಿದೆ ಎಂದು ಈ ಅಂಕಣದಲ್ಲಿ ಗಮನಿಸಿದ್ದೆವು. ಮುಝಫ್ಫರ್‌ನಗರದ ಗಲಭೆಗಳಲ್ಲಿ ಹಲವಾರು ಮಂದಿ ಕೊಲ್ಲಲ್ಪಟ್ಟರು. ಗಾಯಗೊಂಡರು. ಅಲ್ಲದೆ 50ಸಾವಿರದಷ್ಟು ಮಂದಿ ತಮ್ಮ ಮನೆ–ಮಾರು ಬಿಟ್ಟು ಹೋಗಬೇಕಾಗಿ ಬಂತು.

ಎಲ್ಲ ಚುನಾವಣಾ ಗಳಿಕೆಗಾಗಿ

ಗೃಹ ಇಲಾಖೆಯ ಅಂಕಿ–ಅಂಶಗಳ ಪ್ರಕಾರ ಚುನಾವಣೆಗಳು ನಡೆಯಬೇಕಾದ ಸಂದರ್ಭದಲ್ಲಿ 2013ರಲ್ಲಿ ದೇಶದಲ್ಲಿ ಒಟ್ಟು 823 ಕೋಮುವಾದಿ ಹಿಂಸಾಚಾರದ ಘಟನೆಗಳು ನಡೆದಿವೆ. ಕೇವಲ ಉತ್ತರ ಪ್ರದೇಶವೊಂದರಲ್ಲೇ 2013ರಲ್ಲಿ 247 ಇಂತಹ ಘಟನೆಗಳು ನಡೆದಿವೆ. ಇಲ್ಲಿ 80 ಲೋಕಸಭಾ ಸೀಟುಗಳಲ್ಲಿ ಬಿಜೆಪಿ 71ನ್ನು ಮತ್ತು ಅದರ ಮಿತ್ರಪಕ್ಷಗಳು 2 ಸೀಟುಗಳನ್ನು ಗೆದ್ದುಕೊಂಡಿವೆ. 2014ರಲ್ಲೂ ಚುನಾವಣೆಗಳು ನಡೆಯುವ ಹಿಂದಿನ ಕೆಲವು ತಿಂಗಳುಗಳಲ್ಲಿಯೂ ಇದೇ ರಾಜ್ಯ ಕೋಮು ಹಿಂಸಾಚಾರದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿತ್ತು. ಎಪ್ರಿಲ್–ಜೂನ್ 2014ರ ಅವಧಿಯಲ್ಲಿ ದೇಶಾದ್ಯಂತ 149 ಕೋಮುವಾದಿ ಘರ್ಷಣೆಗಳು ನಡೆದವು. ಇದರಲ್ಲಿ ಉತ್ತರಪ್ರದೇಶದ ನಂತರ ಮಹಾರಾಷ್ಟ್ರದ ಹೆಸರು ಸೇರಿದೆ. ಇಲ್ಲಿ ಸದ್ಯದಲ್ಲೇ ವಿಧಾನ ಸಭಾ ಚುನಾವಣೆಗಳು ನಡೆಯಬೇಕಾಗಿದೆ.


ದಿಲ್ಲಿಯಲ್ಲಿ ಹೊಸ ಸರಕಾರ ಅಧಿಕಾರ ವಹಿಸಿಕೊಂಡ ಮೇ16ರ ನಂತರದ ಹತ್ತು ವಾರಗಳಲ್ಲಿ ಉತ್ತರ ಪ್ರದೇಶವೊಂದರಲ್ಲೇ ಕೋಮುವಾದಿ ಸ್ವರೂಪದ 605 ಘಟನೆಗಳು ನಡೆದಿವೆ ಎಂದು ರಾಷ್ಟ್ರೀಯ ಮಾಧ್ಯಮಗಳು ಅಧಿಕೃತ ಅಂಕಿ–ಅಂಶಗಳ ಆಧಾರದಲ್ಲಿ ಹೇಳುತ್ತಿವೆ. ಗಮನಿಸಬೇಕಾದ ಸಂಗತಿಯೆಂದರೆ ಇವುಗಳಲ್ಲಿ ಮೂರನೇ ಎರಡು ಭಾಗದಷ್ಟು ಸದ್ಯದಲ್ಲೇ ಉಪಚುನಾವಣೆಗಳು ನಡೆಯಬೇಕಾದ 12 ವಿಧಾನಸಭಾ ಕ್ಷೇತ್ರಗಳಲ್ಲಿ ಮತ್ತು ಸುತ್ತಮುತ್ತ ನಡೆದಿವೆ. ಬಿಹಾರದಿಂದಲೂ ಇಂತಹುದೇ ವರದಿಗಳು ಬರುತ್ತಿವೆ. ಅಲ್ಲಿಯೂ 10 ವಿಧಾನಸಭಾ ಕ್ಷೇತ್ರಗಳಲ್ಲಿ ಉಪಚುನಾವಣೆಗಳು ನಡೆಯಬೇಕಾಗಿದೆ. ಸಾರ್ವತ್ರಿಕ ಚುನಾವಣೆಗಳಲ್ಲಿ ಗೆದ್ದು ಕೇಂದ್ರ ಸರಕಾರವನ್ನು ರಚಿಸಿದ ಮೇಲೆ ಬಿಜೆಪಿ 'ಅಚ್ಛೇ ದಿನ್ ಆನೇವಾಲೇ ಹೈಂ'(ಒಳ್ಳೆಯ ದಿನಗಳು ಬರಲಿವೆ) ಮುಂತಾದ ತನ್ನ ಘೋಷಣೆಗಳನ್ನು ಮೂಲೆಗೆ ಎಸೆದಿದೆ. ಇನ್ನಷ್ಟು ಚುನಾವಣಾ ಗಳಿಕೆಗಳಿಗಾಗಿ ಭಂಡತನದಿಂದ ತನ್ನ ಆರೆಸ್ಸೆಸ್ ಬೇರುಗಳಿಗೆ ಮರಳಿದೆ ಎಂಬುದೀಗ ಸ್ಪಷ್ಟ.

ಸಾಮರಸ್ಯಕ್ಕೆ ಏಟು

ಇಂತಹ ಕೋಮು ಘರ್ಷಣೆಗಳನ್ನು ಪ್ರಚೋದಿಸುವಲ್ಲಿ 'ಸಾಮಾಜಿಕ ಇಂಜಿನಿಯರಿಂಗ್'ನ ಒಂದು ಅಂಶವೂ ಇದೆ. ಮುಝಫ್ಫರ್‌ನಗರ ಗಲಭೆಗಳು ಜಾಟರು ಮತ್ತು ಮುಸ್ಲಿಮರ ನಡುವೆ ಘರ್ಷಣೆ ತಂದಿಟ್ಟರೆ, ಸಹರಾಣಪುರ ಗಲಭೆಗಳು ಸಿಖ್ಖರು ಮತ್ತು ಮುಸ್ಲಿಮರ ನಡುವೆ ಘರ್ಷಣೆ ಉಂಟು ಮಾಡಿವೆ. ಬಿಎಸ್‌ಪಿ ಉಪಚುನಾವಣೆಗಳಿಂದ ದೂರ ನಿಂತಿರುವಾಗ ಬಿಜೆಪಿ ದಲಿತರ ಬೆಂಬಲ ಗಿಟ್ಟಿಸುವ ಪ್ರಯತ್ನ ನಡೆಸಿದೆ. ಬಿಎಸ್‌ಪಿಯ ಸ್ಥಾಪಕ ಕಾಂಶೀ ರಾಮ್ 1980ರ ದಶಕದ ಕೊನೆಯ ಭಾಗದಲ್ಲಿ ದಲಿತರು ಮತ್ತು ಮುಸ್ಲಿಮರನ್ನು ಒಂದೇ ವೇದಿಕೆಗೆ ತಂದಿದ್ದರು. ಇದು ನಂತರ ಬಿಎಸ್‌ಪಿ ರಾಜ್ಯದಲ್ಲಿ ಸರಕಾರವನ್ನು ರಚಿಸಲು ಅನುವು ಮಾಡಿಕೊಟ್ಟಿತು. ಬಿಜೆಪಿ ಈಗ ಈ ಐಕ್ಯತೆಯ ವಿಘಟನೆ, ವಿಶೇಷವಾಗಿ ರಾಜ್ಯದ ಪಶ್ಚಿಮ ಭಾಗದಲ್ಲಿ, ತನಗೆ ಚುನಾವಣಾ ಲಾಭ ಗಳಸಿಕೊಡುವಂತಾಗ ಬೇಕೆಂಬ ಪ್ರಯತ್ನದಲ್ಲಿದೆ. ಈ ರೀತಿಯಲ್ಲಿ ಸಾಮಾಜಿಕ ಸಾಮರಸ್ಯದ ವಿನಾಶ ನಮ್ಮ ದೇಶದ ಮತ್ತು ಜನತೆಯ ಐಕ್ಯತೆ ಮತ್ತು ಸಮಗ್ರತೆಗೆ ವಿನಾಶಕಾರಿಯಾಗಲಿದೆ. ಆದರೆ ತಮ್ಮ ಚುನಾವಣಾ ಮತ್ತು ರಾಜಕೀಯ ಗಳಿಕೆಗಳ ಮೇಲಷ್ಟೇ ಗಮನವಿಟ್ಟಿರುವ ಆರೆಸ್ಸೆಸ್/ಬಿಜೆಪಿಗೆ ಈ ರೀತಿ ನಮ್ಮ ಜನಗಳ ನಡುವಿನ ಸಾಮರಸ್ಯವನ್ನು ನಾಶಗೊಳಿಸುತ್ತಿರುವ ಬಗ್ಗೆ ಎಳ್ಳಷ್ಟೂ ಅಳುಕು ಇಲ್ಲ.

ಇಂತಹ ಪ್ರಯತ್ನಗಳು ಅವ್ಯಾಹತವಾಗಿ ಮುಂದುವರಿಯಲಿವೆ ಎಂಬ ಸಂಕೇತಗಳು ಆರೆಸ್ಸೆಸ್ ನಕ್ಷತ್ರಪುಂಜದ ಮುಖಂಡರುಗಳ ಉದ್ರೇಕಕಾರಿ ಭಾಷಣಗಳಿಂದ ಬರುತ್ತಲೇ ಇವೆ. "ಮುಸ್ಲಿಮರು ಗುಜರಾತ 2002ನ್ನು ಮರೆತಿರಬಹುದು, ಆದರೆ ಕಳೆದ ವರ್ಷದ ಮುಝಫ್ಫರ್‌ನಗರದ ಗಲಭೆಗಳನ್ನು ನೆನಪಿಸಿಕೊಳ್ಳುತ್ತಾರೆ" ಎಂದು ಕಳೆದ ವಾರ ಇಂದೋರಿನಲ್ಲಿ ಗುಡುಗಿರುವ ಒಬ್ಬ ವಿಹೆಚ್‌ಪಿ ಮುಖಂಡ ಮುಂದುವರೆದು "ಹನುಮಂತನ ಬಾಲಕ್ಕೆ ಬೆಂಕಿಯಿಟ್ಟರೆ ಲಂಕೆ ಸುಟ್ಟು ಬೂದಿಯಾಗುತ್ತದೆ" ಎಂದು ಬೆದರಿಸಿದ್ದಾನೆ. ಅದಕ್ಕೆ ಸ್ವಲ್ಪವೇ ಮುನ್ನ ಮತ್ತೊಬ್ಬ ವಿಹೆಚ್‌ಪಿ ಪೋಷಕ ಇತ್ತೀಚಿನ ಲೋಕಸಭಾ ಚುನಾವಣೆಗಳು ಮುಸ್ಲಿಮರಿಗೆ ತಿರುಗುಮುರುಗಾಗಿವೆ ಎಂದು ಬೆದರಿಸಿದ್ದ.

ಹೀಗೆ ಸಂಕೇತಗಳು ಸ್ಪಷ್ಟವಾಗಿವೆ. ಮುನ್ನೆಚ್ಚರಿಕೆ ಬಂದಿದೆ ಎಂದರೆ ಸಮರಕ್ಕೆ ಸನ್ನದ್ಧರಾಗಬೇಕು ಎಂದರ್ಥ. ಪ್ರತಿಯೊಬ್ಬ ದೇಶಪ್ರೇಮಿ ಭಾರತೀಯ ಈ ರೀತಿಯಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದನ್ನು ತಡೆಯಲು ಎದ್ದು ನಿಲ್ಲಬೇಕಾಗಿದೆ. ಏಕೆಂದರೆ ಇದು ನಮ್ಮ ಈ ಮಹಾನ್ ದೇಶವನ್ನು ಒಂದಾಗಿ ಹೆಣೆದಿರುವ ಶ್ರೀಮಂತ ಮತ್ತು ವೈವಿಧ್ಯಪೂರ್ಣ ಸಾಮಾಜಿಕ ಹಂದರವನ್ನು ದುರ್ಬಲಗೊಳಿಸುವ ಮತ್ತು ವಿಘಟಿತಗೊಳಿಸುವ ಸಾಧ್ಯತೆ ಇದೆ. ಈ ರೀತಿ ದುರ್ಬಲಗೊಳಿಸುವ, ವಿಘಟಿತಗೊಳಿಸುವ ಪ್ರಯತ್ನಗಳನ್ನು ನಮ್ಮೆಲ್ಲ ಶಕ್ತಿಯನ್ನು ಬಳಸಿ ಪ್ರತಿರೋಧಿಸಬೇಕಾಗಿದೆ. •



ಈತ ತಾನು ಬಿಜೆಪಿಯ ಬ್ರಾಂಡ್ ರಾಯಭಾರಿ ಎಂದು ತಿರುಗಾಡುತ್ತಿದ್ದಾನೆ, ಇದು ಓಕೆನಾ ಸಾರ್

ಕೃಪೆ: ಸುಧೀರ್ ತೈಲಂಗ್, ಡೆಕ್ಕನ್ ಕ್ರಾನಿಕಲ್

"ಕೇಂದ್ರದ ನೀತಿಗಳು ಜನವಿರೋಧಿಯಾಗಿವೆ" ಕೃಷಿ ಕೂಲಿಕಾರರ ಬೃಹತ್ ಬಹಿರಂಗ ಸಭೆಯಲ್ಲಿ

ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್





"ಒಂದು ಭಿನ್ನವಾದ ಆಡಳಿತವನ್ನು ನೀಡುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಆಡಳಿತವು ಹಿಂದಿನ ಕಾಂಗ್ರೆಸ್ ಆಡಳಿತಕ್ಕಿಂತ ಭಿನ್ನವಿಲ್ಲ" ಎಂದು ತ್ರಿಪುರಾ ರಾಜ್ಯದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅಭಿಪ್ರಾಯಪಟ್ಟರು. ಅವರು ತೆಲಂಗಾಣ ರಾಜ್ಯದ ವಾರಂಗಲ್ ನಗರದಲ್ಲಿ ಜುಲೈ 30 ರಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 8ನೇ ಅಖಿಲ ಭಾರತ ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿದ್ದ ಭಾರೀ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

'ಬಿಜೆಪಿ ಸರ್ಕಾರದ ನಡೆಯನ್ನು ವಿಶ್ಲೇಷಿಸಲು ಇನ್ನೂ ಸ್ವಲ್ಪ ಕಾಲ ಕಾಯಬೇಕಾಗಬಹುದು' ಎಂದ ಅವರು 'ಸಧ್ಯ ಮೋದಿ ಸರ್ಕಾರ ಅನುಸರಿಸುತ್ತಿರುವ ನೀತಿಗಳು ಜನವಿರೋಧಿಯಾಗಿವೆ' ಎಂದರು. 'ಪೆಟ್ರೋಲ್, ಡಿಸೆಲ್, ದರ ಏರಿಕೆ, ರೈಲು ಪ್ರಯಾಣ ದರ ಹೆಚ್ಚಳ, ಶ್ರೀಮಂತರ ಪರವಾದ ಬಜೆಟ್, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ದುರ್ಬಲಗೊಳಿಸುವ ಯೋಚನೆ ಮುಂತಾದವುಗಳಿಂದ ಬಿಜೆಪಿ ಸರ್ಕಾರ ಅನುಸರಿಸಲು ಹೊರಟಿರುವ ದಾರಿ ಯಾವುದು ಎಂಬುದು ಸ್ಪಷ್ಟವಾಗುತ್ತದೆ' ಎಂದು ಅವರು ಹೇಳಿದರು.

'ಅಗತ್ಯ ವಸ್ತುಗಳ ಬೆಲೆಗಳು ಗಗನ್ನಕ್ಕೇರಿವೆ. ಸದ್ಯದಲ್ಲೇ ಸಕ್ಕರೆ ಬೆಲೆ ಹೆಚ್ಚಾಗಲಿದೆ. ಜನತೆಯ ಮೇಲೆ ಹೊರೆ ಹೇರುವುದಿಲ್ಲ ಎಂದು ಹೇಳುತ್ತಿದ್ದ ಬಿಜೆಪಿ, ಚುನಾವಣೆಯ ನಂತರ ಶ್ರೀಮಂತರ ಪರವಾದ, ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲಕರವಾದ ನೀತಿಗಳನ್ನು ಜಾರಿಗೆ ತರುತ್ತಾ ಬಡವರ, ದಲಿತರ, ಆದಿವಾಸಿಗಳ ವಿರುದ್ಧವಾದ ನೀತಿಗಳನ್ನು ಅನುಸರಿಸುತ್ತಿದೆ. ಮೋದಿ ಸರ್ಕಾರ ಭೂಸ್ವಾಧೀನ ಕಾಯ್ದೆಯನ್ನು ಬದಲಾಯಿಸಲು ಹೊರಟಿದ್ದು, ಆ ಮೂಲಕ ಬಡ ರೈತರ ಭೂಮಿಯನ್ನು ಬಲವಂತವಾಗಿ ಸ್ವಾಧೀನಪಡಿಸಿ ಕಾರ್ಪೊರೇಟ್ ಕಂಪನಿಗಳಿಗೆ ನೀಡಲು ಮುಂದಾಗಿದೆ.

ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಇತ್ತೀಚೆಗೆ ಹುಟ್ಟುಹಾಕಲಾದ ಕೋಮು ಗಲಭೆಗಳ ಬಗ್ಗೆ ಆಂತಂಕ ವ್ಯಕ್ತಪಡಿಸಿದ ಮಾಣಿಕ್‌ಸರ್ಕಾರ ಆರೆಸ್ಸೆಸ್ ನಿಯಂತ್ರಿತ ಬಿಜೆಪಿ ಸರ್ಕಾರದಿಂದಾಗಿ ಅಲ್ಪ ಸಂಖ್ಯಾತರಿಗೆ ರಕ್ಷಣೆ ಇಲ್ಲದಂತಾಗಿದೆ. ಮೋದಿ ಸರ್ಕಾರ ಹೆಚ್ಚು ಹೆಚ್ಚಾಗಿ ಅಮೇರಿಕದ ಪರವಾದ ಧೋರಣೆಯನ್ನು ಅನುಸರಿಸುತ್ತಿದ್ದು



ಗಾಜಾ ಪ್ರದೇಶದ ಮೇಲೆ ಇಸ್ರೆಲ್ ನಡೆಸಿದ ಅಮಾನುಷ ದಾಳಿಯ ವಿಷಯದಲ್ಲಿ ಅದು ಸ್ಪಷ್ಟವಾಗಿದೆ. ಕೃಷಿ ಕೂಲಿಕಾರರು ದೇಶಾದ್ಯಂತ ಇತರ ಶೋಷಿತ ಜನವಿಭಾಗಗಳನ್ನು ಒಂದುಗೂಡಿಸಿ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಹಾಗೂ ಕೋಮುವಾದಿ ಹುನ್ನಾರಗಳ ವಿರುದ್ಧ ಹೋರಾಡಬೇಕು ಎಂದು ಅವರು ಮನವಿ ಮಾಡಿದರು. ಕೇಂದ್ರದಲ್ಲಿ ಸರ್ಕಾರಗಳು ಅನುಸರಿಸುತ್ತಾ ಬಂದಿರುವ ನವ ಉದಾರೀಕರಣದ ನೀತಿಗಳಿಂದ ಅತಿ ಹೆಚ್ಚು ಬಾಧಿತರಾಗಿರುವ ಕೃಷಿ ಕೂಲಿಕಾರರ ಹಿತಗಳನ್ನು, ಹಕ್ಕುಗಳನ್ನು ರಕ್ಷಿಸುವಲ್ಲಿ ಸಿಪಿಐ(ಎಂ) ಮುಂಚೂಣಿಯಲ್ಲಿ ಇರುತ್ತದೆ ಎಂದು ಅವರು ಹೇಳಿದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಎ. ವಿಜಯರಾಘವನ್ ಮಾತನಾಡುತ್ತ ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಜನರ ಪಾಲಿಗೆ ಮೌನ ಹಂತಕನಾಗಿದ್ದರೆ ಪ್ರಸಕ್ತ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಆರ್ಭಟಿಸಿ ಜನರನ್ನು ಕೊಲ್ಲುವ ಸರ್ಕಾರವಾಗಿದೆ. ಎಂದರು. ದೇಶದ ಲಕ್ಷಾಂತರ ಕೃಷಿ ಕೂಲಿಕಾರರಿಗೆ ಪ್ರಯೋಜನಕಾರಿಯಾಗಿದ್ದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಬದಲಾಯಿಸಿ ನಿರುಪಯುಕ್ತಗೊಳಿಸಲು ಮೋದಿ ಸರ್ಕಾರ ಯೋಚಿಸುತ್ತಿದೆ ಎಂದು ಟೀಕಿಸಿದ ಅವರು ಹಾಗೇನಾದರೂ ಆದರೆ ದೇಶದ ಉದ್ದಗಲಕ್ಕೂ ಸರ್ಕಾರ ವ್ಯಾಪಕ ಪ್ರತಿಭಟನೆ ಎದುರಿಸಬೇಕಾಗುವುದು ಎಂದು ಎಚ್ಚರಿಸಿದರು. 4 ದಿನಗಳ ಕಾಲ ನಡೆಯಲಿರುವ ಸಮ್ಮೇಳನದಲ್ಲಿ 55 ಲಕ್ಷ ಕೃಷಿ ಕೂಲಿಕಾರರನ್ನು ಪ್ರತಿನಿಧಿಸುವ ಪ್ರತಿನಿಧಿಗಳು ಕೇಂದ್ರ ಸರ್ಕಾರದ ನವ ಉದಾರವಾದಿ ನೀತಿಗಳ ವಿರುದ್ಧ ಹೋರಾಡಲು ಕಾರ್ಯಕ್ರಮಗಳನ್ನು ರೂಪಿಸುವರು ಎಂದು ಅವರು ಹೇಳಿದರು.

ಕೃಷಿಕೂಲಿಕಾರರ ಸಂಘದ ತೆಲಂಗಾಣಾ ರಾಜ್ಯ ಅಧ್ಯಕ್ಷರಾದ ಜಿ. ನಾಗಯ್ಯ ಸಭೆಯ ಅ ಧ್ಯಕ್ಷತೆ ವಹಿಸಿದ್ದರು. ಇದಕ್ಕೂ ಮೊದಲು ನಗರದ ಎರಡು ಕೇಂದ್ರಗಳಿಂದ ಎರಡು ಬೃಹತ್ ಮೆರವಣಿಗೆಗಳಲ್ಲಿ ವಾರಂಗಲ್ ಮತ್ತು ಕಮ್ಮಮ್ ಜಿಲ್ಲೆಗಳ ಸಾವಿರಾರು ಕೃಷಿ ಕೂಲಿಕಾರರು ಮತ್ತು ಆದಿವಾಸಿಗಳು ಬಹಿರಂಗ ಸಭೆಯ ಸ್ಥಳಕ್ಕೆ ಬಂದರು. ಬಹಿರಂಗ ಸಭೆಯ ಸ್ಥಳಕ್ಕೆ ತೆಲಂಗಾಣ ಸಶಸ್ತ್ರ ಹೋರಾಟದ ವೀರ ವನಿತೆ ಚಾಕಲಿ ಐಲಮ್ಮ ಅವರ ಹೆಸರನ್ನು ಇಡಲಾಗಿತ್ತು. ಸಿಪಿಐ(ಎಂ) ತೆಲಂಗಾಣ ರಾಜ್ಯ ಸಮಿತಿಯ ಕಾರ್ಯದರ್ಶಿ ಟಿ. ವೀರಭದ್ರಂ, ಸಿಪಿಐ(ಎಂ)ನ ಹಿರಿಯ ನಾಯಕಿ ಮಲ್ಲು ಸ್ವರಾಜ್ಯಂ, ಸಿಪಿಐ(ಎಂ) ಶಾಸಕ ಸುನ್ನಮ್ ರಾಜಯ್ಯ ಮಾತನಾಡಿದರು. ಕೃಷಿಕೂಲಿಕಾರರ ಸಂಘದ ಅಖಿಲ ಭಾರತ ಅಧ್ಯಕ್ಷರಾದ ಪಾಟೂರು ರಾಮಯ್ಯ, ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮುಲ್ಲಾ, ಕೃಷಿ ಕೂಲಿಕಾರರ ಸಂಘದ ತೆಲಂಗಾಣ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ. ವೆಂಕಟ್, ಆಂಧ್ರ ಪ್ರದೇಶ ರಾಜ್ಯ ಸಮಿತಿಯ ಅಧ್ಯಕ್ಷರಾದ ವಿ. ವೆಂಕಟೇಶ್ವರಲು ಮತ್ತು ಕಾರ್ಯದರ್ಶಿ ಪಿ. ಮುರಳೀ ಕೃಷ್ಣನ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು.



ಸಮ್ಮೇಳನದ ಉದ್ಘಾಟನೆ :

ಸಮ್ಮೇಳನದ ಸಭಾಂಗಣಕ್ಕೆ ವೀರ ತೆಲಂಗಾಣ ಹೋರಾಟದ ನಾಯಕ ಪಿ.ಸುಂದರಯ್ಯನವರ ಹೆಸರು ಇಡಲಾಗಿತ್ತು. ಜುಲೈ 31 ರ ಬೆಳಿಗ್ಗೆ ಕೃಷಿ ಕೂಲಿಕಾರರ ಸಂಘದ ಅಖಿಲ ಭಾರತ ಅಧ್ಯಕ್ಷರಾದ ಪಿ. ರಾಮಯ್ಯನವರು ಧ್ವಜರೋಹಣ ಮಾಡುವುದರೊಂದಿಗೆ ಸಮ್ಮೇಳನದ ಕಲಾಪಗಳಿಗೆ ಚಾಲನೆ ನೀಡಿದರು. ಹುತಾತ್ಮರ ಸ್ತಂಭಕ್ಕೆ ಭಾವಪೂರ್ಣ ಪುಷ್ಪ ನಮನ ಸಲ್ಲಿಸಲಾಯಿತು.

ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಿದ ಬಳಿಕ ಖ್ಯಾತ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಿಕ್ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ನವ ಉದಾರೀಕರಣದ ನೀತಿಗಳ ಪರಿಣಾಮವಾಗಿ ದೇಶದಲ್ಲಿ ವ್ಯಾಪಕಗೊಳ್ಳುತ್ತಿರುವ ಕೃಷಿ ಬಿಕ್ಕಟ್ಟಿನಿಂದ ಕೃಷಿ ಕೂಲಿಕಾರರು ಮತ್ತು ಬಡ ರೈತರು ಹೆಚ್ಚೆಚ್ಚು ಬಾಧಿತರಾಗುತ್ತಿದ್ದಾರೆ. ಸ್ವಾತಂತ್ರ್ಯ ನಂತರ ಭಾರತ ಸರ್ಕಾರ ಕ್ರಾಂತಿಕಾರಕ ಭೂ ಸುಧಾರಣೆಗಳನ್ನು ಜಾರಿಗೆ ತರದಿದ್ದರೂ ನೀರಾವರಿ, ಸಂಶೋಧನೆ, ಸಬ್ಸಿಡಿ, ಕೃಷಿ ಉತ್ಪನ್ನಗಳ ಖರೀದಿ ಮೂಲಕ ಕೃಷಿ ರಂಗಕ್ಕೆ ಪ್ರೋತ್ಸಾಹ ನೀಡಿತ್ತು. ಇದರ ಪರಿಣಾಮವಾಗಿ ಕೃಷಿ ಉತ್ಪಾದಕತೆ ವಸಾಹತುಶಾಹಿ ಆಡಳಿತ ಅವಧಿಯ ಉತ್ಪಾದಕತೆಗಿಂತ ಹೆಚ್ಚಾಯಿತು. ಆದರೆ ಉದಾರೀಕರಣದ ನೀತಿಗಳ ಅನುಷ್ಟಾನದೊಂದಿಗೆ ಸಬ್ಸಿಡಿ ಹಿಂಪಡೆಯಲಾಯಿತು. ಖರೀದಿ ನಿಲ್ಲಿಸಲಾಯಿತು. ಆಮದುಗಳ ಮೇಲಿನ ನಿರ್ಬಂಧಗಳನ್ನು ಕೈಬಿಡಲಾಯಿತು. ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗದಂತಾಯಿತು. ಕೃಷಿ ಉತ್ಪಾದನೆ ಇಳಿಮುಖವಾಯಿತು. ಆಹಾರದ ತಲಾ ಲಭ್ಯತೆ ಕುಸಿಯಿತು. ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಬಡವರು ತೀವ್ರ ಬಾಧೆಗೆ ಒಳಗಾದರು.

ಇದೇ ಸಮಯದಲ್ಲಿ ಸರ್ಕಾರದ ಉಗ್ರಾಣಗಳಲ್ಲಿ ಲಕ್ಷಗಟ್ಟಲೆ ಟನ್ ಆಹಾರ ದಾನ್ಯಗಳು ಕೊಳೆಯುತ್ತಿದ್ದವು. ಹೆಚ್ಚು ಬೆಲೆ

→

ಜನಶಕ್ತಿ
ಕನ್ನಡ ವಾರಪತ್ರಿಕೆ



→ ಆಹಾರ ಖರೀದಿಸಿದ ಆಹಾರ ದಾನ್ಯಗಳನ್ನು ಕಡಿಮೆ ಬೆಲೆಗೆ ಬಡವರಿಗೆ ವಿತರಿಸಿದರೆ ಹಣಕಾಸು ಕೊರತೆ ಉಂಟಾಗುತ್ತದೆ ಮತ್ತು ಹಣದುಬ್ಬರ ತೀವ್ರವಾಗುತ್ತದೆ ಎಂಬ ತಪ್ಪು ವಾದವನ್ನು ಪ್ರತಿಪಾದಿಸಲಾಯಿತು. ಜನರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾದರೆ ಹಣದುಬ್ಬರ ಉಂಟಾಗುತ್ತದೆ ಎಂಬುದನ್ನು ಒಪ್ಪಬಹುದು. ಆದರೆ ಹಸಿದವರಿಗೆ ಆಹಾರ ದಾನ್ಯಗಳನ್ನು ವಿತರಿಸಿದರೆ ಹಣದುಬ್ಬರ ಹೇಗೆ ಉಂಟಾಗುತ್ತದೆ?

ಹಣಕಾಸು ಕೊರತೆಯನ್ನು ಐ.ಎಂ.ಎಫ್ ಒಪ್ಪುವುದಿಲ್ಲ. ಅದೊಂದು ಕೆಟ್ಟ ಆಡಳಿತ ಎನ್ನುತ್ತದೆ. ಜನ ಉಪವಾಸವಿದ್ದರೂ, ಆಹಾರ ದಾನ್ಯಗಳು ಕೊಳೆಯುತ್ತಿದ್ದರೂ ಅದನ್ನು ಜನರಿಗೆ ವಿತರಿಸಬಾರದು. ಹಣಕಾಸು ಕೊರತೆ ಹೆಚ್ಚಾಗಬಾರದು. ಅದನ್ನು ಬೇಕಾದರೆ ಬೇರೆ ದೇಶಗಳಿಗೆ ಮಾರಾಟ ಮಾಡಬಹುದು. ದೇಶದ ಒಳಗೆ ಹಣಕಾಸು ಮುಕ್ತವಾಗಿ ಹರಿದು ಬರುತ್ತಿರಬೇಕು. ಇದನ್ನು ಪಿ. ಚಿದಂಬರಂ ಹೇಳುತ್ತಿದ್ದರು. ಅದನ್ನೇ ಈಗ ಅರುಣ್ ಜೇಟ್ಲಿ ಹೇಳುತ್ತಿದ್ದಾರೆ.

ರಾಜಾಸ್ತಾನದ ಬಿಜೆಪಿ ಮುಖ್ಯಮಂತ್ರಿ ವಸುಂಧರ ರಾಜೆ ಸಿಂಧಿಯಾ ಪ್ರಾಧಾನ ಮಂತ್ರಿಗೆ ಪತ್ರವೊಂದನ್ನು ಬರೆದು ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಅಡಿಯಲ್ಲಿ ವರ್ಷದಲ್ಲಿ 100 ದಿನಗಳ ಕೆಲಸವನ್ನು ಹಕ್ಕಾಗಿ ಪಡೆಯಲು ಇರುವ ಅವಕಾಶವನ್ನು ಬದಲಾಯಿಸಿ ಅದನ್ನು ಕೂಲಿಗಾಗಿ ಕಾಳು ಯೋಜನೆ ಅಂತಹ ಒಂದು ಯೋಜನೆಯನ್ನಾಗಿ ಮಾರ್ಪಡಿಸಬೇಕೆಂಬ ಸಲಹೆ ನೀಡಿದ್ದಾರೆ. ಜೇಟ್ಲಿ ತನ್ನ ಬಜೆಟ್‌ನಲ್ಲಿ ಈ ಯೋಜನೆಗಾಗಿ ಕಳೆದ ಸಲಕ್ಕಿಂತ ಹೆಚ್ಚು ಹಣವನ್ನು ಮೀಸಲಿಡಲು ಮುಂದಾಗಲಿಲ್ಲ. ಯೋಜನೆಯನ್ನು ಕ್ರಮೇಣ ಕೈ ಬಿಡುವ ಮೋದಿ ಸರ್ಕಾರದ ಈ ಯೋಚನೆಯನ್ನು ಬಲವಾಗಿ ವಿರೋಧಿಸಬೇಕಾಗಿದೆ.

ಕೃಷಿ ಕ್ಷೇತ್ರದ ಉಳುವಿಗಾಗಿ ದೊಡ್ಡ ಹೋರಾಟ ನಡೆಯಬೇಕಿದೆ. ನಮಗೆ ಭೂಮಾಲಿಕ ಪ್ರಧಾನವಾದ ಕೃಷಿ ರಂಗ ಬೇಕಿಲ್ಲ. ಭೂ ಸುಧಾ ರಣೆ ನಮ್ಮ ಪ್ರಮುಖ ಘೋಷಣೆ. ಭಾರತದಲ್ಲಿ ಸಣ್ಣ ರೈತರು ದೊಡ್ಡ ಸಂಖ್ಯೆಯಲ್ಲಿದ್ದಾರೆ ಅವರ ಹಿತ ಕಾಪಾಡಬೇಕು. ಅವರು ಸಹಕಾರಿ ಸಂಘಗಳನ್ನು ರಚಿಸಿಕೊಳ್ಳಲು ಸಾಧ್ಯವಾಗಬೇಕು. ಕೃಷಿ ಕೂಲಿಕಾರರು ಸಹ ಸಹಕಾರಿ ಸಂಘಗಳನ್ನು ರಚಿಸಿಕೊಂಡು, ಕೃಷಿ ಯಂತ್ರೋಪ್ರಕರಣಗಳನ್ನು ಬಳಸಿಕೊಂಡು ಪರ್ಯಾಯವನ್ನು ಕಂಡುಕೊಳ್ಳುವಂತಾಗಬೇಕು.

ಪ್ರಧಾನ ಕಾರ್ಯದರ್ಶಿ ವರದಿ:

ಪ್ರಧಾನ ಕಾರ್ಯದರ್ಶಿ ಎ. ವಿಜಯರಾಘವನ್ ವರದಿಯನ್ನು ಮಂಡಿಸುತ್ತಾ ವಾರಂಗಲ್ ಚಾರಿತ್ರಿಕ ಸಶಸ್ತ್ರ ತೆಲಂಗಾಣ ಹೋರಾಟದ ಹೃದಯ ಭಾಗವಾಗಿದೆ. ಹೈದರಾಬಾದ್ ನಿಜಾಮನ ಪಾಳೆಗಾರಿ ದಮನಕ್ಕೆ ಒಳಗಾಗಿದ್ದ ರೈತ ಮತ್ತು ಕೂಲಿಕಾರರ ಬಿಡುಗಡೆಗಾಗಿ ನಡೆದ ಹೋರಾಟ ಅದಾಗಿತ್ತು. ಇದರ ಪರಿಣಾಮವಾಗಿ ಸ್ವತಂತ್ರ ಭಾರತದ ಮೊದಲ ಸರ್ಕಾರ ಭೂ ಸುಧಾರಣೆಗಳ ಪ್ರಶ್ನೆಯನ್ನು ಎತ್ತಿಕೊಳ್ಳುವಂತಾಯಿತು. ತಮ್ಮ ಜೀವಿತಾವಧಿಯಲ್ಲೇ ದಂತಕತೆಯಾಗಿದ್ದ ಪಿ. ಸುಂದರಯ್ಯ ಈ ಹೋರಾಟದ ರೂವಾರಿಯಾಗಿದ್ದರು. ಕೃಷಿ ಕೂಲಿಕಾರರನ್ನು ಒಂದು ಪ್ರತ್ಯೇಕ ವರ್ಗ ಸಂಘಟನೆಯಲ್ಲಿ ಸಂಘಟಿಸುವುದರ ಅಗತ್ಯವನ್ನು ಅರಿತ ಅವರು ಮೊಟ್ಟ ಮೊದಲ ಕೃಷಿಕೂಲಿಕಾರರು ಸಂಘವನ್ನು ಕಟ್ಟಿದರು. ಅನಂತರ ಅದೇ ಮಾದರಿಯಲ್ಲಿ ಕೇರಳ ಮತ್ತು ಪಂಜಾಬ ರಾಜ್ಯಗಳಲ್ಲಿ ಕೃಷಿ ಕೂಲಿಕಾರರ ಸಂಘಗಳನ್ನು ಆರಂಭಿಸಲಾಯಿತು. ಬದಲಾದ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಕೂಷಿ ಕೂಲಿಕಾರರ 8 ನೇ ಅಖಿಲ ಭಾರತ ಸಮ್ಮೇಳನವು ತೆಲಂಗಾಣ ಸಶಸ್ತ್ರ ಹೋರಾಟದ ಸ್ಥಳದಲ್ಲಿ ನಡೆಯುತ್ತಿರುವುದು ಹೆಮ್ಮೆ ಪಡುವ ಹಾಗೂ ಸ್ಪೂರ್ತಿ ಪಡೆಯುವ ವಿಷಯವಾಗಿದೆ ಎಂದರು.



ಪ್ರಧಾನ ಕಾರ್ಯದರ್ಶಿ ವರದಿಯಲ್ಲಿ 3 ಭಾಗಗಳಿವೆ. (1) ಕೃಷಿ ಕೂಲಿಕಾರರ ಇಂದಿನ ಸ್ಥಿತಿಗತಿ ಹಾಗೂ ಕಾರ್ಷಿಕ ರಂಗದಲ್ಲಿ ಆಗುತ್ತಿರುವ ಬದಲಾವಣೆಗಳು. (2) ಕೃಷಿ ಕೂಲಿಕಾರರ ಸಂಘದ ಮಧ್ಯಪ್ರವೇಶ. (3) ಸಂಘಟನಾ ವಿಮರ್ಶೆ.



ಕಳೆದ ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಾ ಬಂದಿರುವ ಸರ್ಕಾರಗಳು ಅನುಸರಿಸುತ್ತಾ ಬಂದಿರುವ ಉದಾರೀಕರಣದ ನೀತಿಗಳ ಫಲವಾಗಿ ಕಾರ್ಷಿಕ ಬಿಕ್ಕಟ್ಟು ತೀವ್ರಗೊಂಡಿದೆ. ಗ್ರಾಮೀಣ ಬಡವರು ಅಂಚಿನೆಡೆಗೆ ತಳ್ಳಲ್ಪಟ್ಟಿದ್ದಾರೆ. ಸರ್ಕಾರದ ಮಧ್ಯಪ್ರವೇಶ ಇಲ್ಲವಾಗಿದೆ. ಉತ್ಪಾದನಾ ವೆಚ್ಚ ಹೆಚ್ಚಾಗಿದೆ. ಉತ್ಪಾದಕತೆ ಕುಸಿದಿದೆ. 65% ರೈತರು ಸಾಲದ ಶೂಲಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಕಳೆದ 17 ವರ್ಷಗಳಲ್ಲಿ 2,84,694 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜೀವನ ನಿರ್ವಹಣೆಗಾಗಿ, ಮಾಡಿದ ಸಾಲ ತೀರಿಸಲಿಕ್ಕಾಗದೆ ಸಣ್ಣ ರೈತರು ಭೂಮಿ ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ. ಸರ್ಕಾರದ ಬಲವಂತದ ಭೂ ಸ್ವಾಧೀನ ಕ್ರಮಗಳಿಂದಾಗಿಯೂ ರೈತರು ಭಾರೀ ಪ್ರಮಾಣದಲ್ಲಿ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಕಳೆದ ಒಂದು ದಶಕದಲ್ಲಿ ಪ್ರತಿದಿನ ಸರಾಸರಿ 2500 ರೈತರು ಕೃಷಿ ರಂಗವನ್ನು ತೊರೆದು ಭೂರಹಿತರ ಸಮೂಹವನ್ನು ಸೇರಿದ್ದಾರೆ. ಇದರಿಂದಾಗಿ 1987–88 ರಲ್ಲಿ 35% ರಷ್ಟಿದ್ದ ಗ್ರಾಮೀಣ ಭೂರಹಿತರ ಪ್ರಮಾಣ 2011–2012 ರಲ್ಲಿ 49% ಕ್ಕೆ ಏರಿದೆ. ಸ್ವಾತಂತ್ರ್ಯಾ ನಂತರ ಮೊಟ್ಟ ಮೊದಲ ಬಾರಿಗೆ ಕೃಷಿ ಕೂಲಿಕಾರರ ಸಂಖ್ಯೆ ಕೃಷಿಕರ ಸಂಖ್ಯೆಗಿಂತ ಹೆಚ್ಚಾಗಿದೆ.

ಕೃಷಿಯೇತರ ರಂಗಗಳಲ್ಲಿ ಹೆಚ್ಚೆಚ್ಚು ಉದ್ಯೋಗಗಳು ಸೃಷ್ಟಿಯಾಗದೆ ಇರುವುದರಿಂದ ಕೃಷಿ ರಂಗದ ಮೇಲಿನ ಅವಲಂಭನೆ ಹೆಚ್ಚಾಗಿದೆ. ಕೃಷಿ ರಂಗದಲ್ಲಿ ಹೆಚ್ಚುತ್ತಿರುವ ಯಾಂತ್ರೀಕರಣ ಹಾಗೂ ತೋಟಗಾರಿಕಾ ಬೆಳೆಗಳಿಗೆ ಹೆಚ್ಚಿದ ಆದ್ಯತೆಯಿಂದಾಗಿ ಕೃಷಿ ಕೂಲಿಕಾರರಿಗೆ ಅಗತ್ಯವಿರುವಷ್ಟು ಕೆಲಸ ಸಿಗದಂತಾಗಿದೆ. ಹೊಟ್ಟೆಪಾಡಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಅಲ್ಲಿ ದಿನಗೂಲಿಗಳಾಗಿ, ಅಸಂಘಟಿತ ವಲಯದ ಕಾರ್ಮಿಕರಾಗಿ ಅಲ್ಪಸ್ವಲ್ಪ ಸಂಪಾದನೆ ಮಾಡಿಕೊಂಡು ಜೀವನ ಮಾಡುತ್ತಾರೆ.

ಕೃಷಿ ಕೂಲಿಕಾರರಾಗಿ ರಾಜ್ಯ ಸರ್ಕಾರಗಳು ಕನಿಷ್ಠ ಕೂಲಿಯನ್ನು ಪ್ರಕಟಿಸುತ್ತವೆ ಆದರೆ ಜಾರಿ ಮಾಡಿಸುವುದಿಲ್ಲ. ಉದ್ಯೋಗಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಭ್ರಷ್ಟಾಚಾರ ಮುಕ್ತವಾಗಿ ಜಾರಿಗೊಳಿಸುವುದಿಲ್ಲ. ಈಗ ಬಂದಿರುವ ಬಿಜೆಪಿ ಸರ್ಕಾರ ಉದ್ಯೋಗ ಖಾತ್ರಿ ಯೋಜನೆಯನ್ನೇ ರದ್ದು ಮಾಡಲು ಯೋಚಿಸುತ್ತಿದೆ. ಸಾರ್ವಜನಿಕ ರೇಷನ್ ಪದ್ಧತಿಯನ್ನು ಸಾರ್ವತ್ರಿಕಗೊಳಿಸಲು ಸರ್ಕಾರ ಮುಂದಾಗುತ್ತಿಲ್ಲ. ಆಹಾರ ಭದ್ರತಾ ಕಾಯ್ದೆಯಲ್ಲಿ ಅನೇಕ ಲೋಪದೋಷಗಳಿದ್ದರೂ ಅದೂ ಸಹ ಜಾರಿಗೆ ಬರುತ್ತಿಲ್ಲ. ಕೃಷಿ ಕೂಲಿಕಾರರಲ್ಲಿ ಮಹಿಳೆಯರು ಮತ್ತು ದಲಿತರು ಹಾಗೂ ಆದಿವಾಸಿಗಳು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರೇ ಅತಿ ಹೆಚ್ಚು ಶೋಷಣೆ ಹಾಗೂ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾರೆ. ಒಂದು ಸಮಗ್ರ ಕೇಂದ್ರಿಯ ಶಾಸನದ ಕೊರತೆಯಿಂದಾಗಿ ಕೃಷಿ ಕೂಲಿಕಾರರಿಗೆ ಯಾವುದೇ ಸಮಾಜಿಕ ಭದ್ರತೆ ಇಲ್ಲದಂತಾಗಿದೆ.

ಕಳೆದ ಅಖಿಲ ಭಾರತ ಸಮ್ಮೇಳನ (2010 ತ್ರಿಚಿರಾಪಳ್ಳಿ)ದ ನಂತರದ ಅವಧಿಯಲ್ಲಿ ಸಂಘದ ಮುತುವರ್ಜಿ, ಮಧ್ಯಪ್ರವೇಶ ಹೆಚ್ಚಾಗಿದೆ. ಕೂಲಿಗಾಗಿ, ಭೂಮಿಗಾಗಿ, ಮನೆ ನಿವೇಶನಗಳಿಗಾಗಿ, ಉದ್ಯೋಗ ಖಾತ್ರಿ ಯೋಜನೆ, ರೇಷನ್ ಪದ್ಧತಿಯ ಸಾರ್ವತ್ರೀಕರಣಕ್ಕಾಗಿ, ಮಹಿಳಾ ಕೃಷಿ ಕೂಲಿಕಾರರ ಪ್ರಶ್ನೆಗಳಿಗಾಗಿ, ಜಾತಿ ಅಸ್ಪೃಶ್ಯತೆ ವಿರುದ್ಧವಾಗಿ ದೇಶವ್ಯಾಪಿಯಾಗಿಯೂ ಸ್ಥಳೀಯವಾಗಿಯೂ ಅನೇಕ ಪರಿಣಾಮಕಾರಿ ಹೋರಾಟಗಳನ್ನು ನಡೆಸಲಾಗಿದೆ. ಆದರೆ ಅದು ಸಾಲದು. ಮುಂದಿನ ದಿನಗಳಲ್ಲಿ ಧಾಳಿಗಳು ಹೆಚ್ಚಾಗಲಿದ್ದು ವ್ಯಾಪಕವಾದ, ಸಮರಶೀಲವಾದ ಹೋರಾಟಗಳನ್ನು ರೂಪಿಸುವ ಕುರಿತು ಚರ್ಚಿಸಬೇಕಾಗಿದೆ ಎಂದು ಹೇಳಿದರು.

ಈ ಅವಧಿಯಲ್ಲಿ ಸಂಘಟನೆ 13 ರಾಜ್ಯಗಳಿಗೆ ವಿಸ್ತರಿಸಿದೆ. ಪಶ್ಚಿಮ ಬಂಗಾಳದಿಂದಲೂ 5 ಜನ ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಿದ್ದಾರೆ. 55 ಲಕ್ಷ ಸದಸ್ಯತ್ವದ ಗುರಿ ದಾಟಲು ಸಾಧ್ಯವಾಗಿದೆ. ಆದರೆ ಅಸಮಾನ ಬೆಳವಣಿಗೆ ಮುಂದುವರೆದಿದೆ. ಹಿಂದಿ ರಾಜ್ಯಗಳಲ್ಲಿ ಸಂಘಟನೆಯ ವಿಸ್ತರಣೆ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಅಖಿಲ ಭಾರತ ಕೇಂದ್ರ, ಕೇಂದ್ರ ಕಾರ್ಯಕಾರಿ ಸಮಿತಿ, ಜನರಲ್ ಕೌನ್ಸಿಲ್‌ಗಳ ಕೆಲಸ ಹಾಗೂ ಹಲವು ರಾಜ್ಯ ಸಮಿತಿಗಳ ಕಾರ್ಯಾಚರಣೆಯೂ ಸಮಾಧಾನಕರವಾಗಿದೆ. ಆದರೆ ಜಿಲ್ಲಾ ಹಾಗೂ ಕೆಳಮಟ್ಟದ ಸಮಿತಿಗಳ ರಚನೆ ಮತ್ತು ಅವುಗಳನ್ನು ಕ್ರಿಯಾಶೀಲಗೊಳಿಸುವ ಕರ್ತವ್ಯದ ನಿರ್ವಹಣೆ ಸಾಲದು. ನಮ್ಮ ಸಂಘಟನೆ ಬಡವರಲ್ಲಿ ವಿಶ್ವಾಸ ಮೂಡಿಸಬೇಕು. ಅವರು ಸಂಘವನ್ನು ಗುರುತಿಸುವಂತಾಗಬೇಕು. ನಮ್ಮ ಸಂಘ ಅವರ ಮನೆಬಾಗಿಲಿಗೆ ಹೋಗಬೇಕು.

ದೇಶದ ರಾಜಕಾರಣಕ್ಕೆ ಬಲಪಂಥೀಯ ತಿರುವು :

ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷರಾದ ಎಸ್. ರಾಮಚಂದ್ರನ್‌ಪಿಳ್ಳೆ ಕೇಂದ್ರದಲ್ಲಿ ಬಿಜೆಪಿ ದೊಡ್ಡ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವುದರಿಂದ ದೇಶದ ರಾಜಕಾರಣಕ್ಕೆ ಅಪಾಯಕಾರಿ ಬಲಪಂಥೀಯ ತಿರುವು ದೊರೆತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಕಾಂಗ್ರೆಸ್ ದುರಾಡಳಿತದ ಲಾಭ ಬಿಜೆಪಿಗೆ ಸಿಕ್ಕಿದೆ ಎಂದ ಅವರು ಮೋದಿ ಮತ್ತು ಗುಜರಾತ್ ಬಗ್ಗೆ ಬಿತ್ತಲಾದ ಭ್ರಮೆಗಳು, ಉತ್ತರಪ್ರದೇಶ, ಬಿಹಾರ ಮೊದಲಾದ ರಾಜ್ಯಗಳಲ್ಲಿ ಕೋಮು ಗಲಭೆಗಳನ್ನು ಉಂಟುಮಾಡಿ ಮತದಾರರ ಮತೀಯ ಧ್ರುವೀಕರಣ ಮಾಡಿದ್ದು, ಕಾರ್ಪೊರೇಟ್ ಕಂಪೆನಿಗಳ ಹಣ ಮತ್ತು ಹೈಟೆಕ್ ಪ್ರಚಾರ ಇವೆಲ್ಲವೂ ಬಿಜೆಪಿಯ ಗೆಲುವಿಗೆ ಕಾರಣವಾಗಿವೆ. ಉದಾರೀಕರಣವನ್ನು ತೀವ್ರವಾಗಿ ವಿರೋಧಿಸುತ್ತಿರುವ ಎಡಪಕ್ಷಗಳನ್ನು ಸೋಲಿಸಲು ವಿಶ್ವ ಹಣಕಾಸು ಬಂಡವಾಳ ನಿರ್ವಹಿಸಿದ ಪಾತ್ರವೂ ಗಂಭೀರ ವಿದ್ಯಮಾನವಾಗಿದೆ.

ಬಿಜೆಪಿ ಸರ್ಕಾರ ಹೆಚ್ಚೆಚ್ಚು ಆಕ್ರಮಣಕಾರಿಯಾಗಲಿದೆ. ದುಡಿಯುವ ವರ್ಗಗಳ ಮೇಲೆ ದೊಡ್ಡ ಧಾಳಿ ಬರಲಿದೆ. ಈಗಾಗಲೇ ರಾಜಸ್ತಾನದ ಬಿಜೆಪಿ ಸರ್ಕಾರ ಕಾರ್ಮಿಕ ಕಾಯ್ದೆಗಳನ್ನು ಬದಲಾಯಿಸಲು ಹೊರಟಿದೆ. ಸಾಮಾಜಿಕ ಭದ್ರತಾ ಕ್ರಮಗಳು ಕಡಿತಗೊಳ್ಳಲಿವೆ. ಉದ್ಯೋಗ ಖಾತ್ರಿ ಯೋಜನೆಯನ್ನೇ ರದ್ದು ಮಾಡುವ ಹುನ್ನಾರ ನಡೆದಿದೆ. ಆರೆಸ್ಸೆಸ್ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೊಳಿಸಲು ಶಿಕ್ಷಣ, ಸಂಸ್ಕೃತಿ ಕ್ಷೇತ್ರಗಳ ಮೇಲೆ ಆಕ್ರಮಣ ಆರಂಭಿಸಿದೆ. ರೈತ ಆಧಾರಿತ ಕೃಷಿ ಲಾಭದಾಯಕವಲ್ಲ ಎಂಬ ನೆಪವೊಡ್ಡಿ ಕೃಷಿಯ ಕಂಪೆನೀಕರಣಕ್ಕೆ ಸರ್ಕಾರ ಮುಂದಾಗಲಿದೆ. ಆಗ ಕೃಷಿಯನ್ನು ಅವಲಂಭಿಸಿದ ರೈತರು, ಕೃಷಿ ಕೂಲಿಕಾರರು ಎಲ್ಲಿಗೆ ಹೋಗಬೇಕು? ಆದ್ದರಿಂದ ಗ್ರಾಮೀಣ ಬಡವರನ್ನು ಪ್ರತಿನಿಧಿಸುವ

ಪುಟ 15 ಕ್ಕೆ



ಬಾವುಟ ಹಾರಿಸಿದ ಬಾಲಕ

ಮಹಾನ್ ಸ್ವಾತಂತ್ರ್ಯ ಹೋರಾಟಗಾರರು, ಸಮಾಜವಾದದ ಸ್ಥಾಪನೆಗಾಗಿ ತನ್ನ ಜೀವಮಾನವನ್ನೇ ಮುಡಿಪಾಗಿಟ್ಟವರು ಸಿಪಿಐ(ಎಂ) ನವರತ್ನಗಳಲ್ಲಿ ಒಬ್ಬರು, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯಾಗಿ ದೇಶದ ರಾಜಕಾರಣದ ಮೇಲೆ ಗಣನೀಯ ಪ್ರಭಾವ ಬೀರಿದವರೂ ಆಗಿದ್ದ ಕಾಮ್ರೇಡ್ ಹರ್‌ಕಿಶನ್ ಸಿಂಗ್ ಸುರ್ಜಿತ್ ಅವರು ನಮ್ಮನ್ನು ಅಗಲಿ ಇದೇ ಅಗಸ್ಟ್ 1ಕ್ಕೆ 6 ವರ್ಷಗಳಾಗುತ್ತವೆ. ಅವರ ಸ್ಮರಣಾರ್ಥ ಸಂಗಾತಿ ಲಿಂಗರಾಜು ಬರೆದ ಕಿರುಹೊತ್ತಿಗೆಯ ಒಂದು ಅಧ್ಯಾಯವನ್ನು ಪತ್ರಿಕೆಯ ಹೊಸ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ.

ಸುರ್ಜಿತ್ ಮೊದಲ ರಾಜಕೀಯ ಚಟುವಟಿಕೆಯೆಂದರೆ ಒಂದು ಕಾನೂನುಬಾಹಿರ ಸಂಘಟನೆಗೆ ಒಂದು ಸಭೆಯನ್ನು ಏರ್ಪಡಿಸುವುದು. ಆಗ ಅವರಿಗೆ 15ರ ಪ್ರಾಯ. ಅಪ್ಪನ ನಿಕಟ ಮಿತ್ರರಾದ ಗದರ್ ಮುಖಂಡರಾದ ಕರಮ್ ಸಿಂಗ್ ಚೀಮಾ ಮತ್ತು ಭಾಗ್ ಸಿಂಗ್ ಕನೇಡಿಯನ್ ಮನೆಗೆ ಬಂದರು. ಅವರು ಸುರ್ಜಿತ್‌ರವರ ತಂದೆಗೆ ಮಿತ್ರರು. ಆಗ ನಿಷೇಧಿಸಲ್ಪಟ್ಟಿದ್ದ ವರ್ಕರ್ಸ್ ಅಂಟ್ ಪೆಸಂಟ್ಸ್ ಪಾರ್ಟಿ(ರೈತ–ಕಾರ್ಮಿಕ ಪಕ್ಷ)ಗೆ ಒಂದು ಸಭೆ ಏರ್ಪಡಿಸುವಂತೆ ಬಾಲಕ ಸುರ್ಜಿತ್‌ರನ್ನು ಕೇಳಿದರು. ತಕ್ಷಣವೇ ಸುರ್ಜಿತ್ ಗುರುದ್ವಾರದಿಂದ ಶಂಖವನ್ನು ತಂದು ಸಭೆ ನಡೆಯುವುದಾಗಿ ಸಾರಿದ, ಒಂದು ಮೇಜು, ಕುರ್ಚಿ ವ್ಯವಸ್ಥೆ ಮಾಡಿದ, ಸಭೆ ಭಾರೀ ಯಶಸ್ವಿಯಾಯಿತು.

ಮರುದಿನ ಸುರ್ಜಿತ್ ತಾನು ಓದುತ್ತಿದ್ದ ಖಾಲ್ಸಾ ಮಿಡ್ಲ್ ಸ್ಕೂಲ್‌ಗೆ ಹೋದಾಗ ಅಲ್ಲಿ ಪೋಲಿಸರು ಹಾಜರಿದ್ದರು. ಬಾಲಕ ಸುರ್ಜಿತ್‌ನನ್ನು ಬಂಧಿಸಲು. ಶಾಲೆಯ ಮುಖ್ಯೋಪಾಧ್ಯಾಯರು (ಇವರು ಸುರ್ಜಿತ್‌ರ ತಂದೆಯ ಸ್ನೇಹಿತರಾಗಿದ್ದರು) ಮಧ್ಯೆ ಪ್ರವೇಶಿಸಿ ಬಂಧಿಸದಂತೆ ತಡೆದರು. ಸಂಧಾನ ನಡೆಯಿತು. ತಪ್ಪು ಒಪ್ಪಿಕೊಂಡಲ್ಲಿ ಬಿಟ್ಟು ಬಿಡುವುದಾಗಿ ಪೋಲಿಸರು ಹೇಳಿದರು. ಧೀರ ಬಾಲಕ ಇದಕ್ಕೆ ಸುತಾರಾಂ ಒಪ್ಪಲೇ ಇಲ್ಲ. ಕೆಂಡಾಮಂಡಲರಾದ ಪೋಲಿಸರು ಶಾಲೆಯಿಂದ ಈತನನ್ನು ತೆ–ಗೆದು ಹಾಕುವಂತೆ ಮುಖ್ಯೋಪಾಧ್ಯಾಯರಿಗೆ ಸೂಚಿಸಿದರು. ಒಲ್ಲದ ಮನಸ್ಸಿನಿಂದಲೇ ಅವರು ಹಾಗೇ ಮಾಡಬೇಕಾಯಿತು. ಸುತ್ತಮುತ್ತಲಿನ ಬೇರಾವುದೇ ಶಾಲೆಯವರು ತಮಗೂ ಶಿಕ್ಷೆ ವಿಧಿಸಬಹುದೆಂದು ಸುರ್ಜಿತ್‌ರನ್ನು ಶಾಲೆಗೆ ಸೇರಿಸಿಕೊಳ್ಳಲು ನಿರಾಕರಿಸುತ್ತಾರೆ. ಇದರಿಂದ ಅವರ ತಾಯಿಗೆ ಹೇಗಾಗಿರಬೇಡ! ಆದರೆ ಆಕೆ ಸ್ವಲ್ಪವೂ ವಿಚಲಿತರಾಗದೆ ತನ್ನ ಅಲ್ಪ ಆದಾಯದ ನಡುವೆಯೂ, ಮಗನನ್ನು ಜಾಲಂಧರ್‌ಗೆ ಕಳಿಸಿ ಅಲ್ಲಿ ದೊಆಬಾ ಹೈಸ್ಕೂಲಿಗೆ ಸೇರಿಸಿ ಅಲ್ಲೇ ಹಾಸ್ಟೇಲ್‌ನಲ್ಲಿ ಉಳಿಯಲು ಬೇಕಾದ ಎಲ್ಲಾ ವ್ಯವಸ್ಥೆ ಮಾಡಿದರು. ಪನಾಮದಲ್ಲಿದ್ದ ತಂದೆಯವರಿಂದ ಹಣ ಬರುತ್ತಿರಲಿಲ್ಲ. ಇಲ್ಲಿ ತಾಯಿ ತನ್ನ ಮಗನ ವಿಧ್ಯಾಭ್ಯಾಸ ಮೊಟಕುಗೊಳ್ಳದಂತೆ ನೋಡಿಕೊಳ್ಳಲು ಪಟ್ಟ ಪರಿಪಾಟಲು ಅಷ್ಟಿಷ್ಟಲ್ಲ. 4ರೂ. ಸ್ಕೂಲ್ ಫೀಜು, 4ರೂ. ಹಾಸ್ಟೇಲ್ ಫೀಜು ಮತ್ತು ಇತರೆ ಖರ್ಚು ಸೇರಿ ತಿಂಗಳಿಗೆ ಕನಿಷ್ಟ 10 ರೂಪಾಯಿ ಬೇಕಾಗುತ್ತಿತ್ತು. "ಆ ಕಡು ಕಷ್ಟದ ದಿನಗಳಲ್ಲಿ



ನನ್ನ ವಿದ್ಯಾಭ್ಯಾಸ ನಿಲ್ಲಬಾರದು ಎಂಬ ಆತಂಕ ಅಮ್ಮನಿಗೆ, ಆಕೆಯ ಶ್ರಮದ ಮೇಲೆ ನಾನು ಬದುಕಿದ್ದೆ. ನನ್ನ ಖರ್ಚು ಹೊಂದಿಸಲು ಚರಕದಿಂದ ನೂಲು ತೆಗೆಯುತ್ತಿದ್ದಳು. ಮನೆಯಲ್ಲಿ ತುಪ್ಪ ತಯಾರಿಸಿ ಮಾರುತ್ತಿದ್ದಳು" ಎಂದು ಸುರ್ಜಿತ್ ಆಗಾಗ ನೆನಪಿಸಿಕೊಳ್ಳುತ್ತಿದ್ದರು.

ಬಾಲಕ ಸುರ್ಜಿತ್ ಶಾಲೆಯ ರಜಾ ದಿನಗಳನ್ನು ಅಜ್ಜಿಯ ಊರು ಹೊಷಿಯಾರ್‌ಪುರ್‌ನಲ್ಲಿ ಕಳೆಯುತ್ತಿದ್ದ. ಅಲ್ಲಿ ನಡೆದ ಒಂದು ಘಟನೆ ಇವರ ಬದುಕಿನ ದಿಕ್ಕನ್ನೇ ಬದಲಾಯಿಸಿತು.

1932 ಮಾರ್ಚ್ 23, ಭಗತ್‌ಸಿಂಗ್ ನೇಣುಗಂಬಕ್ಕೇರಿ ಹುತಾತ್ಮರಾದ ಮೊದಲ ವಾರ್ಷಿಕಾಚರಣೆಯ ದಿನ, ಅಂದು ಪಂಜಾಬಿನ ಗೌರ್ನರ್ ಹೊಷಿಯಾರ್‌ಪುರ್‌ಗೆ ಭೇಟಿ ನೀಡುವ ಕಾರ್ಯಕ್ರಮವಿತ್ತು. ಅಲ್ಲಿನ ಕಾಂಗ್ರೆಸ್ ಸಮಿತಿ ಹೊಷಿಯಾರ್‌ಪುರ್ ಕೋರ್ಟಿನ ಮೇಲೆ ಕಾಂಗ್ರೆಸ್ ಬಾವುಟ ಹಾರಿಸಲಾಗುವುದೆಂದು ಪ್ರಕಟಿಸಿತು. ಈ ಬಗ್ಗೆ ಸಾಕಷ್ಟು ಪ್ರಚಾರವನ್ನು ಮಾಡಲಾಗಿತ್ತು. ತನ್ನ ಬಾಲ್ಯದ ಹೀರೋನ ಹುತಾತ್ಮ ದಿನಾಚರಣೆ ಕಾರ್ಯಕ್ರಮ ಕಿವಿಗೆ ಬಿದ್ದಿದ್ದೇ ತಡ, ಸುರ್ಜಿತ್ ಕಾಂಗ್ರೆಸ್ ಆಫೀಸಿಗೆ ಓಡೋಡಿ ಬರುತ್ತಾರೆ. ಆದರೆ ಅವರ ಉತ್ಸಾಹಕ್ಕೆ ತಣ್ಣೀರೆರಚುವಂತಹ ವಾರ್ತೆ ಕಿವಿಯನ್ನು ಅಪ್ಪಳಿಸುತ್ತದೆ. ಇಡೀ ಪಟ್ಟಣ ಸೇನೆಯ ಹತೋಟಿಗೆ ಬಂದಿತ್ತು. ಅದ–ರಿಂದಾಗಿ ಕಾಂಗ್ರೆಸ್ ಸಮಿತಿ ಪ್ರಕಟಿಸಿದ್ದ ಕಾರ್ಯಕ್ರಮವನ್ನು ರದ್ದುಗೊಳಿಸಿತ್ತು. ಸಮಿತಿಯ ಪದಾಧಿಕಾರಿಗಳಲ್ಲಿ ಹಲವರು ಸುರ್ಜಿತ್‌ರವರ ತಂದೆ–ಯ ಒಡನಾಡಿಗಳು. ನ್ಯಾಯಾಲಯದ ಮೇಲೆ ಬಾವುಟು ಹಾರಿಸುವವರನ್ನು ಗುಂಡಿಟ್ಟು ಕೊಲ್ಲಲು ಆಜ್ಞೆ ಬ್ರಿಟಿಷ್ ಸರ್ಕಾರದಿಂದ ಹೊರಬಿದ್ದಿದೆ. ಅದ–ರಿಂದಾಗಿ ತಮ್ಮ ಕಾರ್ಯಕ್ರಮ ರದ್ದಾಗಿದೆ ಎಂದರು. ಸುರ್ಜಿತ್ ಅತೀವ ನಿರಾಸೆಗೆ ಒಳಗಾದರು. ಕಾಂಗ್ರೆಸ್‌ನ ಈ ನಿರ್ಧಾರ ಸುರ್ಜಿತ್‌ಗೆ ಸ್ವಲ್ಪವೂ ಸರಿ ಎನಿಸಿರಲಿಲ್ಲ. ಇದನ್ನು ಗಮನಿಸಿದ ಒಬ್ಬರು, ನಿನಗೆ ಅಷ್ಟು ಧೈರ್ಯವಿದ್ದರೆ ಬಾವುಟ ಹಾರಿಸು ನೋಡೋಣ ಎಂದರು. ಇಂತಹ ಸವಾಲನ್ನು ಸ್ವೀಕರಿಸದೆ ಬಿಡಬಾರದು ಎಂದು 16 ವರ್ಷದ ಆ ಬಾಲಕ "ಬಾವುಟ ಕೊಡಿ, ಒಂದು ಕೋಲು ಕೊಡಿ ನಾನು ಹಾರಿಸುತ್ತೇನೆ" ಎನ್ನುತ್ತಾ ಬಾವುಟವನ್ನು ಕೋಲಿಗೆ ಸಿಕ್ಕಿಸಿಕೊಂಡು ಕೋರ್ಟಿನತ್ತ ಹೊರಟ. ಅಲ್ಲಿ ಸೈನಿಕರ ಕಾವಲಿತ್ತು, ಆದರೆ ಕಾಂಗ್ರೆಸ್ ಕಾರ್ಯಕ್ರಮವನ್ನು ರದ್ದು ಮಾಡಿದೆಯಲ್ಲಾ ಎಂದು ಅವರೆಲ್ಲ ತುಸು ಅರಾಮವಾಗೇ ಇದ್ದರು. ಬಾಲಕ ಸುರ್ಜಿತ್ ಸದ್ದಿಲ್ಲದೆ ಪಟಪಟನೆ ಮೆಟ್ಟಲುಗಳನ್ನು ಹತ್ತಿ ಕೋರ್ಟಿನ ಛಾವಣಿಯ ಮೇಲೆ ಹೋಗಿ


ರಾಷ್ಟ್ರದ ರಾಜಕೀಯ ಧುರೀಣರೊಂದಿಗೆ ಸುರ್ಜಿತ್, ಹೆಚ್.ಡಿ. ದೇವೇಗೌಡ, ಮುಲಯಂ ಸಿಂಗ್ ಯಾದವ್, ಎ.ಬಿ. ಬರ್ಧನ್

ಬ್ರಿಟಿಷರ ಯೂನಿಯನ್ ಜಾಕ್ ಬಾವುಟವನ್ನು ಇಳಿಸಿ ತ್ರಿವರ್ಣ ಧ್ವಜವನ್ನು ಏರಿಸಿಯೇ ಬಿಟ್ಟ.

ಇದು ಒಬ್ಬ ಸೈನಿಕನ ಕಣ್ಣಿಗೆ ಬಿತ್ತು. ತಕ್ಷಣವೇ ಎರಡು ಗುಂಡುಗಳು ಹಾರಿದವು. ಅದೃಷ್ಟವಶಾತ್ ಸುರ್ಜಿತ್ ಗುಂಡೇಟಿನಿಂದ ತಪ್ಪಿಸಿಕೊಂಡರು. ಗುಂಡಿನ ಸದ್ದು ಕೇಳಿ ತನ್ನ ಕೊಠಡಿಯಲ್ಲಿದ್ದ ಡೆಪ್ಯೂಟಿ ಕಮೀಷನರ್ ಭಕಾಲೆಯವರು ತಕ್ಷಣವೇ ಹೊರಬಂದು ನೋಡಿದಾಗ ಅವರಿಗೆ ಕಂಡದ್ದು ಒಬ್ಬ ಹದಿ ಹರೆಯದ ಬಾಲಕ, ತಕ್ಷಣವೇ, ಗುಂಡು ಹಾರಿಸದಂತೆ ಮಹಾರಾಷ್ಟ್ರದಿಂದ ಬಂದ ಆ ಅಧಿಕಾರಿ ಆದೇಶ ನೀಡಿದರು. ಆ ನಡುವೆ ಕೆಲವು ಸೈನಿಕರು ಹುಡುಗನನ್ನು ಹಿಡಿದು ಕೆಳಗೆಳೆದು ತಂದರು. ಅವರನ್ನು ಬಂಧಿಸಲಾಯಿತು. ಆದರೂ ಸುರ್ಜಿತ್ ಕಂಗೆಟ್ಟಿರಲಿಲ್ಲ. ಬಾಯಿಂದ ಬ್ರಿಟಿಶ್–ವಿರೋಧಿ ಘೋಷಣೆಗಳು ಹೊಮ್ಮುತ್ತಿದ್ದವು– "ಬ್ರಿಟಿಷ್ ಸರ್ಕಾರಕ್ಕೆ ಧಿಕ್ಕಾರ", "ಸಾಮ್ರಾಜ್ಯಶಾಹಿ ನಾಶವಾಗಲಿ", "ಭಗತ್‌ಸಿಂಗ್ ಜಿಂದಾಬಾದ್". ಸುರ್ಜಿತ್‌ರನ್ನು ಸಬ್ ಜೈಲ್ ಒಂದರ ಕೊಳೆತುನಾರುವ ಸೆಲ್‌ಗೆ ತಳ್ಳಲಾಯಿತು. ಈ ಮಧ್ಯೆ ನಿನ್ನ ಹೆಸರೇನೆಂದು ಮತ್ತೆ–ಮತ್ತೆ ಕೇಳಿದರೂ ಸುರ್ಜಿತ್ ತುಟಿ ಪಿಟಕ್ ಎನ್ನಲಿಲ್ಲ. ಮಾರನೇ ದಿನ ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಲಾಯಿತು. ಮ್ಯಾಜಿಸ್ಟ್ರೇಟರು ನಿನ್ನ ಹೆಸರೇನು ಎಂದಾಗ ಬಂದ ಉತ್ತರ –"ನನ್ನ ಹೆಸರು ಲಂಡನ್ ತೋಡ್ ಸಿಂಗ್"(ಲಂಡನ್ ಮುರಿ ಸಿಂಗ್). ಮತ್ತೆ–ಮತ್ತೆ ಕೇಳಿದರೂ ತಲೆಬಾಗಲೂ ಇಲ್ಲ, ಕ್ಷಮೆ ಕೇಳಲೂ ಇಲ್ಲ. ತಾನು ರಾಷ್ಟ್ರೀಯ ಧ್ವಜ ಹಾರಿಸಿದ ಅಪಾದನೆ ನಿಜ ಎಂದು ಒಪ್ಪಿಕೊಳ್ಳುತ್ತಲೇ, ಜತೆಗೆ ಭಗತ್ ಸಿಂಗ್ ಶ್ಲಾಘನೆ. ಕೊನೆಗೆ 1 ವರ್ಷದ ಸಜೆಯ ಶಿಕ್ಷೆ ವಿಧಿಸಿ ತೀರ್ಪು ನೀಡಿದಾಗ, ತಕ್ಷಣವೇ ಸುರ್ಜಿತ್ ಬಾಯಿಂದ ಬಂದದ್ದು "ಒಂದೇ ವರ್ಷವೇ?" ಕೆಂಡಾಮಂಡಲರಾದ ಮ್ಯಾಜಿಸ್ಟ್ರೇಟರು 4 ವರ್ಷ ಸಜೆಗೆ ಅಜ್ಞೆ ನೀಡುತ್ತಾರೆ. ಅದಕ್ಕೂ "ಬರೀ 4 ವರ್ಷವೇ" ಎಂದಾಗ ತಬ್ಬಿಬ್ಬಾದ ಮ್ಯಾಜಿಸ್ಟ್ರೇಟರು ಏನೂ ಮಾಡುವಂತಿರಲಿಲ್ಲ. ಸುರ್ಜಿತ್ ಮೇಲೆ ಹಾಕಿದ ಅಪಾದನೆಗೆ ಅದಕ್ಕಿಂತ ಹೆಚ್ಚಿನ ಶಿಕ್ಷೆ ನೀಡುವಂತಿರಲಿಲ್ಲ.

ಆಗ ಸುರ್ಜಿತ್ ಇನ್ನೂ ಅಪ್ರಾಪ್ತ ವಯಸ್ಕನಾಗಿದ್ದುದರಿಂದ ಸಬ್ ಸೈಲಿನಿಂದ ದೆಹಲಿಯ ಬಾಲಾಪರಾಧಿ ಶಾಲೆಗೆ ಅವರನ್ನು ಸ್ಥಳಾಂತರಿಸಲಾಯಿತು. ಅಲ್ಲಿಯೂ ಸುರ್ಜಿತ್ ಎಲ್ಲರನ್ನು ಸೇರಿಸಿಕೊಂಡು ತನ್ನನ್ನು ಯಾಕಾಗಿ ಜೈಲಿಗೆ ತಂದರು ಎಂದು ಹೇಳಿ, ಸ್ವಾತಂತ್ರ್ಯ ಚಳುವಳಿಯ ಕಥೆಗಳನ್ನು ಹೇಳುತ್ತಾ ಇತರರ ಮೇಲೆ ಪ್ರಭಾವ ಬೀರಲಾರಂಭಿಸಿದರು. ಈ ಬಾಲಕ ಎಷ್ಟೇ ಕಿರುಕುಳ, ಶಿಕ್ಷೆ ಕೊಟ್ಟರೂ ಜಗ್ಗುವವನಲ್ಲ ಎಂದು ಅಲ್ಲಿಂದ ಲಾಹೋರ್‌ನ ಬೋರ್‌ಸ್ಟಾಲ್ ಜೈಲಿಗೆ ವರ್ಗಾಯಿಸಲಾಯಿತು. ಅಲ್ಲಿಗೆ ಕಳಿಸಿದ್ದು ಒಳ್ಳೆಯದೇ ಆಯಿತು ಎಂದು ನಂತರ ಸುರ್ಜಿತ್ ನೆನಪಿಸಿಕೊಂಡಿದ್ದರು. ಅವರಿಗೆ ಹಲವಾರು ಜನ ಕ್ರಾಂತಿಕಾರಿಗಳನ್ನು ಭೇಟಿಯಾಗುವ ಅವಕಾಶ ಲಭಿಸಿತು. ಟೀಕಾರಾಂ ಸುಖನ್, ಇಂದರ್ ಸಿಂಗ್ ಗುಜರನ್‌ವಾಲಾ ಹಾಗೂ ಭಗತ್‌ಸಿಂಗ್‌ರ ಹಲವು ಒಡನಾಡಿಗಳನ್ನು ಸಂಧಿಸಿ ಅವರೊಡನೆ ತನ್ನ ಹೀರೋ ಬಗೆಗೆ ಹೆಚ್ಚು ವಿಚಾರ ತಿಳಿದುಕೊಳ್ಳಲು ಅವಕಾಶವಾಯಿತು. ▬

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೋಲಾರ: 'ಬಡರೈತರಿಗೆ ಬ್ಯಾಂಕ್ ಸಾಲ ಕೊಡಿ'

ಪ್ರಾಂತ ರೈತ ಸಂಘದ ಆಂದೋಲನ

ಜಿ.ಸಿ. ಬಯ್ಯಾರೆಡ್ಡಿ

ರೈತನನ್ನು 'ಭೂಮಿ ತಾಯಿಯ ಚೊಚ್ಚಲ ಮಗ' ಎನ್ನುತ್ತಾರೆ. ರೈತ ಕೃಷಿ ಮಾಡಿದರೆ ದೇಶಕ್ಕೆ ಅನ್ನ. ಅನ್ನಕ್ಕೆ ಪರ್ಯಾಯ ಎಂಬುದೇನಿಲ್ಲ. ಬಡವರು ಶ್ರೀಮಂತರು ಎಲ್ಲರಿಗೂ ಆಹಾರ ಧಾನ್ಯಗಳು ಬೇಕೇ ಬೇಕು. ದೇಶ ಸ್ವಾವಲಂಬನೆ, ಅಭಿವೃದ್ಧಿ ಸಾಧಿಸಬೇಕಾದರೂ ಕೃಷಿ ಅಭಿವೃದ್ಧಿ ಅಗಲೇಬೇಕು.

ಕೃಷಿ ಅಭಿವೃದ್ಧಿ ಆಗಬೇಕು ಎಂದರೆ ರೈತರಿಗೆ ಕೃಷಿ ಮಾಡಲು ಅಗತ್ಯ ಸೌಲಭ್ಯ–ಸೌಕರ್ಯಗಳು ಸುಲಭವಾಗಿ ಸಿಗಬೇಕು. ಈ ಸೌಲಭ್ಯಗಳಲ್ಲಿ ಕೃಷಿಗೆ ಬ್ಯಾಂಕ್ ಸಾಲ ಎಂಬುದು ಒಂದು ಮುಖ್ಯವಾದ ಅಂಶ. ದೇಶದಲ್ಲಿ ಇಂದಿಗೂ ಕೃಷಿ ಮಾಡಲು ಬ್ಯಾಂಕ್‌ನಂತಹ ಸಂಸ್ಥೆಗಳ ಸಾಂಸ್ಥಿಕ ಸಾಲ ಪಡೆದ ರೈತರ ಪ್ರಮಾಣವು ಶೇ. 40 ರಷ್ಟನ್ನು ದಾಟಿಲ್ಲ. ಅಂದರೆ ಬ್ಯಾಂಕ್ ಸಾಲ ಪಡೆದವರಿಗಿಂತಲೂ ಎಷ್ಟೋ ದೊಡ್ಡ ಪ್ರಮಾಣದ ರೈತರು ತಮ್ಮ ಕೃಷಿಗೆ ಅಗತ್ಯವಾದ ಬಂಡವಾಳಕ್ಕಾಗಿ ಅತ್ಯಂತ ದುಬಾರಿ ಬಡ್ಡಿಯ ಖಾಸಗಿ ಲೇವಾದೇವಿಗಾರರನ್ನು, ಬಡ್ಡಿ ಸಾಹುಕಾರರನ್ನು ಅವಲಂಭಿಸಬೇಕಾಗಿದೆ.

1998 ರಿಂದ 2004ರ ವರೆಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದ ಆರು ವರ್ಷಗಳ ಅವಧಿಯಲ್ಲಿ ರೈತರ ಆತ್ಮಹತ್ಯೆಗಳು ಪ್ರಮಾಣ ದಿನ ದಿನವೂ ಎರುತ್ತಲೇ ಹೋದವು. 2002 ಕಳೆದು 2003–04 ರ ಹೊತ್ತಿಗಂತೂ ಎಲ್ಲೆಲ್ಲೂ ರೈತರ ಆತ್ಮಹತ್ಯೆಗಳದ್ದೇ ಸುದ್ದಿ ಎನ್ನುವಂತಾಗಿ ಹೋಗಿತ್ತು. ಏರುತ್ತಿರುವ ಕೃಷಿ ಹೂಡಿಕೆಗಳ ವೆಚ್ಚ, ರಸಗೊಬ್ಬರಗಳಿಗೆ ಸಬ್ಸಿಡಿ ಕಡಿತ, ಕೃಷಿ ಉತ್ಪನ್ನಗಳ ಬೆಲೆ ಕುಸಿತ ಮುಂತಾದವುಗಳ ಜೊತೆಗೆ ಸುಲಭ ಬಡ್ಡಿಯ ಬ್ಯಾಂಕ್ ಸಾಲದ ಅನುಕೂಲವಿಲ್ಲದ ಪರಿಸ್ಥಿತಿಯಲ್ಲಿ ದುಬಾರಿ ಬಡ್ಡಿಯ ಸಾಲದ ಶೂಲಕ್ಕೆ ಸಿಲುಕಿ ಕಂಗೆಟ್ಟ ರೈತರು ಸಾವಿನ ಮನೆಯ ದಾರಿ ಹಿಡಿದಿದ್ದರು. ಎನ್‌ಡಿಎ ಸರ್ಕಾರ ಹೋಗುವ ಹಂತದಲ್ಲಿ ದೇಶದ ರಾಷ್ಟ್ರೀಕೃತ ಬ್ಯಾಂಕುಗಳಿಂದ ವಾರ್ಷಿಕವಾಗಿ ಕೇವಲ 85,000 ಕೋಟಿ ರೂಪಾಯಿಗಳಷ್ಟು ಮೊತ್ತವನ್ನು ಮಾತ್ರ ಕೃಷಿಗೆ ಸಾಲವಾಗಿ ನೀಡುವ ಸನ್ನಿವೇಶ ಇತ್ತು.

2004 ರ ಲೋಕಸಭಾ ಚುನಾವಣೆಯ ಜನಾದೇಶ ಪರಿಸ್ಥಿತಿಯನ್ನು ಗಣನೀಯವಾಗಿ ಬದಲಿಸಿತು. ಕಾಂಗ್ರೆಸ್ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಕ್ಕೆ ಎಡಪಕ್ಷಗಳ ಬೆಂಬಲ ಅನಿವಾರ್ಯವಾಗಿತ್ತು. ಜನಾದೇಶದ ಒತ್ತಡ, ಎಡಪಕ್ಷಗಳ ಒತ್ತಾಯಗಳ ಹಿನ್ನೆಲೆಯಲ್ಲಿ ರೈತರ ಆತ್ಮಹತ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ 'ಎಂ.ಎಸ್. ಸ್ವಾಮಿನಾಥನ್ ಆಯೋಗ'ವನ್ನು ರಚಿಸಲಾಯಿತು. ಎಡಪಕ್ಷಗಳ ಒತ್ತಾಸೆಯಲ್ಲಿ ರೂಪುಗೊಂಡ ಯುಪಿಎ ಸರ್ಕಾರದ ಸಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ)ವು ಸಹ ಸರ್ಕಾರವು ಕೃಷಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡಿ ರೈತರ ನೆರವಿಗೆ ಬರಬೇಕೆಂದು ಸರ್ಕಾರವನ್ನು ಒತ್ತಾಯಿಸುವಂತೆ ಇತ್ತು. ಅದು ಎರಡು ವರ್ಷಗಳಲ್ಲಿ ಕೃಷಿಗೆ ನೀಡಲಾಗುವ ಸಾಲದ ಪ್ರಮಾಣವನ್ನು ಮೂರುಪಟ್ಟು ಹೆಚ್ಚಿಸಬೇಕೆಂದು ಆಗ್ರಹಿಸುತ್ತಿತ್ತು. ಈ ಎಲ್ಲದರ ಪರಿಣಾಮವಾಗಿ ಯುಪಿಎ ಸರ್ಕಾರವು ವರ್ಷಕ್ಕೆ ಒಟ್ಟು 7 ಲಕ್ಷ ಕೋಟಿ ರೂಪಾಯಿಗಳಷ್ಟು ಮೊತ್ತವನ್ನು ಕೃಷಿ ಸಾಲಕ್ಕೆ ನೀಡಬೇಕಾಗಿ ಬಂತು. ವರ್ಷಕ್ಕೆ ಶೇ. 7 ರ ಬಡ್ಡಿದರದಲ್ಲಿ ಸಾಲ. ಸಮಯ ಮಿತಿಯೊಳಗೆ ಸಾಲ ವಾಪಸ್ಸು ಮಾಡುವ ರೈತರಿಗೆ ಶೇ. 4 ರಷ್ಟು ಮಾತ್ರ ಬಡ್ಡಿ. ಇಂತಹ ನೆರವು ದೊರತದ್ದರಿಂದ ಆ ನಂತರದ ದಿನಗಳಲ್ಲಿ ರೈತರ ಆತ್ಮಹತ್ಯೆಗಳ ಪ್ರಮಾಣ ಕೊಂಚ ಕಡಿಮೆಯಾಯಿತು ಎಂಬುದನ್ನು ದೇಶಕ್ಕೆ ದೇಶವೇ ನೋಡಿತು.

ಮೂಲ ಸಮಸ್ಯೆಗಳು

ಪರಿಸ್ಥಿತಿಯಲ್ಲಿ ಕೊಂಚ ಸುಧಾರಣೆ ಕಂಡು ಬಂದಿತೆಂದರೆ ಕೃಷಿರಂಗದ ಮೂಲ ಸಮಸ್ಯೆಗಳು ಪರಿಹಾರವಾದವು ಎಂದೇನಲ್ಲ. ಕೃಷಿಗೆ ನೀಡಲಾಗುವ ಸಾಲದ ಮೊತ್ತವು ಒಂದಷ್ಟು ಹೆಚ್ಚಾದರೂ ಕೂಡ ಬಡ ರೈತರು, ದೊಡ್ಡ ಸಂಖ್ಯೆಯ ಸಾಮಾನ್ಯ ರೈತರಿಗೆ ಸಾಲ ಕನಸಿನ ಗಂಟಾಗಿಯೇ ಉಳಿಯಿತು. ಏಕೆಂದರೆ ಸಾಲದ ಒಟ್ಟು ಮೊತ್ತ ಏರಿದಂತೆ ಸಾಲ ಪಡೆದುಕೊಂಡ ರೈತರ ಪ್ರಮಾಣ ಹೆಚ್ಚಲಿಲ್ಲ. ಬದಲಿಗೆ ಸಾಲ ಪಡೆದ ಶ್ರೀಮಂತರು, ಪ್ರಭಾವಿ ವ್ಯಕ್ತಿಗಳೇ ಮತ್ತಷ್ಟು ದೊಡ್ಡ ಮೊತ್ತದ ಸಾಲ ಹೊಡೆದುಕೊಂಡರು. ಅಂದರೆ ಬ್ಯಾಂಕಿನಲ್ಲಿ ಸಾಲ ಪಡೆಯುವ ಅನುಕೂಲ ಇರುವ ದೊಡ್ಡಜನಗಳು ಇನ್ನಷ್ಟು ಹೆಚ್ಚು ಮೊತ್ತದ ಸಾಲ ಪಡೆದುಕೊಂಡರು. ಅವಕಾಶ ವಂಚಿತರಿಗೆ ವಂಚನೆ ಮುಂದುವರಿಯಿತು.

ಇಂತಹ ಸಮಸ್ಯೆ ನಿವಾರಿಸುವ ಸಲುವಾಗಿ ಕೆಲವು ಕ್ರಮಗಳನ್ನು ರೂಪಿಸಲಾಯಿತು. ರೈತರಿಗೆ ಸಾಲ ನೀಡುವ ಕೃಷಿ ಬ್ಯಾಂಕ್‌ಗಳು ಈಗಾಗಲೇ ಸಾಲ ಪಡೆದ ಹಳಬರಿಗೆ ಮಾತ್ರವಲ್ಲ ಹೊಸಬರಿಗೆ ಕೂಡ ಸಾಲ ನೀಡಬೇಕು. ಪ್ರತಿ ಶಾಖೆಯು ಹೊಸ ರೈತರಿಗೆ ಸಾಲ ಕೊಡಬೇಕು ಎಂಬ ಮಾರ್ಗಸೂಚಿ ಬಂದಿತು.



ಜಾರಿಗೆ ಒತ್ತಡ

ಪುಸ್ತಕಗಳೊಳಗೆ, ಕಾಗದದ ಮೇಲೆ ಎಷ್ಟೇ ಒಳ್ಳೆಯ ತೀರ್ಮಾನಗಳಿದ್ದರೂ ಅದು ವಾಸ್ತವವಾಗಿ ಜಾರಿಗೆ ಬರದಿದ್ದರೆ ನೊಂದವರಿಗೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಈ ಮೇಲಿನ ತೀರ್ಮಾನಗಳೂ ಸಹ ಸಮರ್ಪಕವಾಗಿ ಜಾರಿಗೆ ಬರಲಿಲ್ಲ.

ಕೃಷಿಗೆ ಬ್ಯಾಂಕುಗಳಿಂದ ಎಷ್ಟು ಪ್ರಮಾಣದ ಸಾಲ ಸೌಲಭ್ಯ ಸಿಗಬೇಕು ಎಂಬುದನ್ನು ಸಾಲ ನೀತಿ ರೂಪಿಸುವ ಬ್ಯಾಂಕರ್ಸ್ ಸಮಿತಿಗಳು ನೀತಿನಿರೂಪಣೆ ಮಾಡುತ್ತವೆ. ಆದರೆ ಈ ಕ್ರಮವಷ್ಟೇ ಸಾಲುವುದಿಲ್ಲ. ಸಾಲ ಅಗತ್ಯವಾಗಿರುವವರ ಕಡೆಯಿಂದ ಅಂದರೆ ಬಡರೈತರ ಕಡೆಯಿಂದ ರೈತಸ್ನೇಹಿಯಾದ ಸಾಲನೀತಿಗಾಗಿ ಮತ್ತು ವಿಶಾಲ ಸಂಖ್ಯೆಯ ರೈತರಿಗೆ ಸಾಲ ಸಿಗಬೇಕೆಂದು ಒತ್ತಡ ಬರಬೇಕಾಗುತ್ತದೆ. ಇಲ್ಲವಾದಲ್ಲಿ ಇಲ್ಲಸಲ್ಲದ ಸಬೂಬು ಹೇಳಿ ರೈತರ ಅರ್ಜಿ ತಿರಸ್ಕರಿಸುವ, ರೈತರನ್ನು ಬರಿಗೈಲಿ ವಾಪಸ್ಸು ಸಾಗಹಾಕುವ ಈಗಿನ ಪ್ರಸಂಗಗಳೇ ಮುಂದೆಯೂ ಮುಂದುವರಿಯುವ ಸಂಭವವೇ ಜಾಸ್ತಿ. ಇದು ಬರೀ ಊಹೆಯಲ್ಲ, ಅನುಭವದ ಮಾತು. ಪ್ರಾಯೋಗಿಕವಾಗಿ ರೈತರು ಇಂತಹ ಅವಕಾಶ ವಂಚನೆಯನ್ನು, ನಿರಾಕರಣೆಯನ್ನು ನಿರಂತರವಾಗಿ ಅನುಭವಿಸುತ್ತ ಬರುತ್ತಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಬಡರೈತರು ಸಾಲ ಪಡೆಯುವಲ್ಲಿ ಇರುವ ನಾನಾ ತೊಂದರೆ ಅಡೆತಡೆಗಳನ್ನು, ನಿರಾಕರಣೆಗಳನ್ನು ಗಮನಿಸಿದ ಪ್ರಾಂತ ರೈತ ಸಂಘವು 'ಬಡರೈತರಿಗೆ ಸಾಲ ನೀಡಿ' ಎನ್ನುವ ಒಂದು ಆಂದೋಲನವನ್ನೇ ನಡೆಸುತ್ತಿದೆ.

ಅಡೆ–ತಡೆ ನಿರಾಕರಣೆಗಳು ಮತ್ತು ಕುಂಟು ನೆಪಗಳು

ಇಲ್ಲಿ ಸಮಸ್ಯೆಗಳು ಒಂದೆರಡಲ್ಲ. ಮಾರ್ಗಸೂಚಿಯಂತೆ ಕೃಷಿ ಸಾಲದಲ್ಲಿ ಅದು 'ಬೆಳೆ ಸಾಲ' ವಾದರೆ ಒಂದು ಲಕ್ಷದ ವರೆಗಿನ ಸಾಲಕ್ಕೆ ರೈತರಿಂದ ಯಾವುದೇ ಜಾಮೀನು, ಅಂದರೆ ಗ್ಯಾರಂಟಿಯನ್ನು ಕೇಳಬಾರದು. ಹಸು, ಕುರಿ ಸಾಕಾಣಿಕೆ ಮುಂತಾದವುಗಳಿಗಾದರೆ 50 ಸಾವಿರದವರೆಗಿನ ಸಾಲಕ್ಕೆ ಯಾವುದೇ ಜಾಮೀನನ್ನು ಬ್ಯಾಂಕುಗಳು ಕೇಳುವಂತಿಲ್ಲ. ಆದರೆ ಈ ರೀತಿಯ ಸುಲಭ ಸಾಲ ರೈತರಿಗೆ ಸಿಗುತ್ತಲೇ ಇಲ್ಲ. ಬ್ಯಾಂಕುಗಳಲ್ಲಿ ರೈತರಿಂದ ಜಾಮೀನು ಕೇಳಲಾಗುತ್ತಿದೆ.

ಮತ್ತೆ ಒಂದು ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಹಾಕಿದರೆ ಬೇರೆ ಬ್ಯಾಂಕುಗಳಲ್ಲಿ ತಾವು ಸಾಲ ಪಡೆದಿಲ್ಲ ಎಂದು ಉಳಿದ ಬ್ಯಾಂಕುಗಳಿಂದ ಅಕ್ಷೇಪಣಾ ರಹಿತ ಪತ್ರ(ಎನ್‌ಓಸಿ)ತರಬೇಕೆಂದು ಅಗತ್ಯವಿಲ್ಲದ ಷರತ್ತು ಹಾಕಲಾಗುತ್ತದೆ. ಬೇರೆ ಬ್ಯಾಂಕುಗಳಿಗೆ ಹೋದಾಗ ಅಲ್ಲಿ ಎನ್‌ಓಸಿ ಕೊಡಲು 5 ರೂ. ಸೇವಾ ಶುಲ್ಕ ಪಡೆಯಬೇಕಾದ ಕಡೆ 150 ರೂ. ಶುಲ್ಕ ವಿಧಿಸುವುದು, ಎನ್‌ಓಸಿ ಕೊಡಲು ವಿಳಂಬ ಮಾಡುವುದು ಸಿಬ್ಬಂದಿ ಕೊರತೆ ಎನ್ನುವುದು ನಡೆಯುತ್ತಿದೆ. ಇದರಿಂದ ರೈತನೊಬ್ಬ ಈ ಎನ್‌ಓಸಿ ಪತ್ರ ಪಡೆದುಕೊಳ್ಳಲು 500 ರಿಂದ 1,000 ರೂಪಾಯಿಗಳ ವರೆಗೆ ಹಣ ಖರ್ಚು ಮಾಡಬೇಕಾದ ಸನ್ನಿವೇಶ ಇದೆ. ಈ ಎಲ್ಲ ರಗಳೆಯೇ ಬೇಡವೆಂದು ಸಾಲ ಪಡೆಯುವ ಪ್ರಯತ್ನವನ್ನೇ ರೈತರು ಕೈ ಬಿಡುವ ಪ್ರಸಂಗಗಳಿಗೂ ಬರವಿಲ್ಲ.

ಪ್ರತಿ ಜಿಲ್ಲೆಯಲ್ಲೂ ಬ್ಯಾಂಕರ್ಸ್ ಸಮಿತಿ ಎಂಬುದೊಂದು ಇರುತ್ತದೆ. ಈ ಸಮಿತಿಗೆ ಜಿಲ್ಲಾ ಪಂಚಾಯ್ತಿಯ ಸಿಇಓ ಅಧ್ಯಕ್ಷರಾಗಿರುತ್ತಾರೆ. ಜಿಲ್ಲೆಗೆ ಒಂದು ಮುಂಚೂಣಿ ಬ್ಯಾಂಕ್(ಲೀಡ್ ಬ್ಯಾಂಕ್) ಎಂಬುದು ಇರುತ್ತದೆ. ಜಿಲ್ಲೆಯಲ್ಲಿ ಯಾವ ವಿಭಾಗಕ್ಕೆ ಎಷ್ಟು ಸಾಲ ಇತ್ಯಾದಿ ಅಂಶಗಳನ್ನು ಈ ಸಮಿತಿಯಲ್ಲಿ ಯೋಜಿಸಲಾಗುತ್ತದೆ. ಇದನ್ನು 'ಜಿಲ್ಲಾ ಸಾಲ ಯೋಜನೆ' (ಡಿ.ಸಿಡಿ.ಪಿ.) ಎಂದು ಕರೆಯಲಾಗುತ್ತದೆ. ಇದರಲ್ಲಿ ಕೃಷಿಗೆ ಆದ್ಯತೆ ಕೊಡಬೇಕು ಎಂದು ತೀರ್ಮಾನವಾದ ಈ ನೀತಿಯ ಜಾರಿಗಾಗಿ ತಳಹಂತದಿಂದಲೂ ಒತ್ತಡ ರೂಪಿಸುವ ಚಳುವಳಿಯ ಭಾಗವಾಗಿ ಕೋಲಾರ ಜಿಲ್ಲೆಯಲ್ಲಿ ಸುಮಾರು ಹದಿನೈದು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗಿದೆ. ಪ್ರತಿ ಬ್ಯಾಂಕ್ ಶಾಖೆ ಹೊಸದಾಗಿ 1,000 ಹೊಸ ರೈತರಿಗೆ ಸಾಲ ನೀಡಲೇಬೇಕೆಂಬ ಮಾರ್ಗಸೂಚಿ ರೂಪಿಸುವಂತೆ ಸಹ ರೈತ ಸಂಘ ಬೇಡಿಕೆ ಇಟ್ಟು ಒತ್ತಡ ತರುತ್ತಿದೆ.

ಸಾಮೂಹಿಕ ಆಂದೋಲನ

ಕಳೆದ ಎರಡು ವರ್ಷಗಳಲ್ಲಿ ಸಾಲದ ಅಗತ್ಯವಿರುವ ಸುಮಾರು 1500 ರೈತರು ಪ್ರಾಂತ ರೈತಸಂಘದ ನೇತೃತ್ವದಲ್ಲಿ ಸಾಲ ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಇವುಗಳಲ್ಲಿ ಇಲ್ಲಿಯವರೆಗೆ ಸು. 500 ರೈತರಿಗೆ ಮಾತ್ರ ಸಾಲ ದೊರೆತಿದೆ. ಸಾಕಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಸಾಮೂಹಿಕವಾಗಿ ಅರ್ಜಿ ಹಾಕಿದರೆ ಸ್ವೀಕರಿಸಲು ಸಾಧ್ಯವಿಲ್ಲ ಎಂದು ಕೆಲವು ಬ್ಯಾಂಕುಗಳಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಅರ್ಹ ಬಡರೈತರು ತಮ್ಮಷ್ಟಕ್ಕೆ ತಾವೇ ಸಾಲ ಕೇಳಿ ಬ್ಯಾಂಕಿಗೆ ಹೋದಾಗ ಸಾಲ ಸಿಕ್ಕಿದ್ದರೆ ಅವರು ರೈತಸಂಘದ ನೇತೃತ್ವದಲ್ಲಿ ಅರ್ಜಿ ಸಲ್ಲಿಸುವ ಸನ್ನಿವೇಶವಾದರೂ ಯಾಕೆ ಸೃಷ್ಟಿಯಾಗುತ್ತಿತ್ತು. !!

ಸರ್ಕಾರದ ಮಾರ್ಗಸೂಚಿಗಳಿಗೆ ವಿರುದ್ಧವಾಗಿ, ಸೂಕ್ತ ಕಾರಣವಿಲ್ಲದೇ ಬಡರೈತರ ಕೃಷಿಸಾಲದ ಅರ್ಜಿಯನ್ನು ತಿರಸ್ಕರಿಸಲು ಯಾರಿಗೂ ಅಧಿಕಾರವಿಲ್ಲ. ರೈತರಿಗೆ ಸಾಲವನ್ನು ಯಾರೂ ತಮ್ಮ ಜೇಬಿನ ಹಣದಿಂದ ನೀಡುವುದಿಲ್ಲ. ನೀಡಬೇಕಿಲ್ಲ. ಇಲ್ಲಿ ರಾಷ್ಟ್ರೀಯ ಹಿತಾಸಕ್ತಿಯ ಆಧಾರದಲ್ಲಿ ನಿರ್ಧಾರವಾದ ಅಂಶಗಳಿಗೆ ಸಾರ್ವಜನಿಕ ಮೊತ್ತವನ್ನು ವಿನಿಯೋಗ ಮಾಡಲು ಏನೇನೋ ಅಡ್ಡಿಗಳು. !!!

'ಬಡರೈತರಿಗೆ ಸಾಲ ನಿರಾಕರಿಸಿದರೆ ಕ್ರಿಮಿನಲ್ ಕೇಸ್ ದಾಖಲಿಸಬೇಕಾಗುತ್ತದೆ.' –ಕೋಲಾರ ಜಿಲ್ಲಾಧಿಕಾರಿ ಎಚ್ಚರಿಕೆ

ರೈತ ಸಂಘ ತನ್ನ ಹೋರಾಟ–ಪ್ರಯತ್ನಗಳನ್ನು ನಿಲ್ಲಿಸಿಲ್ಲ. ಜುಲೈ 28, 2014 ರಂದು ಕೋಲಾರದಲ್ಲಿ ಈ ಸಂಬಂಧ ಒಂದು 'ಜಿಲ್ಲಾ ಬ್ಯಾಂಕ್ ವ್ಯವಸ್ಥಾಪಕರ ಸಭೆ' ನಡೆದಿದೆ. ಪ್ರಾಂತ ರೈತ ಸಂಘದ ಒತ್ತಾಯದ ಫಲವಾಗಿ ಜಿಲ್ಲೆಯ ವಿವಿಧ ಬ್ಯಾಂಕುಗಳ ಮೇನೇಜರುಗಳ ಸಭೆಯನ್ನು ಕೋಲಾರ ಜಿಲ್ಲಾ ಪಂಚಾಯ್ತಿಯ ಸಭಾಂಗಣದಲ್ಲಿ ಕರೆಯಲಾಗಿತ್ತು. ಈ ಸಭೆಯಲ್ಲಿ ಕೋಲಾರದ ಜಿಲ್ಲಾಧಿಕಾರಿಗಳು ಬಡರೈತರಿಗೆ ಸಾಲ ನೀಡದೇ ಅವರನ್ನು ಅಲೆದಾಡಿಸುತ್ತಿರುವ ಬ್ಯಾಂಕ್ ಮೇನೇಜರ್‌ಗಳ ಮತ್ತು ಬ್ಯಾಂಕಿನ ಧೋರಣೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡು ನಿಯಮಗಳನ್ನು, ಸಾಲದ ಮಾರ್ಗಸೂಚಿಯನ್ನು ಸರಿಯಾಗಿ ಪಾಲಿಸಿ ಅರ್ಹ ರೈತರಿಗೆಲ್ಲರಿಗೂ ಸಾಲ ನೀಡಬೇಕೆಂದು ಇಲ್ಲವಾದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ವಹಿಸಬೇಕಾಗುತ್ತದೆ ಎಂದು ಕಟುವಾದ ಎಚ್ಚರಿಕೆ ನೀಡಿದ್ದಾರೆ. ಈ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಕೋಲಾರ ಜಿಲ್ಲಾ ಮುಖಂಡರಾದ ಪಿ. ಸೂರ್ಯನಾರಾಯಣ, ಟಿ.ಎನ್.ವೆಂಕಟೇಶ್ ಮುಂತಾದವರು ಮಾತನಾಡಿ ರೈತರ ಸಂಕಷ್ಟಗಳನ್ನು ಎಳೆಎಳೆಯಾಗಿ ಬಿಡಿಸಿಟಿದ್ದಾರೆ. ಜಿಲ್ಲಾಧಿಕಾರಿಗಳು ಮುಂದಿನ ಸೆಪ್ಟೆಂಬರ್‌ನಲ್ಲಿ ನಡೆಯುವ ಸಭೆಗೆ ಮುನ್ನ ಸಾಲ ನೀಡಿಕೆಗೆ ಸ್ಪಷ್ಟ ಗುರಿ ನಿಗದಿಪಡಿಸಿ ತಾಕೀತು ಮಾಡಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಪ್ರಾಂತ ರೈತ ಸಂಘವು ಚಳುವಳಿಯನ್ನು ಮುಂದೊಕ್ಕೊಯಲು ತೀರ್ಮಾನಿಸಿದೆ.

ಮರಕುಂಬಿ ದಲಿತರ ಮೇಲೆ ಮರುಕಳಿಸಿದ ದೌರ್ಜನ್ಯ

ಗೋಪಾಲಕೃಷ್ಣ

ಸಾಮೂಹಿಕ ಬಹಿಷ್ಕಾರಕ್ಕೆ ಒಳಗಾದ ಮರಕುಂಬಿಯ ದಲಿತರಿಂದ ಮನವಿಯನ್ನು ಸ್ವೀಕರಿಸಿದ್ದ ಕೊಪ್ಪಳ ಜಿಲ್ಲಾಧಿಕಾರಿ ಗಂಗಾವತಿಯಲ್ಲಿ ಸಂಧಾನ ಸಭೆಯನ್ನು ಏರ್ಪಡಿಸಿದ್ದರು. ಯಾವುದೇ ರೀತಿಯ ಅಸ್ಪೃಶ್ಯತೆ ಅಥವಾ ದಲಿತರ ಮೇಲೆ ದೌರ್ಜನ್ಯ ಎಸಗುವವರ ವಿರುದ್ಧ ಕಠಿಣ ಕ್ರಮ ಜರಗಿಸಲಾಗುವುದು ಎಂದು ಅವರು ಘೋಷಣೆ ಮಾಡಿದ್ದರು. ಆದರೆ ಸಂದಾನ ಸಭೆಯ ನಡಾವಳಿಗಳ ಪ್ರತಿ ದಲಿತರ ಕೈಸೇರುವ ಮೇಲೆ ಮರಕುಂಬಿಯಲ್ಲಿ ಇನ್ನೊಂದು ದೌರ್ಜನ್ಯದ ಪ್ರಕರಣ ನಡೆದಿದೆ.

ಹಿರೇಹುಲುಗಪ್ಪ ಎಂಬ ದಲಿತ ತನ್ನ ಗದ್ದೆಯ ಹತ್ತಿರಕ್ಕೆ ಹೋದಾಗ ಗ್ರಾಮದ ಸವರ್ಣೀಯರು ಕೆಲವರು ಗುಂಪಾಗಿ 'ಇಲ್ಲಿಗ್ಯಾಕೋ ಬಂದೆ............... ಮಗನೇ ಎಂದು ಅವಾಚ್ಯ ಶಬ್ಧಗಳಿಂದ ಬೈದು ಹಲ್ಲೆ ಮಾಡಿದ್ದಾರೆ. ಪೊಲೀಸರು ದೂರನ್ನು ದಾಖಲಿಸಿಕೊಂಡು ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ ಅವರಿಗೆ ಕೂಡಲೇ ಜಾಮೀನು ದೊರಕುವಂತೆ ಮಾಡಿದ್ದಾರೆ. ದಲಿತರ ವಿರುದ್ಧ ಮತ್ತು ಅವರ ಮುಖಂಡರ ವಿರುದ್ಧ ಸವರ್ಣೀಯರು ನೀಡಿದ ಸುಳ್ಳು ದೂರನ್ನು ಸಹ ಪೊಲೀಸರು ದಾಖಲು ಮಾಡಿದ್ದಾರೆ. ಹಲ್ಲೆಗೊಳಗಾದ ಹಿರೇಹುಲುಗಪ್ಪನನ್ನು ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಹಿನ್ನೆಲೆ :–

'ಮರುಕುಂಬಿ' ಗ್ರಾಮ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿದೆ. ಇಲ್ಲಿರುವ ಸುಮಾರು 60 ದಲಿತ ಕುಟುಂಬಗಳ ಸದಸ್ಯರು ಈ ಊರಿನಲ್ಲಿರುವ ಕ್ಷೌರದಂಗಡಿಗಳಲ್ಲಿ ಕ್ಷೌರ ಮಾಡಿಸಿಕೊಳ್ಳಲು ಆ ಊರಿನ ಸವರ್ಣೀಯ ಜಮೀನುದಾರರು ಬಿಡುವುದಿಲ್ಲ. ದಲಿತರು ಹೋಟೆಲ್‌ಗಳಿಗೆ ಹೋಗಲು ಬಿಡುವುದಿಲ್ಲ. ಈ ಬಗ್ಗೆ ಪ್ರಶ್ನೆ ಮಾಡಿದ್ದಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಅಂಗಡಿ ಸಾಮಾನು ಸಿಗದೆ, ಶಾಲೆಗೆ ಹೋಗುವ ದಲಿತ ಮಕ್ಕಳಿಗೆ ಆಟೋದಲ್ಲಿ ಪ್ರಯಾಣ ಮಾಡುವುದಕ್ಕೆ ಅಡ್ಡಿ ಮಾಡಿದ್ದಾರೆ.

ಈ ಅನ್ಯಾಯವನ್ನು ಪ್ರತಿಭಟಿಸಿ ಈ ಊರಿನ ದಲಿತರು ಸಿಪಿಐ(ಎಂ) ಮತ್ತು ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಹೋರಾಟದ ದಾರಿ ತುಳಿದಿದ್ದಾರೆ. ಈ ಬಗ್ಗೆ ಸಾಕಷ್ಟು ಸಲ ಸಂಬಂಧ ಪಟ್ಟ ಅಧಿಕಾರಿಗಳಿಗೆ ದೂರು ನೀಡಿದ್ದರೂ, ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿದು ದಲಿತರಿಗೆ ನ್ಯಾಯ ಒದಗಿಸಲು ಜಿಲ್ಲಾ ಮತ್ತು ತಾಲ್ಲೂಕು ಆಡಳಿತ ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ಅಸ್ಪೃಶ್ಯತೆ ಆಚರಣೆ ವಿರೋಧಿಸಿ ಮರುಕುಂಬಿಯಿಂದ ಗಂಗಾವತಿ ತಾಲ್ಲೂಕು ಕಛೇರಿವರೆಗೆ ಪಾದಯಾತ್ರೆ ನಡೆಸಿ ಸಂಬಂಧಪಟ್ಟ ಸವರ್ಣೀಯರ ಮೇಲೆ ದಲಿತರ ದೌರ್ಜನ್ಯ ಕಾಯಿದೆ ಪ್ರಕಾರ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕು ಅಧಿಕಾರಿಗಳು ದಲಿತರಿಗೆ ನ್ಯಾಯ ಒದಗಿಸುವ ಬದಲು ಆ ಊರಿನಲ್ಲಿದ್ದ ಕ್ಷೌರರ ಅಂಗಡಿ ಮತ್ತು ದಲಿತರಿಗೆ ಟೀ–ತಿಂಡಿ ನೀಡುತ್ತಿದ್ದ ಗಂಗಾಧರ ಸ್ವಾಮಿಯವರ ಹೋಟೆಲ್‌ಗಳನ್ನು ತೆರವುಗೊಳಿಸಿ ಸಮಸ್ಯೆ ಪರಿಹಾರ ಆಗಿದೆ ಎಂದು ಘೋಷಿಸಿದರು. ಇದರಿಂದ ಅಧಿಕಾರಿಗಳೇ ಸಾಮಾಜಿಕ ಬಹಿಷ್ಕಾರಕ್ಕೆ ಮತ್ತಷ್ಟು ಕುಮ್ಮಕ್ಕು ನೀಡಿದಂತಾಯಿತು. ಕೊನೆಗೆ 23 ಜುಲೈ 2014ರಂದು ಗಂಗಾವತಿಯಿಂದ ಕೊಪ್ಪಳ ಜಿಲ್ಲಾಧಿಕಾರಿ ಕಛೇರಿಗೆ ಕಾಲ್ನಡಿಗೆ ಜಾಥಾ ನಡೆಸಲು ನಿರ್ಧರಿಸಿದರು. ಮರುಕುಂಬಿ ದಲಿತರ ಹೋರಾಟಕ್ಕೆ ಸುತ್ತಲಿನ ಹಳ್ಳಿ ಜನರು ಬೆಂಬಲಕ್ಕೆ ಬಂದರು. ಸುಮಾರು 150ಕ್ಕೂ ಹೆಚ್ಚು ಜನ ಈ ಕಾಲ್ನಡಿಗೆ ಜಾಥಾದಲ್ಲಿ ಭಾಗವಹಿಸಿದರು. ಗಂಗಾವತಿಯ ಡಾ॥ ಬಿ.ಆರ್. ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ ಮತ್ತು ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ಹೂಮಾಲೆ ಹಾಕುವುದರ ಮೂಲಕ ಡಾ॥ ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಪಾದಯಾತ್ರೆ ಶುರುವಾಯಿತು. ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿರುವವರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಊರಿನ ಕ್ಷೌರದಂಗಡಿ, ಹೋಟೆಲ್‌ಗಳನ್ನು ತೆರೆದು, ದಲಿತರಿಗೆ ಕ್ಷೌರ ಮಾಡಿಸಿಕೊಳ್ಳಲು ಮತ್ತು ಹೋಟೆಲ್‌ಗಳಲ್ಲಿ ದಲಿತರಿಗೂ ಎಲ್ಲರಂತೆ ಪ್ರವೇಶದ ಅವಕಾಶ ಒದಗಿಸಬೇಕು, ಅಸ್ಪೃಶ್ಯತೆ ಅಳಿಯಲಿ, ಸಮಾನತೆ ಬೆಳೆಯಲಿ ಎಂದು ಸಾರುತ್ತಾ ತಮ್ಮ ಒಡಲೊಳಗಿನ ಕಿಚ್ಚನ್ನು ಹೊರಗೆ ಹಾಕಿ ಕೂಗಿದರು. ಡಾ॥ ಅಂಬೇಡ್ಕರ್‌ರವರ ಕನಸು ನನಸಾಗಿಸಲು ಅಸ್ಪೃಶ್ಯತೆ ವಿರೋದಿಸುವ ಎಲ್ಲಾ ನಾಗರೀಕರು ಒಂದುಗೂಡಬೇಕೆಂಬ ಘೋಷಣೆಯನ್ನು ದಾ–ರಿಯುದ್ದಕ್ಕೂ ಮೊಳಗಿಸಿದರು.


ಪಾದಯಾತ್ರೆ


ಕೊಪ್ಪಳ ಜಿಲ್ಲಾಡಳಿತ ಕಛೇರಿ ಎದುರು ಪ್ರತಿಭಟನೆ

ಕೊಪ್ಪಳಕ್ಕೆ ಕಾಲ್ನಡಿಗೆ

ಕಾಲ್ನಡಿಗೆಯನ್ನು ಉದ್ಘಾಟನೆ ಮಾಡಿ ಮಾತನಾಡಿದ ನಿತ್ಯಾನಂದಸ್ವಾಮಿಯವರು ಮರುಕುಂಬಿ ಮತ್ತು ಇತರೆ ಗ್ರಾಮಗಳಲ್ಲಿ ನಡೆಯುತ್ತಿರುವ ಜಾತಿ ದೌರ್ಜನ್ಯ–ತಾರತಮ್ಯಗಳ ವಿರುದ್ಧ ಸಿಪಿಐ(ಎಂ) ಹೋರಾಟ ನಡೆಸುತ್ತಾ ಬಂದಿದೆ. ಮರುಕುಂಬಿಯಲ್ಲಿ ಇದೇನು ಮೊದಲ ಘಟನೆಯಲ್ಲ. ಈ ಹಿಂದೆ ದಲಿತರ ಬಡಾವಣೆಯ ಸಮುದಾಯ ಭವನವನ್ನು ಸವರ್ಣೀಯರು ಭತ್ತದ ಮೂಟೆ ಹಾಕಲು ಉಪಯೋಗಿಸಿಕೊಂಡಿದ್ದರು. ಮರುಕುಂಬಿಯ ದಲಿತರ ಮನೆಯಲ್ಲಿ ಮದುವೆಯೊಂದು ನಿಶ್ಚಿತವಾದಾಗ ಈ ಸಮುದಾಯ ಭವನವನ್ನು ತೆರವು ಮಾಡಿ ಎಂದು ಕೇಳಿದ್ದಕ್ಕೆ 5 ಜನ ದಲಿತ ಯುವಕರನ್ನು ಕಂಬಕ್ಕೆ ಕಟ್ಟಿ ಹೊಡೆದು ದೌರ್ಜನ್ಯ ನಡೆಸಿದ್ದರು. ಆ ಸಂದರ್ಭದಲ್ಲಿ ಅಪರಾಧಿಗಳು ಶಿಕ್ಷೆಯಿಂದ ಪಾರಾಗಿದ್ದರು. ಈಗ ಕ್ಷೌರ ಮಾಡಿಸಿಕೊಳ್ಳುವುದಕ್ಕೆ ಅವಕಾಶ ನೀಡಬೇಕೆಂದು ಕೇಳಿದರೆ ಸಾಮಾಜಿಕ ಬಹಿಷ್ಕಾರ, ಕೂಲಿ ನೀಡುತ್ತಿಲ್ಲ. ದಲಿತರು ಅಸಹಾಯಕರಾಗಿದ್ದಾರೆ. ಆದ್ದರಿಂದ ಈ ಹೋರಾಟ, ಕಾಲ್ನಡಿಗೆ ಹಮ್ಮಿಕೊಂಡಿದ್ದೇವೆ. ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಲೇಬೇಕು. ಇಲ್ಲವಾದರೆ ಈ ಹೋರಾಟವನ್ನು ರಾಜ್ಯಾದ್ಯಂತ ತೀವ್ರಗೊಳಿಸುತ್ತೇವೆ ಎಂದು ಅವರು ಎಚ್ಚರಿಕೆ ನೀಡಿದರು. ಡಾ॥ ಬಿ.ಆರ್.ಅಂಬೇಡ್ಕರ್‌ರವರ ಕನಸು ನನಸಾಗಬೇಕು. ಅಲ್ಲಿಯವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದರು.

ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡಿ ಪ್ರಸ್ತುತ ರಾಜ್ಯದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿವೆ, ಸರ್ಕಾರ ಯಾವ ಕ್ರಮ ಜರುಗಿಸುತ್ತಿಲ್ಲ. ಹೋರಾಟ ಅನಿವಾರ್ಯವಾಗಿದೆ. ಜನವರಿ 2014ರಲ್ಲಿ ಬಾಗಲಕೋಟೆಯ ಗದ್ಯಾಳ, ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಸೇಗುಣಸಿ, ಜನವರಿ 26 ಗಣರಾಜ್ಯೋತ್ಸವದ ದಿನದಂದು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಕಗ್ಗಲಹಳ್ಳಿ, ಚಾಮರಾಜನಗರದ ಆಲ್ದೂರ್‌ಗಳಲ್ಲಿ ದಲಿತರ ಮೇಲೆ ದೌರ್ಜನ್ಯಗಳು ನಡೆದಿವೆ. ಗುಲ್ಬರ್ಗ ಜಿಲ್ಲೆಯ ಶಹಪುರದಲ್ಲಿ ದಲಿತ ಮುಖಂಡ ದೇವೇಂದ್ರಪ್ಪ ಭೀಮಪ್ಪ ದಳಪತಿ ಕೊಲೆ ನಡೆದಿದೆ.


ಸೌಹಾರ್ದ ಸಂಧಾನ ಸಭೆ

ಹೀಗೆ ನೂರಾರು ಅಸ್ಪೃಶ್ಯತಾ ಆಚರಣೆ, ಜಾತಿ ತಾರತಮ್ಯದ ದೌರ್ಜನ್ಯಗಳು ನಡೆದು ದಲಿತರ ಬದುಕಿನ ಮೇಲೆ ದಬ್ಬಾಳಿಕೆಗಳು ನಿರಂತರ ಎನ್ನುವಂತಾಗಿದೆ. ಸಂವಿಧಾನದ ಅನುಚ್ಛೇದ 15 ಮತ್ತು 17 ಜಾತಿ ತಾರತಮ್ಯ, ಅಸ್ಪೃಶ್ಯತೆ ನಿಷೇಧ ಮಾಡಿದ್ದರೂ ಭಾರತದ ಹಳ್ಳಿಗಳಲ್ಲಿ ಜಾತಿ ತಾರತಮ್ಯ ಮುಂದುವರೆದಿದೆ. ಜಾತಿ ತಾರತಮ್ಯ ತೊಲಗಿಸದೆ ಸಮಾನತೆ ಸಾಧಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿ ಕಾಲ್ನಡಿಗೆಯಲ್ಲಿ ಭಾಗವಹಿಸಿದರು.

ಕೊಪ್ಪಳದತ್ತ ಸಾಗುತ್ತಿದ್ದ ಕಾಲ್ನಡಿಗೆಯ ಮಧ್ಯೆ ಜಿಲ್ಲಾಧಿಕಾರಿಗಳು ಬಂದು ನಿಮ್ಮ ಸಮಸ್ಯೆಗಳೇನು, ನಿಮ್ಮ ಬೇಡಿಕೆಗಳೇನು ಎಂದು ಕೇಳಿದರು. ಪಾದಯಾತ್ರೆ ನೇತೃತ್ವವಹಿಸಿದ್ದ ಸಿಪಿಐ(ಎಂ) ಕೊಪ್ಪಳ ಜಿಲ್ಲಾ ಕಾರ್ಯದರ್ಶಿ ನಾಗರಾಜ್ ಮತ್ತು ಸಿಪಿಐ(ಎಂ) ಗಂಗಾವತಿ ತಾಲ್ಲೂಕು ಕಾರ್ಯದರ್ಶಿ ಹುಲುಗಪ್ಪರವರು ಮರುಕುಂಬಿಯಲ್ಲಿ ನಡೆದ ದಲಿತರ ಮೇಲಿನ ದೌರ್ಜನ್ಯ ವಿವರಿಸಿ ನ್ಯಾಯ ಒದಗಿಸಲು ಒತ್ತಾಯಿಸಿದರು. ಅಲ್ಲದೆ ತಾಲ್ಲೂಕಿನ ಪೊಲೀಸ್ ಅಧಿಕಾರಿಗಳು, ಎಸ್.ಪಿ., ಡಿವೈಎಸ್‌ಪಿ, ತಹಸಿಲ್ದಾರ, ತಾಲೂಕ್ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸದೆ ಸವರ್ಣೀಯ ಜಮೀನ್ದಾರರ ಪರವಾಗಿದ್ದಾರೆ ಎಂದು ತಿಳಿಸಿದರು.

ಸಮಸ್ಯೆಗಳನ್ನು ಆಲಿಸಿದ ಜಿಲ್ಲಾಧಿಕಾರಿಯವರು ಮರುಕುಂಬಿಗೆ ಹೋಗಿ ಪರಿಶೀಲಿಸಿ ಕ್ರಮ ಜರುಗಿಸುವುದಾಗಿ ತಿಳಿಸಿ ಅಲ್ಲಿಂದ ತೆರಳಿದರು.

ದಾರಿಯುದ್ದಕ್ಕೂ ಘೋಷಣೆ ಹಾಕುತ್ತಾ, ತಮಟೆ ಬಾರಿಸುತ್ತಾ ಸಾಗಿದ ಕಾಲ್ನಡಿಗೆ ಮಧ್ಯಾಹ್ನದ ಹೊತ್ತಿಗೆ ಬಸವಪಟ್ಟಣದ ಹತ್ತಿರ ಬೆಣಕಲ್‌ನಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘದ ಕಾರ್ಯಕರ್ತರು ನಿರುಪಾದಿಯವರ ನೇತೃತ್ವದಲ್ಲಿ ಹೂವಿನ ಸುರಿಮಳೆಗೈದು ಸ್ವಾಗತ ಮಾಡಿದರು. ಪಾದಯಾತ್ರೆಯಲ್ಲಿ ಬಂದವರಿಗೆ ಊಟೋಪಚಾರ ನಡೆಸಿದರು. ನಂತರ ಕೊಪ್ಪಳದ ಕಡೆಗೆ ಸಾಗಿ–ತು ಕಾಲ್ನಡಿಗೆ ಜಾಥಾ. ರಾತ್ರಿ ಕೊಪ್ಪಳ ತಾಲ್ಲೂಕಿನ ಗಿಣಿಗೆರಾದಲ್ಲಿ ಗ್ರಾಮಸ್ಥರು ಬರಮಾಡಿಕೊಂಡರು. ಊರಿನ ದಲಿತ ಮುಖಂಡರಾದ ಮಾರುತಪ್ಪ ಎಲ್ಲರಿಗೂ ಊಟೋಪಚಾರ ಮಾಡಿದರು.

ಜುಲೈ–23 ರಂದು ಗುಳಿಯಪ್ಪ ಎಂಬ ದಲಿತ ಮುಖಂಡರು ಬೆಳಿಗ್ಗೆ ಉಪಹಾರ ವ್ಯವಸ್ಥೆ ಮಾಡಿದ್ದರು. ಮಳೆ ಜಡಿಯುತ್ತಿದ್ದರೂ ಯಾವುದಕ್ಕೂ ಮಣಿಯದೆ ಕಾಲ್ನಡಿಗೆ ಮಧ್ಯಾಹ್ನದ ಹೊತ್ತಿಗೆ ಕೊಪ್ಪಳಕ್ಕೆ ಆಗಮಿಸಿತು. ಈ ಸಂದರ್ಭಕ್ಕೆ ಕೊಪ್ಪಳ ಜಿಲ್ಲೆಯ ವಿವಿಧ ಕಡೆಯಿಂದ ನೂರಾರು ಜನ ಸೇರಿಕೊಂಡು ಜಿಲ್ಲಾಧಿಕಾರಿ ಕಛೇರಿಯತ್ತ ಸಾಗಿದರು. ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಮತ್ತು ಸಿಐಟಿಯು ಗೆಳೆಯರು ಹೂವಿನ ಹಾರ ಹಾಕಿ ಸ್ವಾಗತಿಸಿದರು.

ಜಿಲ್ಲಾಧಿಕಾರಿ ಕಛೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಬರುವವರೆಗೂ ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರಿಗಳಾದ ಆರ್.ಆರ್. ಜನ್ನುರವರು ಬಂದು ಮನವಿ ಸ್ವೀಕರಿಸಿದರು. ಮರುಕುಂಬಿಯಲ್ಲಿ ನಡೆಯುತ್ತಿರುವ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ಕುರಿತು ಸವಿವರವಾದ ಮನವಿಯನ್ನು ಓದಿ ನಿತ್ಯಾನಂದ ಸ್ವಾಮಿ ವಿವರಿಸಿದರು.

ಜಿಲ್ಲಾಧಿಕಾರಿಯವರು 25 ಜುಲೈ ಮರುಕುಂಬಿಯಲ್ಲಿ ಶಾಂತಿ ಸಭೆ ನಡೆಸುತ್ತೇವೆ. ಕ್ಷೌರದಂಗಡಿ ಮತ್ತು ಹೋಟೆಲ್ ಆರಂಭಿಸಿ ದಲಿತರಿಗೆ ನ್ಯಾಯ ಒದಗಿಸುತ್ತೇವೆಂದು ತಿಳಿಸಿದರು. ಆದರೆ ಇದಕ್ಕೆ ಮರುಕುಂಬಿ ದಲಿತರು ಗಂಗಾವತಿಯಲ್ಲೇ ಸಭೆ ನಡೆಸಬೇಕೆಂದು ಪಟ್ಟು ಹಿಡಿದಾಗ ಜಿಲ್ಲಾಧಿಕಾರಿಗಳು ಮರುಪರಿಶೀಲಿಸುವುದಾಗಿ ಹೇಳಿ ಹೋದರು. ಇತ್ತ ಹೋರಾಟ ಮುಂದುವರಿಯಿತು. ರಾತ್ರಿ 8 ಗಂ–ಟೆಗೆ ಮತ್ತೆ ಬಂದ ಜಿಲ್ಲಾಧಿಕಾರಿಗಳು ಗಂಗಾವತಿಯಲ್ಲೇ ಸಭೆ ನಡೆಸುವುದಾಗಿ ಘೋಷಿಸಿದರು. ಇದರೊಂದಿಗೆ ಧರಣಿಯನ್ನು ಕೊನೆಗೊಳಿಸಲಾಯಿತು.


ಗಂಗಾವತಿಯಲ್ಲಿ ಶಾಂತಿ ಸಭೆ – ಕ್ಷೌರದಂಗಡಿ, ಹೋಟೆಲ್ ಆರಂಭಿಸುವ ಭರವಸೆ

25 ಜುಲೈ 2014ರಂದು ಗಂಗಾವತಿ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಜಿಲಾಧಿಕಾರಿ, ಎಸ್.ಪಿ. ಮತ್ತು ತಾಲ್ಲೂಕು ಅಧಿಕಾರಿಗಳು

ಪುಟ 14 ಕ್ಕೆ

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



ರಕ್ಷಣಾ ವಲಯದಲ್ಲಿ ಸ್ವಾವಲಂಬನೆಗೆ ಹೆಚ್ಚಿನ ವಿದೇಶಿ ಹಣದ ಮೇಲೆ ಅವಲಂಬನೆ!

ಎಫ್‌ಡಿಐ ಏರಿಕೆಗೆ ಮೋದಿ ಸಂಪುಟದ ಅಸ್ತು


ಮೋದಿ ಸರಕಾರ ತನ್ನ ಋಣಸಂದಾಯದ ಮೊದಲ ಬಜೆಟಿನಲ್ಲಿ ಕಾರ್ಪೊರೇಟ್‌ಗಳಿಗೆ ನೀಡಿದ ಉದಾರೀಕರಣದ ಬಕ್ಷೀಸಿನ ಮತ್ತೆರಡು ಕ್ರಮಗಳಿಗೆ ಈಗ ಕೇಂದ್ರ ಸಂಪುಟ ಮಂಜೂರಾತಿ ನೀಡಿದೆ. ಒಂದು, ರಕ್ಷಣಾ ವಲಯದಲ್ಲಿ ಎಫ್‌ಡಿಐ ಮಿತಿಯನ್ನು 26ಶೇ.ದಿಂದ 49ಶೇ.ಕ್ಕೆ ಏರಿಸುವುದು ಮತ್ತು ಇನ್ನೊಂದು ರೈಲ್ವೇ ಇಲಾಖೆಯಲ್ಲಿ ಎಫ್‌ಡಿಐಗೆ ಕೆಲವು ಕ್ಷೇತ್ರಗಳಲ್ಲಿ 100ಶೇ. ವರೆಗೂ ಅವಕಾಶ.

ರಕ್ಷಣಾ ವಲಯ ಒಂದು ಆಯಕಟ್ಟಿನ ವಲಯ, ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ಕಾಯ್ದುಕೊಳ್ಳುವಲ್ಲಿ ಪ್ರಧಾನವಾದ ಕ್ಷೇತ್ರ. ತಾನೊಂದೇ ನಿಜವಾದ 'ರಾಷ್ಟ್ರವಾದಿ ಪಕ್ಷ' ಎನ್ನುವ ಬಿಜೆಪಿ ಈ ಕ್ಷೇತ್ರದಲ್ಲೂ ಹೆಚ್ಚಿನ ವಿದೇಶಿ ಹಣಕ್ಕೆ ಅವಕಾಶ ಕೊಡಲು ಮುಂದೆ ಬಂದಿರುವುದು, ಅದೂ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಕೆಲವರಲ್ಲಿ ಆಶ್ಚರ್ಯ ಉಂಟುಮಾಡಿದೆ. ಆದರೆ ಇದರಲ್ಲಿ ಆಶ್ಚರ್ಯ ಪಡುವಂತದ್ದೇನೂ ಇಲ್ಲ. ಏಕೆಂದರೆ ರಕ್ಷಣಾ ವಲಯದಲ್ಲಿ ಎಫ್‌ಡಿಐಗೆ ಅವಕಾಶ ನೀಡುವ ಧೋರಣೆಯನ್ನು ಆರಂಭಿಸಿದ್ದೇ ವಾಜಪೇಯಿ ನೇತೃತ್ವದ ಮೊದಲ ಎನ್‌ಡಿಎ ಸರಕಾರ. ಅದನ್ನು ಯುಪಿಎ ಸರಕಾರಗಳು ಮುಂದೊಯ್ದವು. ಈಗ ಆರ್ಥಿಕದ ಇತರ ಎಲ್ಲ ಕ್ಷೇತ್ರಗಳಂತೆ ಇಲ್ಲಿಯೂ ದೇಶವನ್ನು ಕಾಂಗ್ರೆಸ್ –ಮುಕ್ತಗೊಳಿಸುವ ಪ್ರತಿಜ್ಞೆಗೈದಿರುವ ಮೋದಿ ನೇತೃತ್ವದ ಬಿಜೆಪಿ ಅದೇ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ ಹೆಜ್ಜೆಗುರುತುಗಳಲ್ಲೇ ಸಾಗುತ್ತಿರುವ ಇನ್ನೊಂದು ಕ್ರಮವಾಗಿ ಇದು ಬಂದಿದೆ.

ಈಗ ನಮ್ಮ ರಕ್ಷಣಾ ಉತ್ಪಾದನೆ 70ಶೇ.ದಷ್ಟು ಆಮದಿನ ಮೇಲೆ ಅವಲಂಬಿಸಿದೆ. ಇಂತಹ ಪರಿಸ್ಥಿತಿಯನ್ನು ಸುಧಾರಿಸಲು ಎಫ್‌ಡಿಐ ಏರಿಕೆ ಅಗತ್ಯ. ಆಮೂಲಕ ದೇಶ ಈ ರಂಗದಲ್ಲಿ ಸ್ವಾವಲಂಬನೆ ಸಾಧಿಸಬಹುದು ಎಂಬುದು ನಮ್ಮ ಕೆಲವು ದೊಡ್ಡ ಕಾರ್ಪೊರೇಟ್ ಕುಳಗಳ ವಾದ ಮತ್ತು ಅದರಿಂದಾಗಿ ಸಹಜವಾಗಿ ಬಿಜೆಪಿ ಮುಖಂಡರ ವಾದ. ನಿಜ, ಭಾರತದ ರಕ್ಷಣಾ ವಲಯ ಭಾರೀ ಬಿಕ್ಕಟ್ಟಿನಲ್ಲಿದೆ. ಅದಕ್ಕೆ ತುರ್ತಾಗಿ ಪರಿಹಾರಗಳನ್ನು ಕಂಡುಕೊಳ್ಳಬೇಕಾಗಿದೆ, ಆದರೆ ಎಫ್‌ಡಿಐ ಮಿತಿ ಏರಿಕೆ ಅದಕ್ಕೆ ಒಂದು ಪರಿಹಾರವಾಗಲಾರದು ಎಂಬುದು ಈ ವಲಯದ ತಜ್ಞರ ಅಭಿಪ್ರಾಯ. ಈಗಾಗಲೇ 26ಶೇ. ಎಫ್‌ಡಿಐಗೆ ಅವಕಾಶವಿದೆ, ಕೆಲವು ಆರಿಸಿದ ಕ್ಷೇತ್ರಗಳಲ್ಲಿ 74ಶೇ.ದಿಂದ 100ಶೇ.ದ ವರೆಗೂ ಇದೆ. ಅದರೂ ಕಳೆದ 14 ವರ್ಷಗಳಲ್ಲಿ ದೇಶದೊಳಕ್ಕೆ ಬಂದ 322 ಬಿಲಿಯ ಡಾಲರುಗಳಲ್ಲಿ ರಕ್ಷಣಾ ಉತ್ಪಾದನೆಯ ವಲಯಕ್ಕೆ ಬಂದದ್ದು ಕೇವಲ 4.8 ಬಿಲಿಯ ಡಾಲರುಗಳು ಮಾತ್ರ. ಅಂದರೆ ನಮ್ಮ ದೇಶ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಲ್ಲಿ 'ನೆರವಾಗಲು' ವಿದೇಶಿ ಶಸ್ತ್ರಾಸ್ತ್ರ ಉತ್ಪಾದಕರಿಗೆ ಎಷ್ಟು ಆಸಕ್ತಿ ಇದೆ ಎಂಬುದು ಇಳಿಯುತ್ತದೆ.

ವಾಸ್ತವವಾಗಿ ನಮ್ಮ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆ ವಿದೇಶಿ ಹಣದ ಅವಲಂಬನೆಯಿಂದ ಸಾಧ್ಯವಿಲ್ಲ ಎಂಬುದೀಗ ಸ್ಪಷ್ಟವಾಗಿದೆ. ಮತ್ತು ಮೋದಿ ಸಂಪುಟದಲ್ಲಿ ಹಣಕಾಸು ಮತ್ತು ರಕ್ಷಣಾ ಇಲಾಖೆಗಳನ್ನು ಒಬ್ಬರೇ ಮಂತ್ರಿ ನೋಡಿಕೊಳ್ಳುತ್ತಿರುವುದು, ರಕ್ಷಣಾ ಉತ್ಪಾದನೆಯನ್ನು ನೋಡಿಕೊಳ್ಳಲು ಸಾಮಾನ್ಯವಾಗಿ ಇದುವರೆಗೆ ಇದ್ದಂತೆ ರಕ್ಷಣಾ ರಾಜ್ಯ ಸಚಿವರೇ ಇಲ್ಲದಿರುವುದನ್ನು ನೋಡುವಾಗ ಮೋದಿ ಸರಕಾರ ರಕ್ಷಣಾ ಉತ್ಪಾದನೆಯಲ್ಲಿ ನಿಜವಾಗಿಯೂ ಸ್ವಾವಲಂಬನೆಯನ್ನು ಬಯಸುತ್ತಿದೆಯೇ ಎಂಬ ಪ್ರಶ್ನೆಯನ್ನು ಕೂಡ ತಜ್ಞರು ಎತ್ತುತ್ತಿದ್ದಾರೆ. ವಾಸ್ತವವಾಗಿ ಮೋದಿ ಸರಕಾರ ರಕ್ಷಣಾ ಉತ್ಪಾದನೆಯಲ್ಲಿ ಎಫ್‌ಡಿಐ ಮಿತಿ ಏರಿಸಿರುವುದು ವಿದೇಶಿ ಹೂಡಿಕೆದಾರರಿಗೆ 'ಸರಿಯಾದ ಸಂಕೇತ ನೀಡಲು' ಮತ್ತು ಕೆಲವು ದೇಶೀ ಕಾರ್ಪೊರೇಟ್ ಕುಳಗಳನ್ನು ಸಂತುಷ್ಟಗೊಳಿಸಲು ಮಾತ್ರವೇ ಇರಬಹುದು ಎಂಬ ಸಂದೇಹ ಹಲವರಿಗಿದೆ.

ರೈಲ್ವೆಯಲ್ಲಿ ಮೂಲರಚನೆಗಳಿಗೆ ಎಫ್‌ಡಿಐಯಂತೂ ಜನಸಾಮಾನ್ಯರ ಹಿತದೃಷ್ಟಿಯಿಂದ ಅಲ್ಲ, ಕೇವಲ ಶ್ರೀಮಂತ ಪ್ರಯಾಣಿಕರಿಗೆ ಸೂಪರ್ ವೇಗದ ರೈಲು ಸೌಲಭ್ಯ ಒದಗಿಸಲಿಕ್ಕಾಗಿ ಎಂಬುದು ಮೇಲ್ನೋಟಕ್ಕೇ ಕಾಣುತ್ತದೆ.



ಪ್ರಧಾನ ಮಂತ್ರಿಗಳ ಅಮೆರಿಕಾ ಪ್ರವಾಸದ ದಿರಿಸುಗಳೆಲ್ಲ ರೆಡಿಯಾಗುತ್ತಿವೆ

ರಕ್ಷಣಾಡೀಲ್‌ಗಳಿಗೊಂದು ಬಿಸಿನೆಸ್ ಡೀಲ್‌ಗಳಿಗೆ ಮತ್ತು ಸರಕಾರೀ ಸಮಾರಂಭಗಳಿಗೆ

ಕೃಪೆ: ನೈನನ್, ಟೈಂಸ್ ಆಫ್ ಇಂಡಿಯಾ

ವಿಮಾ ಎಫ್‌ಡಿಐ: ಕಾಂಗ್ರೆಸ್ ಬೆಂಬಲದ ನಿರೀಕ್ಷೆಯಲ್ಲಿ

ಈ ನಡುವೆ ಪ್ರಧಾನ ಮಂತ್ರಿಗಳು ಅಮೆರಿಕಾ ಪ್ರವಾಸಕ್ಕೆ ಹೋಗುವ ಮೊದಲು ವಿಮಾವಲಯದಲ್ಲಿ ಎಫ್‌ಡಿಐ ಮಿತಿಯನ್ನು 49ಶೇ.ಕ್ಕೆ ಏರಿಸುವುದಕ್ಕೆ ಸಂಸತ್ತಿನ ಅಂಗೀಕಾರ ಪಡೆದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದಿಂದ ಶಾಭಾಸ್ ಎನಿಸಿಕೊಳ್ಳುವ ಪ್ರಯತ್ನದಲ್ಲಿ ಹಲವು ಅಡ್ಡಿಗಳನ್ನು ಮೋದಿ ಸರಕಾರ ಎದುರಿಸಬೇಕಾಗಿ ಬಂದಿದೆ. ಕಾಂಗ್ರೆಸ್ ಇದು ತನ್ನದೇ ಪ್ರಸ್ತಾವವಾದ್ದರಿಂದ ಬೆಂಬಲಿಸಬಹುದೆಂಬ ಅದರ ನಿರೀಕ್ಷೆ ಈಡೇರಿಲ್ಲ. ಆದ್ದರಿಂದ ತಾನೇ ಹಿಂದೆ ವಿರೋಧಿಸಿದ್ದ ಮಸೂದೆಗೆ ಬೆಂಬಲ ಪಡೆಯಲು ಅದು ಈಗ ವಿವಿಧ ಪಕ್ಷಗಳ ಬೆಂಬಲ ಕೇಳಬೇಕಾದ ಸ್ಥಿತಿಗೆ ಬಂದಿದೆ. ಹಣಕಾಸು ಮಂತ್ರಿಗಳು ಹತಾಶರಾಗಿ ಜಂಟಿ ಅಧಿವೇಶನದ ಬೆದರಿಕೆಯನ್ನೂ ಹಾಕಿದ್ದಾರಂತೆ.

ಕಾಂಗ್ರೆಸಿನ ಹಿಂದಿನ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಈ ಮಸೂದೆಗೆ ಬೆಂಬಲ ಸೂಚಿಸಬೇಕೆಂದು ಬಯಸಿದರೆ, ಚುನಾವಣೆಗಳಲ್ಲಿ ಜನತೆ ತನ್ನ ನವ–ಉದಾರವಾದಿ ಧೋರಣೆಗಳನ್ನು ತಿರಸ್ಕರಿಸಿರುವುದರಿಂದ ಈ ಧೋರಣೆಗಳ ಪುನರ್ವಿಮರ್ಶೆ ಮಾಡಬೇಕೆಂದು ಯೋಚಿಸುವ ಒಂದು ಗುಂಪು ಕೂಡ ಇದೆ ಎನ್ನಲಾಗುತ್ತಿದೆ.

ವರ್ತಕ–ಪರ ಸರಕಾರ ಬಡವರ ಪರವಾದ ಸರಕಾರವಾಗಿರುತ್ತದಂತೆ!

ಹೀಗೆಂದವರು ಯಾರು ಗೊತ್ತೆ? ಇವರೂ ಒಬ್ಬ ಮೋದಿಯೇ, ಆದರೆ ಪ್ರಧಾನ ಮಂತ್ರಿಗಳಾಗಿರುವ ನರೇಂದ್ರ ಮೋದಿಯವರಲ್ಲ, ಆದರೂ ಅವರದೇ ಪಕ್ಷಕ್ಕೆ ಸೇರಿರುವ, ಬಿಹಾರದ ಮಾಜಿ ಮುಖ್ಯಮಂತ್ರಿ (ಬಹುಶಃ ಮುಂದೆ ಮುಖ್ಯಮಂತ್ರಿ ಪಟ್ಟಾಕಾಂಕ್ಷಿ) ಸುಶೀಲ್ ಮೋದಿ. ಕೊಲ್ಕತಾದಲ್ಲಿ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಸಭೆಯನ್ನುದ್ದೇಶಿಸಿ ಈ ಮಾತುಗಳನ್ನು ಅವರು ಹೇಳಿರುವುದಾಗಿ ವರದಿಯಾಗಿದೆ. ಬಡವರಿಗೆ ಕೊಡಲು ಸರಕಾರಕ್ಕೆ ಆದಾಯ ಸಂಗ್ರಹಿಸಬೇಕಾದರೆ ವರ್ತಕರ ಅಥವ ಉದ್ದಿಮೆದಾರರ ಪರವಾಗಿರಬೇಕಲ್ಲವೇ ಎಂಬ ತರ್ಕ ಅವರದ್ದು! ಪರೋಕ್ಷವಾಗಿಯಾದರೂ ಬಿಜೆಪಿ ಮುಖಂಡರು ತಮ್ಮದು ವರ್ತಕ–ಪರ ಅಥವ ಬಂಡವಾಳಿಗ–ಪರ ಪಕ್ಷ ಎಂದು ಒಪ್ಪಿಕೊಳ್ಳುತ್ತಿದ್ದಾರೆಯೇ?

ಉತ್ತರ ಪ್ರದೇಶದಲ್ಲಿ ಉಪ ಚುನಾವಣೆಗಳಿಗೆ ತಯಾರಿ: ಸರಾಸರಿ ದಿನಕ್ಕೆ 9 ಕೋಮುಗಲಭೆಗಳು

'ಅಭಿವೃದ್ಧಿ' ಅಜೆಂಡಾದ ಆಚೆ

ಆಗಸ್ಟ್ 5ರ 'ಇಂಡಿಯನ್ ಎಕ್ಸ್‌ಪ್ರೆಸ್'(ಇಂಟರ್ನೆಟ್ ಆವೃತ್ತಿ)ನಲ್ಲಿ ಪ್ರಕಟವಾಗಿರುವ ತನಿಖಾ ವರದಿಯಲ್ಲಿ ಪ್ರಸ್ತಾಪಿಸಿರುವ ಒಂದು ಘಟನೆ: ಉತ್ತರ ಪ್ರದೇಶದ ಬಿಜ್ನೋರ್–ಹರಿದ್ವಾರ ಹೆದ್ದಾರಿಯಲ್ಲೊಂದು ಮಂದಿರ, ಅಲ್ಲಿಂದ ಹತ್ತು ಮೀಟರುಗಳ ದೂರದಲ್ಲಿ ಒಂದು ಗೇಟ್ ನಿರ್ಮಿಸುತ್ತಿದ್ದರು. ಅದು ಮಸೀದಿಯ ಮೀನಾರ್‌ನ ರೂಪ ಪಡೆ–ಯುತ್ತಿದೆ ಎಂದು ಜಿಲ್ಲಾ ಆಡಳಿತಕ್ಕೆ ದೂರು ಹೋಯಿತು. ಗೇಟ್ ಕೆಲಸ ನಿಲ್ಲಿಸಲಾಯಿತು. ಆದರೆ ಆ ಮಂದಿರದಲ್ಲಿ ಒಂದು ಆಚರಣೆ ಆರಂಭವಾಯಿತು. ಪ್ರತೀವಾರ ಹನುಮಾನ್ ಚಾಲೀಸಾದ ಪಠಣ– ಅದರೊಂದಿಗೇ ಮೀನಾರನ್ನು ಹೋಲುವ ಗೇಟ್ ನಿರ್ಮಾಣದ ಪ್ರಸ್ತಾಪ ಮುಂದುವರೆಯುತ್ತಿದೆ. ಆ ಗೇಟಿನಿಂದ ಸ್ವಲ್ಪ ದೂರದಲ್ಲಿ ಸಣ್ಣ ಅಂಗಡಿ ಇಟ್ಟುಕೊಂಡಿರುವ ಎಪ್ಪತ್ತು ದಾಟಿದ ಜಕೀರ್ ಅಹ್ಮದ್ ಹೇಳುತ್ತಾನೆ–"ಬಹಳ ತಿಂಗಳುಗಳಿಂದ ಗೇಟ್ ನಿರ್ಮಾಣ ನಡೆಯಿತು. ಆಗೇನೂ ಯಾರದೂ ವಿರೋಧ ಕಂಡಿರಲಿಲ್ಲ. ಕಳೆದ ವಾರ ಇದ್ದಕ್ಕಿದ್ದಂತೆ ಪ್ರತಿಭಟನಾಕಾರರು ಬಂದು ಅದನ್ನು ಕೆಡವಬೇಕೆಂದು ಆಗ್ರಹಿಸುತ್ತಿದ್ದಾರೆ".

ಗುಲಾಬ್‌ಬಾಡಿ ಅದೇ ಪ್ರದೇಶದ ಇನ್ನೊಂದು ಊರು. ಅಲ್ಲಿ ಮುಸ್ಲಿಮರು ಮತ್ತು ದಲಿತರ ಸಂಖ್ಯೆ ಸುಮಾರು ಫಿಫ್ಟಿ–ಫಿಫ್ಟಿ. ಬಹಳ ವರ್ಷಗಳಿಂದ ಅನ್ಯೋನ್ಯವಾಗಿದ್ದವರು. ಇಕ್ಕಟ್ಟಾದ ಸಂದಿ–ಗೊಂದಿಗಳಲ್ಲಿ ಒಂದಕ್ಕೊಂದು ತಾಕಿಕೊಂಡಂತಿರುವ ಮನೆಗಳ ನಡುವೆ ಒಂದು ಮಸೀದಿ. ರಮಝಾನ್ ಹಬ್ಬದ ಪ್ರಯುಕ್ತ ಅದರ ಎರಡನೇ ಮಹಡಿಯಲ್ಲಿದ್ದ ಲೌಡ್‌ಸ್ಪೀಕರನ್ನು ಇನ್ನೂ ಮೂರಡಿ ಎತ್ತರಿಸಿ ಕಟ್ಟಲಾಯಿತು. ಆದರೆ ಪೋಲೀಸ್ ಠಾಣೆಗೆ ದೂರುಗಳ ಸುರಿಮಳೆ: "ಮಸೀದಿಯಲ್ಲಿ ಹೊಸದೊಂದು ಮೀನಾರ್ ಕಟ್ಟುತ್ತಿದ್ದಾರೆ, ಇದಕ್ಕೆ ಅವಕಾಶ ಕೊಡಬಾರದು"!


ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ನಡೆಸಿದ ಈ ತನಿಖೆಯ ಪ್ರಕಾರ ದಿಲ್ಲಿಯಲ್ಲಿ ಮೇ16ರಂದು "ಒಳ್ಳೆಯ ದಿನಗಳು ಆರಂಭವಾಗಿವೆ" ಎಂಬ ಆಶಯದೊಂದಿಗೆ ಹೊಸ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ಜುಲೈ 25ರ(ಆ ತನಿಖೆ ನಡೆಸಿದ ದಿನದ) ವರೆಗಿನ 10 ವಾರಗಳಲ್ಲಿ ಒಟ್ಟು 605 ಚಿಕ್ಕ–ದೊಡ್ಡ 'ಕೋಮು ಗಲಭೆಗಳು' ಎಂದು ಪೋಲೀಸ್ ಕಡತಗಳಲ್ಲಿ ದಾಖಲಾದ 605 ಘಟನೆಗಳು ನಡೆದಿವೆ ಎಂದು ಲೆಕ್ಕ ಹಾಕಿದೆ. ಅಂದರೆ ದಿನಕ್ಕೆ ಸುಮಾರು 8–9 ಗಲಭೆಗಳು. ವಿಶೇಷವೆಂದರೆ ಇವುಗಳಲ್ಲಿ ಮೂರನೇ ಒಂದರಷ್ಟು, ಅಂದರೆ ಸುಮಾರು 200 ಗಲಭೆಗಳು ಸದ್ಯದಲ್ಲೇ ಉಪಚುನಾವಣೆಗಳು ನಡೆಯಬೇಕಾದ 12 ಕ್ಷೇತ್ರಗಳಲ್ಲಿ ನಡೆದಿವೆ. ಇನ್ನೂ 200 ರಷ್ಟು ಇವೇ ಜಿಲ್ಲಾ ಪ್ರದೇಶಗಳಿಗೆ ಸೇರಿದ ಅಕ್ಕ–ಪಕ್ಕದ ಸ್ಥಳಗಳಲ್ಲಿ ನಡೆದಿವೆ. ಅಂದರೆ ಮೂರನೇ ಎರಡರಷ್ಟು ಇದೇ ಪ್ರದೇಶದಲ್ಲೇ ನಡೆದಿವೆ.

ಎಪ್ರಿಲ್‌ನಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ ಈ 12 ಕ್ಷೇತ್ರಗಳ ಎಂ.ಎಲ್.ಎ.ಗಳು ಎಂಪಿಗಳಾಗಿ ಚುನಾಯಿತರಾಗಿರುವುದರಿಂದಾಗಿ ನವಂಬರ್ ಒಳಗೆ ಈ 12 ಸ್ಥಾನಗಳಿಗೆ ಉಪಚುನಾವಣೆಗಳು ನಡೆಯಬೇಕಾಗಿದೆ. ಇದಕ್ಕೆ ಸಿದ್ಧತೆಯಾಗಿ ಈಗ ಬಿಜೆಪಿ ಅಧ್ಯಕ್ಷರಾಗಿರುವ ಅಮಿತ್ ಷಾರವರ ಯಶಸ್ವಿ ಕಾರ್ಯತಂತ್ರವನ್ನು ಮತ್ತೊಮ್ಮೆ ಅನುಸರಿಸಲಾಗುತ್ತಿದೆಯಂತೆ.

" ಒಂದು ಗುಂಪು ಪ್ರಶ್ನೆಗಳನ್ನು ಜ್ವಲಂತವಾಗಿಡಲು ಸತತ ಒತ್ತಡ ಗಳನ್ನು ಹಾಕುತ್ತಲೇ ಇದೆ. ನಮಗೆ ಪ್ರತಿದಿನ ದೂರುಗಳು ಬರುತ್ತವೆ, ಅವುಗಳಲ್ಲಿ ಹೆಚ್ಚಿನವು ಹಳೆಯವು, ಆದರೆ ಅವನ್ನು ಪ್ರತಿದಿನವೆಂಬಂತೆ ಎತ್ತಿಕೊಳ್ಳಲಾಗುತ್ತಿದೆ, ಎಲ್ಲೆಲ್ಲಿ ಸಾಧ್ಯವೋ ರಾಜಕೀಯವನ್ನು ತೂರಲಾಗುತ್ತಿದೆ" ಎಂದೊಬ್ಬ ಹಿರಿಯ ಆಡಳಿತ ಅಧಿಕಾರಿ ಇಂಡಿಯನ್ ಎಕ್ಸ್‌ಪ್ರೆಸ್ ತನಿಖಾ ತಂಡದೆದುರು ಅಳಲು ತೋಡಿಕೊಂಡರಂತೆ.

ಉಪಚುನಾವಣೆಗಳು ನಡೆಯಬೇಕಾದ 12 ಕ್ಷೇತ್ರಗಳನ್ನು ಒಳಗೊಂಡ ಈ ಪ್ರದೇಶದಲ್ಲಿ ನಡೆಯುತ್ತಿರುವ ಕೋಮು ಘಟನೆಗಳನ್ನು ಆರು ವಿಭಾಗಗಳಾಗಿ ವಿಂಗಡಿಸಿರುವ ಇಂಡಿಯನ್ ಎಕ್ಸ್‌ಪ್ರೆಸ್ ತನಿಖಾ ತಂಡ, ಇದರಲ್ಲಿ ಪ್ರಧಾನವಾಗಿ ಕಾಣುವುದು ನಿರ್ಮಾಣ ಚಟುವಟಿಕೆಗಳು– ಮಸೀದಿ, ಮದರಸಾ ಮತ್ತು ಕಬ್ರಿಸ್ತಾನ್(ಸ್ಮಶಾನ) ಗಳಿಗೆ ಮತ್ತು ಲೌಡ್‌ಸ್ಪೀಕರುಗಳಿಗೆ ಸಂಬಂಧಪಟ್ಟದ್ದು ಎನ್ನಲಾಗಿದೆ. ಇನ್ನೊಂದು ವಿಶೇಷವೆಂದರೆ ಈ ಎಲ್ಲ ಗಲಭೆಗಳು/ ಘಟನೆಗಳು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲೇ, ಇದುವರೆಗೆ ಗಲಭೆಗಳ ಇತಿಹಾಸವೇ ಇಲ್ಲದ ಕಡೆಗಳಲ್ಲೂ ನಡೆಯುತ್ತಿವೆ

ಪ್ರಚಾರ, ಪ್ರಚೋದನೆ ಮತ್ತು ನಿವೇದನೆಗಳಿಗೆ ಬಳಸಲಾಗುವ ಈ ಲೌಡ್‌ಸ್ಪೀಕರ್ ಈಗ ಕೋಮು ಧ್ರುವೀಕರಣದ ಪರಿಣಾಮಕಾರಿಯಾದ ಸಾಧನವಾಗಿದೆ ಎನ್ನುತ್ತದೆ ಈ ತನಿಖೆ.



ಭಗವದ್ಗೀತೆಯನ್ನು ಒಂದನೇ ತರಗತಿಯಿಂದ ಕಡ್ಡಾಯಗೊಳಿಸಿ
-ನ್ಯಾಯಾಧೀಶರು

ಮತ್ತು ಸಂಸ್ಕೃತ ಕಡ್ಡಾಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ

ಕೃಪೆ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಜಗದಗಲ

ಶರತ್‌ಚಂದ್ರ

ಬ್ರಿಕ್ಸ್ ಬ್ಯಾಂಕ್ ಬಗ್ಗೆ ಸಂಭ್ರಮ ಪಡಬೇಕೆ? ಇಲ್ಲ ! ಅಂತಾರೆ ಪ್ರೊ. ಪ್ರಭಾತ್ ಪಟ್ನಾಯಕ್

ಜುಲೈ 15ರಂದು ಐದು ಬ್ರಿಕ್ಸ್ (ಬ್ರೆಜಿಲ್, ರಶ್ಯ, ಚೀನಾ, ಇಂಡಿಯಾ, ದಕ್ಷಿಣಆಫ್ರಿಕಾ) ದೇಶಗಳು 'ಬ್ರಿಕ್ಸ್ ಬ್ಯಾಂಕ್'ಎಂಬ ಅಭಿವೃದ್ಧಿ ಬ್ಯಾಂಕಿನ ರಚನೆಯನ್ನು ಘೋಷಿಸಿದವು. ಅದರ ಮುಖ್ಯ ಕಚೇರಿ ಚೀನಾದ ಶಾಂಘಾಯ್ ನಲ್ಲಿ ಇರುತ್ತದೆ. ಭಾರತ ಅದರ ಮೊದಲ ಅಧ್ಯಕ್ಷನಾಗಿರುತ್ತದೆ. ಬ್ರಿಕ್ಸ್ ಬ್ಯಾಂಕ್ ಈ ಐದು ದೇಶಗಳು ಕೊಟ್ಟ 50 ಶತಕೋಟಿ ಡಾಲರುಗಳ ಮೂಲ ಬಂಡವಾಳ ಹೊಂದಿರುತ್ತದೆ. ಇದನ್ನು ಮೂರನೇ ಜಗತ್ತಿನ ದೇಶಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ ಕೊಡಲಾಗುವುದು. ಹಣ ಪಾವತಿಖೋತಾ ಎದುರಿಸುವ ದೇಶಗಳಿಗೆ 100 ಶತಕೋಟಿ ಡಾಲರುಗಳ ತುರ್ತು ನಿಧಿ ಇಡುವ ಯೋಜನೆ ಇದೆ. ಇದೇ ರೀತಿಯಲ್ಲಿ ಐ.ಎಂ.ಎಫ್.ಗೆ ಬದಲಿಯಾಗಿ ಸಿ.ಆರ್.ಎ. ಎಂಬ ಸಂಘಟನೆಯನ್ನು ಸ್ಥಾಪಿಸುವ ಯೋಜನೆ ಇದೆ.

ಹಲವು ಅರ್ಥಶಾಸ್ತ್ರಜ್ಞರು, ವೀಕ್ಷಕರು, ಮೂರನೆಯ ಜಗತ್ತಿನ ಸರಕಾರಗಳು, ಹಲವು ಪ್ರಗತಿಪರರೂ ಬ್ರಿಕ್ಸ್ ಬ್ಯಾಂಕ್‌ನ್ನು ಸ್ವಾಗತಿಸಿದ್ದಾರೆ. ಆ ಬಗ್ಗೆ ಆಶಾ ಭಾವನೆಗಳನ್ನು ಇಟ್ಟುಕೊಂಡಿದ್ದಾರೆ. ಸಂಭ್ರಮ ಸಹ ಪಟ್ಟಿದ್ದಾರೆ. ಆದರೆ ಅಂತಹ ಸಂಭ್ರಮ ಪಡುವ ಅಗತ್ಯ ಇಲ್ಲ. ಬ್ರಿಕ್ಸ್ ಬ್ಯಾಂಕ್ ಅಂತಹ ಆಶಾ ಭಾವನೆಗಳನ್ನು ಈಡೇರಿಸುವ ಸಾಧ್ಯತೆ ಕಡಿಮೆ ಅಂತಾರೆ ಪ್ರಸಿದ್ಧ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್.

ಈ ಆಶಾಭಾವನೆಗೆ ಮೂರು ಕಾರಣಗಳನ್ನು ಕೊಡಲಾಗುತ್ತದೆ. ಈಗ ವಿಶ್ವಬ್ಯಾಂಕಿನ ಅ-ಪ್ರಜಾಸತ್ತಾತ್ಮಕ ಸ್ವಭಾವದಿಂದಾಗಿ ಬ್ರಿಕ್ಸ್ ದೇಶಗಳಿಗೆ 'ಜಾಗತಿಕ ಆರ್ಥಿಕ ಆಡಳಿತ'ದಲ್ಲಿ ಸರಿಯಾದ ಪಾಲು ಇಲ್ಲ. ಬ್ರಿಕ್ಸ್ ಬ್ಯಾಂಕ್ ಈ ತಪ್ಪನ್ನು ಸರಿಪಡಿಸುತ್ತದೆ. ಎರಡನೆಯದಾಗಿ ವಿಶ್ವಬ್ಯಾಂಕಿನ 'ಬಂಡವಾಳದ ಷೇರುಗಳ ಆಧಾರದಲ್ಲಿ ಮತ'ದ ನೀತಿಗೆ ಬದಲಾಗಿ 'ಒಂದು ದೇಶಕ್ಕೆ ಒಂದು ಮತ' ಅನುಸರಿಸುವುದರಿಂದ ಬ್ರಿಕ್ಸ್ ಬ್ಯಾಂಕು ಎಲ್ಲಾ ಬಡದೇಶಗಳ ಬ್ಯಾಂಕು ಆಗುತ್ತದೆ. ಆ ಮೂಲಕ 'ಜಾಗತಿಕ ಆರ್ಥಿಕ ಆಡಳಿತ'ದಲ್ಲಿ ಬಡದೇಶಗಳ ತೂಕವನ್ನು ಹೆಚ್ಚಿಸುತ್ತದೆ. ಮೂರನೆಯದಾಗಿ, ವಿಶ್ವ ಬ್ಯಾಂಕಿನಂತೆ ನವ-ಉದಾರವಾದಿ ಆರ್ಥಿಕ ನೀತಿಗಳನ್ನು ಪಾಲಿಸಲು ಸೈದ್ಧಾಂತಿಕ ಒತ್ತಡವನ್ನು ಹಾಕದೆ, ಪ್ರಾಜೆಕ್ಟಿನ ಬಗ್ಗೆ ಬ್ರಿಕ್ಸ್ ಬ್ಯಾಂಕ್ ಪರಿಶೀಲಿಸುತ್ತದೆ.

ಮೇಲೆ ಹೇಳಿದ ಮೂರು ಆಶಾ ಭಾವನೆಗಳು ಈಡೇರುವ ಸಾಧ್ಯತೆ ಯಾಕೆ ಕಡಿಮೆ ಎನ್ನುವುದಕ್ಕೆ ಪ್ರೊ. ಪಟ್ನಾಯಕ್ ಕಾರಣಗಳನ್ನು ಕೊಡುತ್ತಾ ಹೋಗುತ್ತಾರೆ. ಮೊದಲನೆಯದಾಗಿ ಚೀನಾ ಬಿಟ್ಟರೆ ಉಳಿದ ನಾಲ್ಕು ಬ್ರಿಕ್ಸ್ ದೇಶಗಳಲ್ಲಿ ಅಂತರ್‌ರಾಷ್ಟ್ರೀಯ ಹಣಕಾಸು ಬಂಡವಾಳದ ಜತೆ ಸಾಕಷ್ಟು ಘನಿಷ್ಟ ಸಂಬಂಧ ಹೊಂದಿರುವ ದೊಡ್ಡ ಬಂಡವಾಳಶಾಹಿಗಳಿದ್ದಾರೆ. ಉಕ್ರೇನ್ ವಿಚಾರದಲ್ಲಿ ಪಾಶ್ಚಿಮಾತ್ಯ ದೇಶಗಳ ಜತೆ ತೀವ್ರ ಘರ್ಷಣೆ ಇರುವ ರಶ್ಯದ ಬಗೆಗೂ ಇದು ನಿಜ. ಬ್ರಿಕ್ಸ್ ದೇಶಗಳ ಪ್ರಭುತ್ವಗಳ ವರ್ಗ-ಸ್ವರೂಪವನ್ನು ನಿರ್ಲಕ್ಷಿಸಿ ಬ್ರಿಕ್ಸ್ ಬ್ಯಾಂಕಿನ ಬಗ್ಗೆ ವಿಶ್ಲೇಷಿಸಲು ಬರುವುದಿಲ್ಲ. ಐ.ಎಂ.ಎಫ್.ಗೆ ಬದಲಿಯಾಗಿ ಬರಲಿರುವ ಸಿ.ಆರ್.ಎ. ಶೇ.30ಕ್ಕಿಂತ ಹೆಚ್ಚು ಸಾಲ ತೆಗೆದುಕೊಳ್ಳುವ ದೇಶಗಳಿಗೆ ಆರ್ಥಿಕ ನೀತಿಗಳ ಬಗ್ಗೆ ಶರತ್ತುಗಳನ್ನು ಹಾಕುವ ಪ್ರಸ್ತಾವವಿದೆ ಎಂಬುದೇ ಈ ಸಂಗತಿ ಬಗ್ಗೆ ಸ್ಪಷ್ಟತೆ ಕೊಡಬಹುದು, ಎನ್ನುತ್ತಾರೆ ಪ್ರೊ. ಪಟ್ನಾಯಕ್.

ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ಎರಡೂ ಅವನತಿ ಹೊಂದುತ್ತಿರುವ ಸಂಘಟನೆಗಳು. ಈಗ ಅಂತರ್‌ರಾಷ್ಟ್ರೀಯ ಸಾಲಗಳನ್ನು ಕೊಡುತ್ತಿರುವುದು ಖಾಸಗಿ ಬ್ಯಾಂಕುಗಳು, ಎಂಬುದು ನಿಜ. ಆದರೆ 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರ ಐ.ಎಂ.ಎಫ್.ಗೆ ಜೀವದಾನ ಮಾಡಿದ್ದು ಜಿ-20 ದೇಶಗಳು. ಆ ಪ್ರಸ್ತಾವದಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಭಾರತ ಮತ್ತು ಪ್ರಮುಖ ಮುಂದುವರಿದ ಬಂಡವಾಳಶಾಹಿ ದೇಶಗಳ ಪುನಶ್ಚೇತನಕ್ಕೆ ನಿಧಿ ಒದಗಿಸಿದ್ದು ಚೀನಾ. ಮಾತ್ರವಲ್ಲ, 'ಜಾಗತಿಕ ಆರ್ಥಿಕ ಆಡಳಿತ'ವನ್ನು ಪ್ರಜಾಸತ್ತಾತ್ಮಕಗೊಳಿಸಲು ಸಾಮಾನ್ಯ ಸಭೆಯ ಅಧ್ಯಕ್ಷರ ಪ್ರಸ್ತಾವಗಳನ್ನು ಬುಡಮೇಲು ಮಾಡಲು ಜಿ-20 ದೇಶಗಳು ಈ ಪ್ರಸ್ತಾವವನ್ನು ತಂದಿದ್ದು. ಈಗ ಇದ್ದಕ್ಕಿದ್ದ ಹಾಗೆ ಈ ದೇಶಗಳಿಗೆ 'ಜ್ಞಾನೋದಯ' ಆಗಿ ಬ್ರಿಕ್ಸ್ ಬ್ಯಾಂಕ್ ಮೂಲಕ ಬಡದೇಶಗಳ 'ಛಾಂಪಿಯನ್' ಆಗಿ ಬಿಡುತ್ತವೆ ಎಂದು ಹೇಗೆ ನಂಬುವುದು ಎಂದು ಪ್ರಶ್ನಿಸುತ್ತಾರೆ ಪ್ರೊ. ಪಟ್ನಾಯಕ್.





LUO JIE / CHINA DAILY

ಸಾಮ್ರಾಜ್ಯಶಾಹಿ ಜತೆ ಮೂರನೇ ಜಗತ್ತಿನ ದೊಡ್ಡ ಬಂಡವಾಳಶಾಹಿಗಳ ಸಂಬಂಧ ಎಂದಿಗೂ ಒಂದೇ ರೀತಿ ಇರುವುದಿಲ್ಲ. ಅವರು ಸಾಮ್ರಾಜ್ಯಶಾಹಿಯಿಂದ ಸಾಕಷ್ಟು ಸ್ವಾತಂತ್ರ್ಯ ಸ್ವಾಯತ್ತತೆ ಬಯಸಿದ್ದ ಕಾಲವೊಂದಿತ್ತು. ಇದರಿಂದಾಗಿಯೇ ನೆಹರೂವಾದಿ ಲೈಸೆನ್ಸ್‌ರಾಜ್ ಬಂದಿದ್ದು. ಆದರೆ ಯಾವಾಗಲೋ ಮೂರನೇ ಜಗತ್ತಿನ ದೊಡ್ಡ ಬಂಡವಾಳಶಾಹಿಗಳು ಸಾಮ್ರಾಜ್ಯಶಾಹಿ ಜತೆ ಘನಿಷ್ಟ ಸಂಬಂಧ ಬಯಸಿದ್ದಾರೆ, ಬೆಳೆಸಿದ್ದಾರೆ. ಭಾರತದ ದೊಡ್ಡ ಬಂಡವಾಳಶಾಹಿಗಳೇ ಬಹಳ ದೀರ್ಘಕಾಲ ಈ ಸ್ವಾಯತ್ತತೆಯನ್ನು ಇಟ್ಟುಕೊಂಡಿದ್ದು. ಆದರೆ ಅವರೇ ಸಾಮ್ರಾಜ್ಯಶಾಹಿಗಳನ್ನು ಅಪ್ಪಿಕೊಂಡೇ 2-3 ದಶಕಗಳು ಆಗಿವೆ. ಈಗ ಇವು ಇತರ ಮೂರನೇ ಜಗತ್ತಿನ ಬಡದೇಶಗಳಲ್ಲಿ ತಮ್ಮ ಪ್ರಾಬಲ್ಯ ಬೆಳೆಸಿ ತಮ್ಮ ಬಾಲಬಡುಕ ಮಾಡಿಕೊಳ್ಳಲು ಹೊರಟಿದೆ, ಹಿಂದೆ ಸಾಮ್ರಾಜ್ಯಶಾಹಿಗಳು ಮಾಡಿದ ಹಾಗೆ. ಮಾತ್ರವಲ್ಲ, ಸಾಮ್ರಾಜ್ಯಶಾಹಿಗಳನ್ನು ವಿರೋಧಿಸಿಯೂ ಅಲ್ಲ, ಅವರ ಜತೆ ಶಾಮೀಲಾಗಿ.

ಭಾರತ ಆಫ್ರಿಕಾದಲ್ಲಿ ಭೂಕಬಳಿಕೆ ಮಾಡುತ್ತಿರುವುದು, ಮೂರನೇ ಜಗತ್ತಿನ ದೇಶಗಳ ಜತೆ ನಮ್ಮ ರೈತರ ಹಿತಾಸಕ್ತಿಗಳನ್ನೂ ಬಲಿ ಕೊಟ್ಟು ಮುಕ್ತ ವ್ಯಾಪಾರ ಮಾಡಿಕೊಳ್ಳುತ್ತಿರುವುದು ಭಾರತೀಯ ದೊಡ್ಡ ಬಂಡವಾಳಶಾಹಿಯ ಜಾಗತಿಕ ವಿಸ್ತರಣಾ ಯೋಜನೆಗೆ ಕುಮ್ಮಕ್ಕು ಕೊಡಲು. ಭಾರತದ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಖಾಸಗೀಕರಣಕ್ಕೆ ಹುನ್ನಾರ ನಡೆಸುತ್ತಿರುವ ಸರಕಾರ, ಬಡ ದೇಶಗಳಿಗಾಗಿ ಸಾರ್ವಜನಿಕ ಬ್ಯಾಂಕು ಮಾಡುತ್ತದೆ ಎಂದು ನಂಬುವುದು ಪೆದ್ದುತನ ಅಷ್ಟೇ ಎಂದು ಪ್ರೊ. ಪಟ್ನಾಯಕ್ ವಾದಿಸ್ತಾರೆ.

ಬಡದೇಶಗಳಿಗೆ ಅಂತರ್‌ರಾಷ್ಟ್ರೀಯ ಸಾಲ ಏಕೆ ಬೇಕಾಗುತ್ತದೆ ಎಂದು ಪರಿಶೀಲಿಸಿದರೆ ಬ್ರಿಕ್ಸ್ ಬ್ಯಾಂಕಿನ ಹೂರಣದ ಬಗ್ಗೆ ತಿಳಿಯುತ್ತದೆ. ಮೂಲಸೌಕರ್ಯದಲ್ಲಿ ಸ್ಥಳೀಯವಾಗಿ ಸಿಗುವ ವಸ್ತುಗಳಿರುತ್ತವೆ. ಆಮದಾಗುವ ವಸ್ತುಗಳೂ ಇರುತ್ತವೆ. ಸ್ಥಳೀಯ ವಸ್ತುಗಳ ಖರೀದಿಗೆ ಸ್ಥಳೀಯ ಬ್ಯಾಂಕುಗಳು ಸಾಲ ಕೊಡಬಹುದು. ಆಮದಾಗುವ ವಸ್ತುಗಳಿಗೆ ಮಾತ್ರ ಅಂತರ್‌ರಾಷ್ಟ್ರೀಯ ಸಾಲ ಬೇಕಾಗುತ್ತದೆ. ಆದರೆ ಹಣಕಾಸು ಬಂಡವಾಳ (ಮತ್ತು ಅದರ ಏಜೆಂಟರು) ಹಾಗೆ ನೋಡುವುದಿಲ್ಲ. ಎಲ್ಲಾ ಸಂಪನ್ಮೂಲಗಳನ್ನು ಹಣಕಾಸು ರೂಪದಲ್ಲಿ ನೋಡ್ತಾರೆ. ಸ್ಥಳೀಯ ಸಾಲದ ವಿಸ್ತರಣೆ ಹಣದುಬ್ಬರಕ್ಕೆ ಎಡೆ ಮಾಡಿಕೊಡುತ್ತದೆ. ಹಣಕಾಸು ಬಂಡವಾಳದ ಏಜೆಂಟರಿಂದ ಅರ್ಥಶಾಸ್ತ್ರ ಕಲಿತವರು, ಅದನ್ನೇ ವೇದವಾಕ್ಯ ಎನ್ನುವವರು, ಇದನ್ನು ಒಪ್ಪುತ್ತಾರೆ. ಆದ್ದರಿಂದ ಸ್ಥಳೀಯ ವಸ್ತುಗಳ ಬದಲಿಗೆ ಆಮದಾಗುವ ವಸ್ತುಗಳನ್ನು ಬಳಸಲು ಉತ್ತೇಜನ ಕೊಡಲಾಗುತ್ತದೆ. ಸ್ಥಳೀಯ ಸಾಲಗಳ ಮೇಲೆ ನಿರ್ಬಂಧ, ವಿದೇಶೀ ಸಾಲದ ಸುಲಭ ಲಭ್ಯತೆ ಇದನ್ನು ಮಾಡುತ್ತದೆ. ಇದನ್ನು ಜಾಗತಿಕ ಟೆಂಡರ್ ಕರೆಯುವುದು ಕಡ್ಡಾಯ ಮಾಡುವುದರಿಂದ ಸಹ ಮಾಡಲಾಗುತ್ತದೆ. ಚುಟುಕಾಗಿ ಹೇಳುವುದಾದರೆ, ಬ್ರಿಕ್ಸ್ ದೇಶಗಳ ದೊಡ್ಡ ಬಂಡವಾಳಶಾಹಿಗಳಿಗೆ ಬಡದೇಶಗಳ ಸ್ಥಳೀಯ ಉತ್ಪಾದಕರನ್ನು ಉಚ್ಚಾಟಿಸಿ, ಬ್ರಿಕ್ಸ್ ಬ್ಯಾಂಕ್ ಆ ದೇಶಗಳ ಆರ್ಥಿಕದಲ್ಲಿ ದೊಡ್ಡ ಪಾಲು ಪಡೆಯಲು ನೆರವಾಗುತ್ತದೆ. 'ನವ-ಉದಾರವಾದ' ಇದನ್ನು ಈಗಾಗಲೇ ಮಾಡುತ್ತಿದೆ. ಬ್ರಿಕ್ಸ್ ಬ್ಯಾಂಕ್ ಇದನ್ನು ಇನ್ನಷ್ಟು ತೀವ್ರಗೊಳಿಸುತ್ತದೆ. ವಿದೇಶೀ ಸಾಲದ ಸುಲಭ ಲಭ್ಯತೆಯ ದೂರಗಾಮಿ ಪರಿಣಾಮ ಗಂಭೀರ 'ಹಣ ಪಾವತಿಖೋತಾ' (ರಫ್ತಿಗಿಂತ ಆಮದು ತೀರಾ ಹೆಚ್ಚಿ ವಿದೇಶಿ ವಿನಿಮಯದ ತೀವ್ರ ಕೊರತೆ) ಬಿಕ್ಕಟ್ಟು.

ಬ್ರಿಕ್ಸ್ ಬ್ಯಾಂಕಿನಂತಹ ಸಂಘಟನೆಗಳ ಪರಿಣಾಮ ಅದರ ಹಿಂದಿರುವ ಪ್ರಭುತ್ವಗಳ ನಿಯಂತ್ರಣ ಹೊಂದಿರುವ ನೀತಿಗಳ ಮೇಲೆ ಅವಲಂಬಿಸುತ್ತಿರುತ್ತವೆ. ಅವು ಬಂಡವಾಳ ಮತ್ತು ವ್ಯಾಪಾರದ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೊಂದಿದ್ದರೆ, ಸಾಮ್ರಾಜ್ಯಶಾಹಿಯ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳುವ ಸಹಾಯ ಮಾಡಬಲ್ಲುದು. ನವ-ಉದಾರವಾದಿ ನೀತಿಗಳನ್ನು ಅನುಸರಿಸುತ್ತಿರುವ ಪ್ರಭುತ್ವಗಳಿದ್ದಾಗ ಅದರ ಪರಿಣಾಮ ತದ್ವಿರುದ್ಧ ಇರುತ್ತದೆ. ಆದ್ದರಿಂದ ಬ್ರಿಕ್ಸ್ ಬ್ಯಾಂಕಿನ ಬಗ್ಗೆ ಭಾರತ ಅಥವಾ ಇತರ ಬಡದೇಶಗಳ ಬಡವರಿಗೆ ಸಂಭ್ರಮ ಬೇಡ ಎಂದು ಪ್ರೊ. ಪಟ್ನಾಯಕ್ ಆಧಾರ ಸಹಿತವಾಗಿ ವಾದಿಸ್ತಾರೆ. ●

ಮರಕುಂಬಿ ದಲಿತರ ಮೇಲೆ....

ಪುಟ 12 ರಿಂದ

ಭಾಗವಹಿಸಿದ್ದ ಸಭೆಯಲ್ಲಿ ಮರುಕುಂಬಿ ದಲಿತರು ಮತ್ತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ ಭಾಗವಹಿಸಿದ್ದರು. ಸವರ್ಣೀಯ ಮುಖಂಡರುಗಳು ಸಹ ಭಾಗವಹಿಸಿದ್ದರು. ಸಮಸ್ಯೆಗಳ ಬಗ್ಗೆ ಗಂಭೀರ ಚರ್ಚೆ ನಡೆದು ತಕ್ಷಣ ಕ್ಷೌರದಂಗಡಿ, ಹೋಟೆಲ್ ಆರಂಭಿಸಿ ದಲಿತರಿಗೆ ಪ್ರವೇಶ ನೀಡಬೇಕೆಂದು ಆದೇಶ ನೀಡಿದರು. ಅಸ್ಪೃಶ್ಯತೆ ಆಚರಿಸುವವರ ವಿರುದ್ಧ ಕ್ರಮ ಜರುಗಿಸುವ ಭರವಸೆ ನೀಡಿದರು.

ಆದರೆ ಶಾಂತಿ ಸಭೆಯ ತೀರ್ಮಾನಗಳು ಜಾರಿಯಾಗುವ ಮೊದಲೇ ದಲಿತ ರೈತನೊಬ್ಬನ ಮೇಲೆ ಮತ್ತೆ ಹಲ್ಲೆಯಾಗಿದೆ. ಹಲ್ಲೆ ಮಾಡಿದವರಿಗೆ ಕೋರ್ಟ್‌ನಲ್ಲಿ ತಕ್ಷಣ ಜಾಮೀನು ಸಿಕ್ಕಿದೆ. ಮರಕುಂಬಿಯ ಸಿಪಿಐ(ಎಂ) ಮುಖಂಡ ಹೆಚ್. ಗಂಗಾ ಧರಯ್ಯ ಅವರ ಮನೆಯ ಮೇಲೆ ಕಲ್ಲುಗಳನ್ನು ಎಸೆಯಲಾಗಿದೆ. ದಲಿತರ ಬಟ್ಟೆ ಹೊಲಿದು ಕೊಡಬಾರದೆಂದು ಬಟ್ಟೆ ಹೊಲಿಯುವ ಬಡ ಮುಸಲ್ಮಾನನಿಗೆ ಬೆದರಿಕೆ ಹಾಕಿದ್ದಾರೆ. ಉಪ ವಿಭಾಗಾಧಿಕಾರಿಯವರ ನೇತೃತ್ವದಲ್ಲಿ ಇನ್ನೊಂದು ಶಾಂತಿ ಸಭೆ ಮರಕುಂಬಿ ಗ್ರಾಮದಲ್ಲೇ ನಡೆಸಲಾಗಿದೆ. ಅದೇ ಭರವಸೆಗಳನ್ನು ನೀಡಲಾಗಿದೆ. ಬಹಿಷ್ಕಾರಕ್ಕೆ ಒಳಗಾಗಿ ನೊಂದ ಕುಟುಂಬಗಳಿಗೆ ಯಾವುದೇ ಸ್ವಾಂತನ ದೊರೆಯಲಿಲ್ಲ. ಸವರ್ಣೀಯರಿಗೆ ರಾಜಕಾರಣಿಗಳ ಬೆಂಬಲ ಇದೆ. ದಲಿತರಿಗೆಲ್ಲಿದೆ ನ್ಯಾಯ ಈ ಮೇಲ್ಜಾತಿ ಮೇಲ್ವರ್ಗಗಳ ಆಡಳಿತದಲ್ಲಿ? ಈ ನಡುವೆ ಕೊಪ್ಪಳ ಜಿಲ್ಲಾ ನ್ಯಾಯಾಧೀಶರು ತಾವಾಗಿಯೇ ಮರಕುಮಬಿ ಗ್ರಾಮಕ್ಕೆ ಭೇಟಿ ನೀಡಿ ದಲಿತರ ಮತ್ತು ಇತರರ ಅಭಿಪ್ರಾಯಗಳನ್ನು ಸಂಗ್ರಹಿಸಿ ಹೋಗಿದ್ದಾರೆ. ದೌರ್ಜನ್ಯಗಳ ವಿರುದ್ಧ ಹೋರಾಟವನ್ನು ಮುಂದುವರೆಸಲು ಮರಕುಂಬಿ ದಲಿತರು ದೃಢ ನಿಧಾರ ಮಾಡಿದ್ದಾರೆ. ●

ಕೃಷಿ ಕೂಲಿಕಾರರ ಬೃಹತ್ ಬಹಿರಂಗ ಸಭೆಯಲ್ಲಿ......

ಪುಟ 9 ರಿಂದ

ಕೂಲಿಕಾರರ ಸಂಘದ ಜವಾಬ್ದಾರಿ ಹೆಚ್ಚುತ್ತದೆ. ಸರ್ಕಾರದ ಕಾರ್ಪೊರೇಟ್ ಕಂಪೆನಿಗಳ ಪರವಾದ ನೀತಿಗಳ ವಿರುದ್ಧ ಬೃಹತ್ ಹೋರಾಟಗಳನ್ನು ರೂಪಿಸಲು ಸಾಧ್ಯವಾಗಬೇಕು ಎಂದು ಅವರು ಹೇಳಿದರು.

ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಡಾ. ಹೇಮಲತಾ ಅಖಿಲ ಭಾರತ ಕಿಸಾನ್ ಸಭಾದ ಕಾರ್ಯದರ್ಶಿ ವಿಜುಕೃಷ್ಣನ್, ಎಸ್‌ಎಫ್‌ಐ ಹಾಗೂ ಬಿಕೆಎಂಯು ಮುಖಂಡರು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ಪ್ರಧಾನ ಕಾರ್ಯದರ್ಶಿ ವರದಿಗೆ ಅನುಮೋದನೆ :

ಕರ್ನಾಟಕದ 35 ಪ್ರತಿನಿಧಿಗಳು ಸೇರಿದಂತೆ ಸಮ್ಮೇಳನದಲ್ಲಿ 13 ರಾಜ್ಯಗಳ ಒಟ್ಟು 850 ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರಧಾನ ಕಾರ್ಯದರ್ಶಿಗಳ ವರದಿಯ ಮೇಲಿನ ಚರ್ಚೆಯಲ್ಲಿ 35 ಜನ ಪ್ರತಿನಿಧಿಗಳು ಭಾಗವಹಿಸಿ ತಮ್ಮ ಅನುಭವಗಳನ್ನು ಸೇರಿಸುವ ಮೂಲಕ ವರದಿಯನ್ನು ಶ್ರೀಮಂತಗೊಳಿಸಿದರು. ಕರ್ನಾಟಕದ ಪರವಾಗಿ ಎಂ. ಪುಟ್ಟಮಾದು ಚರ್ಚೆಯಲ್ಲಿ ಭಾಗವಹಿಸಿದ್ದರು. ಚರ್ಚೆಗೆ ಪದಾಧಿಕಾರಿಗಳ ಪರವಾಗಿ ಉತ್ತರಿಸಿದ ಪ್ರಧಾನ ಕಾರ್ಯದರ್ಶಿ ಪ್ರತಿನಿಧಿಗಳ ಟೀಕೆಗಳನ್ನು ಒಳಗೊಂಡಂತೆ ಪ್ರಮುಖ ಸಲಹೆ ಸೂಚನೆಗಳನ್ನು ಸ್ವಾಗತಿಸಿದರು. ನಮ್ಮ ಮುಂದೆ ಬಂದಿರುವ ಸವಾಲನ್ನು ಎದುರಿಸಲು ನಾವು ಹೆಚ್ಚೆಚ್ಚು ತ್ಯಾಗಕ್ಕೆ, ಸಮರಶೀಲ ಹೋರಾಟಗಳಿಗೆ ಮುಂದಾಗಬೇಕಾಗಿದೆ ಎಂದು ಹೇಳಿದರು. ಅನಂತರ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. ಗಾಜಾ ಪ್ರದೇಶದಲ್ಲಿ ಅಮೇರಿಕ ಬೆಂಬಲಿತ ಇಸ್ರೆಲ್ ದಾಳಿಯನ್ನು ಖಂಡಿಸುವುದು ಸೇರಿದಂತೆ ಕೃಷಿ ಕೂಲಿಕಾರರ ವಿವಿಧ ಬೇಡಿಕೆಗಳಿಗೆ ಸಂಭಂದಿಸಿದ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ನೂತನ ನಾಯಕತ್ವದ ಆಯ್ಕೆ :

ಕೊನೆಯದಾಗಿ ಸಮ್ಮೇಳನವು 131 ಸದಸ್ಯ ಸ್ಥಾನಗಳುಳ್ಳ ಜನರಲ್ ಕೌನ್ಸಿಲ್ ಅನ್ನು ಆಯ್ಕೆ ಮಾಡಿತು. ಕರ್ನಾಟಕದಿಂದ

1) ನಿತ್ಯಾನಂದಸ್ವಾಮಿ,
2) ಚಂದ್ರಪ್ಪ ಹೊಸ್ಕೇರಾ
3) ಎಂ. ಪುಟ್ಟಮಾದು
4) ಭೀಮಶೆಟ್ಟಿ ಯಂಪಳ್ಳಿ
5) ಹೆಚ್. ಗಂಗಾಧರಯ್ಯ ಮತ್ತು
6) ವೆಂಕಟೇಶ್ ಕೋಣಿ

ಜನರಲ್ ಕೌನ್ಸಿಲ್ ಸದಸ್ಯರಾಗಿ ಆಯ್ಕೆಯಾದರು.

ಆಯ್ಕೆಯಾದ ಜನರಲ್ ಕೌನ್ಸಿಲ್ ಸದಸ್ಯರು ಸಭೆಸೇರಿ 51 ಸದಸ್ಯರುಳ್ಳ ಕೇಂದ್ರ ಕಾರ್ಯಕಾರಿ ಸಮಿತಿ (CWC) ಯನ್ನು ಆಯ್ಕೆ ಮಾಡಿದರು. ಕೇಂದ್ರ ಕಾರ್ಯಕಾರಿ ಸಮಿತಿಯಲ್ಲಿ ನಿತ್ಯಾನಂದಸ್ವಾಮಿ, ಚಂದ್ರಪ್ಪ ಹೊಸ್ಕೇರಾ ಮತ್ತು ಎಂ. ಪುಟ್ಟಮಾದು ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ. ಜನರಲ್ ಕೌನ್ಸಿಲ್ 12 ಮಂದಿ ಪದಾಧಿಕಾರಿಗಳನ್ನು ಮತ್ತು ಪದಾಧಿಕಾರಿಗಳನ್ನು ಒಳಗೊಂಡ 15 ಸದಸ್ಯರ ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆಮಾಡಿತು. ತಮಿಳುನಾಡಿನ ಎಸ್. ತಿರುನಾವುಕ್ಕರಸು ಅಖಿಲ ಭಾರತ ಅಧ್ಯಕ್ಷರಾಗಿ ಆಯ್ಕೆಯಾದರು. ಪ್ರಧಾನ ಕಾರ್ಯದರ್ಶಿಯಾಗಿ ಎ. ವಿಜಯರಾಘವನ್ ಪುನರಾಯ್ಕೆಯಾದರು. ಈ ಎಲ್ಲ ಆಯ್ಕೆಗಳನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸುವುದರೊಂದಿಗೆ ಸಮ್ಮೇಳನದ ಕಲಾಪಗಳು ಯಶಸ್ವಿಯಾಗಿ ಮುಕ್ತಾಯಗೊಂಡವು. ಸಮ್ಮೇಳನದ ಬಹಿರಂಗ ಸಭೆಯಿಂದ ಹಿಡಿದು ಕೊನೆಯ ವರೆಗೂ ತೆಲಂಗಾಣ ಪ್ರಜಾನಾಟ್ಯ ಮಂಡಲಿ ಪ್ರದರ್ಶಿಸಿದ ಆದಿವಾಸಿ ನೃತ್ಯಗಳು, ಮುಖ್ಯವಾಗಿ 'ವೀರ ತೆಲಂಗಾಣ' ಎಂಬ ನಾಟಕ ಪ್ರತಿನಿಧಿಗಳ ಹೃನ್ಮನಗಳಲ್ಲಿ ಕ್ರಾಂತಿಕಾರಿ ಸ್ಫೂರ್ತಿಯನ್ನು ತುಂಬಿ ತುಳುಕಿಸಿತು. ●

ಅತ್ಯಾಚಾರವೆಂಬ ಘೋರ......

ಪುಟ 16 ರಿಂದ

ಸಾಮಾಜಿಕ ಸ್ಥಿತ್ಯಂತರದ ಘಟ್ಟವನ್ನೂ ಗಮನಿಸಬೇಕು. ಕೃಷಿಯ ಉತ್ಪಾದನಾ ಸಲಕರಣೆಗಳ ಆವಿಷ್ಕಾರ, ಖಾಸಗೀ ಆಸ್ತಿಯ ಪರಿಕಲ್ಪನೆ, ಹೊರಗಿನ ದುಡಿಮೆಯ ವ್ಯಾಪ್ತಿಯಿಂದ ನಾಲ್ಕುಗೋಡೆಯ ಪರಿಧಿಯ ಒಳಗೆ ಮಹಿಳೆ ತಳ್ಳಲ್ಪಡುತ್ತಿದ್ದ ಘಟ್ಟವದು. ಬದುಕಿನ ಆಹಾರದ ಅಗತ್ಯಕ್ಕಾಗಿ ಕೃಷಿಯನ್ನು ಕಂಡು ಹಿಡಿದ ಮಹಿಳೆ. ಕೃಷಿಯ ಜೊತೆ ಪಶು ಸಂಗೋಪನೆ ಪ್ರಾರಂಭವಾಗಿ ಅದು ಆರ್ಥಿಕ ಚಟುವಟಿಕೆಯಾಗಿ ರೂಪುಗೊಳ್ಳುತ್ತಿದ್ದಂತೆಯೇ ಕೃಷಿಯು ಕೂಡ ಮಹಿಳೆಯ ಕೈಯಿಂದ ಪುರುಷನ ಕೈಗೆ ವರ್ಗಾವಣೆಗೊಂಡ ಕಾಲಘಟ್ಟವಾಗಿ ಅದನ್ನು ನೋಡುವ ಮೂಲಕವೇ ಮಹಿಳಾ ಅಧೀನತೆಯ ಕಾಲಘಟ್ಟವನ್ನಾಗಿ ಗುರುತಿಸಬೇಕು.

ಈಗ ಇಂದಿನ ಘಟನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಆ ಕಾಲ ಘಟ್ಟದ ನಂತರದ ನಾಗರೀಕತೆಯ ಬೆಳವಣಿಗೆ, ಕೈಗಾರಿಕೆಗಳ ಬೆಳವಣಿಗೆ ಮುಂತಾಗಿ 20 ನೇ ಶತಮಾನದ ಕಾಲವನ್ನು ಅವಲೋಕಿಸಿದರೆ ಇಲ್ಲಿ ಕೂಡ ನಾಜೂಕಾಗಿ ಮಹಿಳೆಯರನ್ನು ಪಕ್ಕಕ್ಕೆ ಸರಿಸುವ ಪ್ರಯತ್ನ ಢಾಳಾಗಿ ಕಣ್ಣಿಗೆ ಗೋಚರವಾಗುತ್ತದೆ. ಬಹುಷಃ 70ರ ದಶಕದಿಂದೀಚಿನ ವಿದ್ಯಮಾನಗಳನ್ನು ಅವಲೋಕಿಸಿದರೂ ಹಲವು ಆಕ್ಷೇಪಾರ್ಹ, ಪ್ರಶ್ನಾರ್ಹ ಅಂಶಗಳು ಸಿಗುತ್ತವೆ. ಪ್ರಗತಿಪರ ಆಲೋಚನೆಯತ್ತ ಗಮನ ಹರಿಸಿ ಮಹಿಳಾ ಚಳುವಳಿ ರೂಪುಗೊಂಡ ಒಂದು ಕಾಲಘಟ್ಟವಾಗಿ 70ರ ದಶಕವನ್ನು ಗುರುತಿಸಬಹುದು. ಇದಕ್ಕೆ ಪೂರಕವಾಗಿ ಸಮಾಜವಾದಿ ವ್ಯವಸ್ಥೆಯ ಭಾಗವಾಗಿ ಮಹಿಳಾ ಪ್ರಶ್ನೆಗಳನ್ನು ಮುನ್ನೆಲೆಗೆ ತಂದ ಕ್ಲಾರಾ ಝೆಟ್ಕಿನ್, ರೋಸಾ ಲಕ್ಸಂಬರ್ಗ್ ಮತ್ತು ಇತರ ಹಲವಾರು ಕಮ್ಯುನಿಸ್ಟ್ ನಾಯಕರುಗಳ ಸ್ಪಷ್ಟ ಮಹಿಳಾ ವಿಮೋಚನಾ ದೃಷ್ಟಿಕೋನದ ಹಲವು ಪ್ರಯತ್ನಗಳು ಕೊಟ್ಟ ಕಾಣಿಕೆಯ ಜೊತೆಯೇ ಪಶ್ಚಿಮದ ಸ್ತ್ರೀ ವಾದಿ ಆಂದೋಲನಗಳೂ ಬೆಳೆದು ಬಂದವು. ಮಹಿಳೆಯರ ಪರಮ ಶತ್ರು ಪುರುಷ ಎಂಬ ಸೀಮಿತ ದೃಷ್ಟಿಕೋನದ ಸಂಕುಚಿತ 'ಸ್ತ್ರೀವಾದ' ಕ್ಕೆ ಬದಲಾಗಿ ಒಟ್ಟು ಸಮಾಜದ ಭಾಗವಾಗಿಯೇ ಮಹಿಳೆಯರು ಮತ್ತು ಅವರ ಪ್ರಶ್ನೆಗಳು ಹಾಗೂ ಈ ಸಮಸ್ಯೆಗಳನ್ನು ಕೇವಲ ಮಹಿಳೆಯರು ಮಾತ್ರವೇ ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲವೆಂಬ ಸತ್ಯವನ್ನು ಮುಂದಿಟ್ಟು ಮಹಿಳಾ ಚಳುವಳಿ ಬೆಳೆದು ಬಂದ ಕಾಲಘಟ್ಟವದು. 1975ರ ವರ್ಷವನ್ನು ಮಹಿಳಾ ವರ್ಷವಾಗಿ ಘೋಷಿಸಿ ವಿಶ್ವದಾದ್ಯಂತ ಮಹಿಳಾ ವಿಷಯಗಳನ್ನು ಚರ್ಚೆಗೆ ತೆರೆದಿಟ್ಟ ಸಂದರ್ಭ. ಆ ನಂತರದ ವರ್ಷಗಳನ್ನೇ ಉದಾಹರಣೆಯಾಗಿ ತೆಗೆದುಕೊಂಡರೂ ಮಹಿಳಾ ಅಸ್ಮಿತೆ, ಅಧಿಕಾರ, ಅವಕಾಶಗಳ ಸ್ಪಷ್ಟ ಬೇಡಿಕೆಯೊಂದಿಗೆ ಪರಾಧೀನತೆಯ ಬದಲಿಗೆ ಸ್ವಾಧೀನತೆಗಾಗಿ, ಅನುವರ್ತಿತನದಿಂದ ಸಹವರ್ತಿತನಕ್ಕೆ ಗಟ್ಟಿ ಧ್ವನಿಯಾಗಿ ಮಹಿಳಾ ಮತ್ತು ಇತರ ಪ್ರಜಾಪ್ರಭುತ್ವ ಚಳುವಳಿಗಳು ಮಾತನಾಡತೊಡಗಿದ ಘಟ್ಟವಾಗಿ ಅದನ್ನು ಗುರುತಿಸಬಹುದು. ಭಾರತದ ಸಂದರ್ಭದಲ್ಲಿ ಸ್ವಾತಂತ್ರ ಚಳುವಳಿಯ ಭಾಗವಾಗಿಯೇ ಮಹಿಳಾ ಪ್ರಶ್ನೆಗಳೂ ಮುನ್ನೆಲೆಗೆ ಬಂದ ಮತ್ತು ಅಸಂಖ್ಯಾತ ಮಹಿಳೆಯರು ಸಕ್ರಿಯವಾಗಿ ಚಳುವಳಿಯಲ್ಲಿ ಪಾಲ್ಗೊಂಡ ನಮ್ಮ ಇತಿಹಾಸವನ್ನೂ ಗಮನದಲ್ಲಿಟ್ಟುಕೊಂಡೇ 75 ರ ನಂತರದ ಭಾಗವನ್ನು ನಾನು ಇಲ್ಲಿ ಈ ಚರ್ಚೆಗೆ ಆಯ್ಕೆ ಮಾಡಿಕೊಂಡಿದ್ದೇನೆ. ವಿಶ್ವಸಂಸ್ಥೆಯ ಘೋಷಣೆಯ ಭಾಗವಾಗಿ ವಿವಿಧ ದೇಶಗಳಲ್ಲಿ ನಡೆದ ಹಲವಾರು ಮಹಿಳಾ ಪರ ಹೋರಾಟಗಳು, ಚಿಂತನೆಗಳು ಕಟ್ಟಿಕೊಟ್ಟ ಆಲೋಚನಾ ಕ್ರಮ ಮಹಿಳೆಯರಿಗೆ ಹೊಸ ಹುರುಪು, ವಿಶ್ವಾಸ, ಧೈರ್ಯ ಆತ್ಮಬಲವನ್ನು ಒದಗಿಸಿಕೊಟ್ಟಿತೆಂದರೆ ತಪ್ಪಲ್ಲ. ಮಹಿಳೆಯರ ಸಾರ್ವಜನಿಕ ಸ್ಥರಗಳಲ್ಲಿ ಪಾಲ್ಗೊಳ್ಳುವಿಕೆ, ದೊರೆತ ಅಲ್ಪ ಸ್ವಲ್ಪ ರಾಜಕೀಯ ಅವಕಾಶಗಳು ಅವರಿಗೆ ಒಂದಿಷ್ಟು ಬೇರೆಯೇ ಲೋಕವನ್ನು ತೆರೆಯಿತು. ಅದು ಗಟ್ಟಿಗೊಳ್ಳುವ ಸಂದರ್ಭಗಳು ಸೃಷ್ಟಿಯಾದಂತೆಲ್ಲ ಪುರುಷ ಪ್ರಾಧಾನ್ಯತೆಯ ಪಾಳೆಯಗಾರೀತನವೇ ನಮ್ಮ 'ಸಂಸ್ಕೃತಿ' ಎಂದು ಅರ್ಥೈಸಿ ಜನರ ಮೇಲೆ ಹೇರುತ್ತಿದ್ದ ವಿಭಾಗ ಕಂಗಾಲಾಯಿತು. ಹೀಗೆ ಮಹಿಳಾ ಪರ ಧ್ವನಿ ಗಟ್ಟಿಗೊಂಡರೆ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಶತಸಿದ್ಧ ಎಂದು ಕೊಂಡ ಈ ಪುರೋಹಿತಶಾಹಿ–ಮನುವಾದೀ ಮನಸ್ಸುಗಳು ಇಲ್ಲದ ಕಟ್ಟುಪಾಡುಗಳನ್ನು ಹೇರತೊಡಗಿತು. ಹಾಗೆ ಹೇರಿಕೆಯ ಭಾಗವಾಗಿಯೇ ಇತ್ತೀಚಿನ ವರ್ಷಗಳಲ್ಲಿ ಮಹಿಳಾ ಪ್ರಶ್ನೆಗಳ ಬಗ್ಗೆ ಚರ್ಚೆ ನಡೆಯುವಾಗೆಲ್ಲ ಕುಟುಂಬದ ಮೌಲ್ಯಗಳ ಕುರಿತು ಹೆಚ್ಚು ಹೆಚ್ಚು ಮಾತುಗಳು, ಮಹಿಳೆಯರಿಗೆ 'ಕೊಟ್ಟ' ಸ್ವಾತಂತ್ರ ಜಾಸ್ತಿಯಾಯಿತು. ಸ್ವಾತಂತ್ರ ಸರಿ ಆದರೆ ಅದು ಸ್ವೇಚ್ಛಾಚಾರವಾಗಬಾರದು, ಎಂಬಿತ್ಯಾದಿ .. ಇದೆಲ್ಲಕ್ಕೂ ಇಂಬು ಕೊಟ್ಟಂತೆ ಉದಾರೀಕರಣದ ಹೆಸರಿನಲ್ಲಿ ತೆರೆದ ಬಾಗಿಲುಗಳು ಮುಕ್ತಗೊಳಿಸಿದ ಸರಕು ಸಂಸ್ಕೃತಿಗೂ ಬಲಿಯಾದದ್ದು ಮತ್ತೆ ಮಹಿಳೆಯೇ. ಮಹಿಳೆಯ ದೇಹವೆನ್ನುವುದು ವಸ್ತುಗಳ ವಿಕ್ರಯಕ್ಕಾಗಿ ಪ್ರದರ್ಶನಕ್ಕಿಟ್ಟ ಸರಕಾಯಿತು. ಜಾಹಿರಾತುಗಳು, ವಿವಿಧ ದೃಶ್ಯ ಮುದ್ರಣ ಮಾಧ್ಯಮಗಳಲ್ಲಿ ಮಹಿಳೆ ಇನ್ನಷ್ಟು ಭೋಗವಸ್ತುವಾಗಿ ಬಿಂಬಿತಗೊಳ್ಳುತ್ತಿರುವುದು ಮತ್ತು ಇದರ ಹಿಂದೆ ಉದ್ಯಮಪತಿಗಳಷ್ಟೇ ಹಣ ಗಳಿಕೆಯ ದುರಾಸೆಗೆ ಮಹಿಳೆಯರೂ ಬಲಿಯಾಗುತ್ತಿರುವುದು ವಾಸ್ತವವೇ? ಮತ್ತು ಲೈಂಗಿಕ ಆಸಕ್ತಿಗಳನ್ನು ಕೆರಳಿಸುವ ರೀತಿಯಲ್ಲಿ ಸುಲಭವಾಗಿ ಸಿಗುವ ಸಾಧನಗಳು ಮತ್ತು ಲೈಂಗಿಕತೆ ಎನ್ನುವುದು ಬಹಳ ಗುಟ್ಟಿನ ವಿಷಯವೆಂಬ ಮಡಿವಂತಿಕೆಯ ಭಾವನೆಯೂ ಅಷ್ಟೇ ಗಟ್ಟಿಯಾಗಿಯೇ ಉಳಿದುಕೊಂಡಿರುವ ವೈರುಧ್ಯಗಳ ಮಧ್ಯೆ ಮಹಿಳೆಯರು, ಹೆಣ್ಣುಮಕ್ಕಳು ಬಲಿಯಾಗುತ್ತಿದ್ದಾರೆ.

ಈ ನೆಲೆಯಲ್ಲಿಯೇ ಇಂದು ವರದಿಯಾಗುತ್ತಿರುವ ಅತ್ಯಾಚಾರದ ಪ್ರಕರಣಗಳನ್ನೂ ಗಮನಿಸಬೇಕು. ಎಳೆಯ ವಯಸ್ಸಿನ ಬಾಲಕಿಯರ ಮೇಲೆ ಹದಿ ಹರೆಯದ ಬಾಲಕರು ಎಸಗುತ್ತಿರುವ ಅತ್ಯಾಚಾರಗಳು, ವಯಸ್ಕರು ವಯಸ್ಸಿನ ಬೇಧವಿಲ್ಲದೇ ನಡೆಸುತ್ತಿರುವ ಅತ್ಯಾಚಾರಗಳು ಇವೆರಡನ್ನೂ ಅವುಗಳ ಹಿನ್ನೆಲೆಯನ್ನು ಬೇರೆ ಬೇರೆಯಾಗಿಯೇ ಅರ್ಥಮಾಡಿಕೊಳ್ಳಬೇಕು. ಹದಿಹರೆಯದ ಬಾಲಕರ ಈ ಅಪರಾಧದ ಹಿಂದೆ ಜಾಗತೀಕರಣದ ಹೊಸ ಸಾಧನಗಳ ಪ್ರಭಾವವಿದ್ದರೆ ಇನ್ನು ವ್ಯಾಪಕವಾಗಿ ನಡೆಯುತ್ತಿರುವ ವಿವಿಧ ವಯೋಮಾನದವರು ನಡೆಸುತ್ತಿರುವ ಅಪರಾಧಗಳಿಗೆ ಪುರುಷಾಹಂಕಾರದ, ಕುಲದ ಅಧಿಕಾರದ ಸ್ಥಾಪನೆಯ ಅಹಂಕಾರದ ನಡೆ,(ಪಶ್ಚಿಮ ಬಂಗಾಲದಲ್ಲಿ ಬುಡಕಟ್ಟು ಜನಾಂಗದ ಯುವತಿ ಪ್ರೀತಿಸಿ ವಿವಾಹವಾದಳೆಂದು ಕಾಫ್ ಪಂಚಾಯತ್ ಕೊಟ್ಟ ಶಿಕ್ಷೆ ; ಸಾಮೂಹಿಕ ಅತ್ಯಾಚಾರ ಮಾಡಲು ಊರಿನ ವ್ಯಕ್ತಿಗಳಿಗೆ ಆದೇಶ– ಇಂತಹ ಮತ್ತು ಇತರ ಬೇಕಷ್ಟು ಉದಾಹರಣೆಗಳಿವೆ.) ತುಂಬ ಸುಲಭವಾಗಿ ಸಿಗುತ್ತಿರುವ ಆಲ್ಕೊಹಾಲಿನ ಪ್ರಭಾವ, ವಿಕೃತ ಕಾಮಿಗಳು.. .. ಹೀಗೆ ವಿಂಗಡಿಸುತ್ತ ಹೋಗಬಹುದು. ವರ್ಗ ಯಾವುದಾದರೂ ಪರಿಣಾಮ ಮಾತ್ರ ಭೀಕರ.

ಇಂಥಹ ಅಪರಾಧಗಳ ನಿಯಂತ್ರಣಕ್ಕೆ ಆಳುವ ಸರ್ಕಾರಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಕೂಡ ಸ್ಪಷ್ಟತೆ ಬೇಕು. ಇದು ಕೇವಲ ಕಾನೂನು ಸುವ್ಯವಸ್ಥೆಯ ವಿಚಾರ ಮಾತ್ರವಲ್ಲ. ಕಾನೂನು ಪೋಲೀಸ್ ಆಡಳಿತ ಇವೆಲ್ಲವುಗಳ ಜವಾಬ್ದಾರಿಯ ಜೊತೆಯೇ ನಾಗರಿಕರ ಜವಾಬ್ದಾರಿ ಕೂಡ ಚರ್ಚೆಯಾಗಬೇಕು. ಯಾ–ಕೆಂದರೆ ಅತ್ಯಾಚಾರದಂತಹ ಘೋರ ಕೃತ್ಯಗಳಿಗೆ ಬಲಿಯಾಗುವ ಹೆಣ್ಣು ಮಗಳನ್ನು ಒಬ್ಬ ಅಪರಾಧಿ ಎಂದು ನೋಡುವ ಸಮಾಜದ ದೃಷ್ಟಿ ಬದಲಾಗಬೇಕು. ಹಾಗೆಯೇ ಅವಳನ್ನು ಬಲಿಪಶು ಎಂದು ಕೂಡ ನೋಡಬಾರದು, ಅಂತಹ ಒಂದು ಸಂವೇದನೆಯನ್ನು ಸಮಾಜ ಹೊಂದಬೇಕು. ಹಾಗೆ ಸಮಾಜದ ಆಲೋಚನಾ ಕ್ರಮ ಬದಲಾಗಲು ಅಗತ್ಯವಾದ ಪರಿಸರಕ್ಕಾಗಿ ಸರ್ಕಾರ ಮತ್ತು ಸಮಾಜ ಒಟ್ಟಿಗೇ ಕೆಲಸಮಾಡಬೇಕು. ಸರ್ಕಾರವಾಗಿ ಸಂವಿಧಾನದ 51(ಏ) ವಿಧಿ ಹೇಳುವ ವೈಜ್ಞಾನಿಕ ವೈಚಾರಿಕ ಚಿಂತನೆಗೆ ಒತ್ತು ಕೊಡುವ ಮತ್ತು ಅದನ್ನು ಹೆಚ್ಚು ಪ್ರಚಾರಕ್ಕೆ ತರುವ ಕೆಲಸವನ್ನೂ ಮತ್ತು ಲಿಂಗ ಸಂವೇದನೆ ಮೂಡಿಸುವ ನೆಲೆಯಲ್ಲಿ ಶಿಕ್ಷಣ ಕ್ರಮದಲ್ಲಿ ಬದಲಾವಣೆ, ಪರಸ್ಪರ ಗೌರವ, ಸಮಾನತೆ ಮೂಡಿಸುವ ಪರಿಸರ ನಿರ್ಮಾಣಕ್ಕೆ ಒತ್ತು ನೀಡಬೇಕು. ಘಟನೆ ನಡೆಯಲಾರದಂತಹ ಪರಿಸರ ನಿರ್ಮಾಣದ ಜೊತೆ ಘಟನೆ ನಡೆದಾಗ ತಕ್ಷಣದ ಕಠಿಣ ಕ್ರಮಕ್ಕೆ ಮುಂದಾಗದೇ ಅನುಸರಿಸುವ ವಿಳಂಬ ನೀತಿ ಕೂಡ ಘಟನೆಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಉದಾಹರಣೆಗೆ ಸಾಮಾಜಿಕ ಜಾಲತಾಣದ ಪ್ರಸಕ್ತ ವಿಷಯಕ್ಕೆ ಸಂಬಂಧಿಸಿದಂತೆ "ಜುಟ್ಟು ಹಿಡಿದು ಬೀದಿಯಲ್ಲಿ ಅತ್ಯಾಚಾರಿಗಳು ಅತ್ಯಾಚಾರ ಮಾಡಬೇಕು" ಎಂದು ಕರೆ ಕೊಟ್ಟ ವ್ಯಕ್ತಿಯ ಮೇಲೆ ದೂರು ದಾಖಲಿಸಿದ ಮೇಲೆಯೂ ಸಾರ್ವಜನಿಕ ಒತ್ತಡ ನಿರ್ಮಾಣದ ನಂತರವಷ್ಟೇ ಬಂಧನ ಸಾಧ್ಯವಾಗಿದ್ದು. ಅಂತಹದೇ ಇನ್ನೊಂದು ಪ್ರಕರಣದ ಅಪರಾಧಿಯನ್ನು ಇನ್ನೂ ಬಂಧಿಸಿಲ್ಲದಿರುವುದರಿಂದ ಮತ್ತು ಇಂತಹ ಅಪರಾಧಕ್ಕೆ ಉಗ್ರ ಶಿಕ್ಷೆ ಎಂಬ ಸ್ಪಷ್ಟ ಸಂದೇಶ ರವಾನೆಯಾಗದಿರುವುದರಿಂದ ಜಾಲತಾಣ ದುರ್ವರ್ತನೆ ಮುಂದುವರೆದೇ ಇದೆ.

ಇನ್ನು ಸಮಾಜವಾಗಿ, ನಡೆಯುತ್ತಿರುವ ಘಟನೆಗಳಿಗೆ ಕೇವಲ ಯಾವುದೋ ಒಂದು ವರ್ಗ, ಸಮೂಹವನ್ನು ಕಾರಣವೆಂದು ತೋರಿಸದೇ, ಬದಲಿಗೆ ಸಮಾಜದ ಆಲೋಚನಾ ಕ್ರಮದಲ್ಲಿ ಬದಲಾವಣೆಯಾಗಬೇಕು. ಹೆಣ್ಣು ಭೋಗ ವಸ್ತುವಲ್ಲ. ಅವಳೂ ಒಬ್ಬ ವ್ಯಕ್ತಿ. ಪುರುಷನಷ್ಟೇ ಗೌರವ ಅವಕಾಶ ಅಧಿಕಾರಕ್ಕೆ ಅರ್ಹಳಾದವಳು ಎಂಬ ಭಾವವನ್ನು ಪ್ರತಿ ಕುಟುಂಬದಲ್ಲಿಯೂ ತರುವಂತಹ ಪರಿಸ್ಥಿತಿಗೆ ಸಮಾಜ ಪಕ್ಕಾಗಲೇ ಬೇಕು. ಪುರುಷ ಶ್ರೇಷ್ಟತೆಯ ಭಾವದಿಂದ ಸಮಾನತೆಯ ಭಾವಕ್ಕೆ ತೆರೆದುಕೊಳ್ಳುವ ಪರಿಸರ ಕುಟುಂಬದಲ್ಲಿ ನಿರ್ಮಾಣವಾಗಬೇಕು. ಹುಟ್ಟಿದ ಪ್ರತಿ ಗಂಡಿಗೂ ಇರುವ ಅಧಿಕಾರ ಹೆಣ್ಣಿಗೂ, ಹುಟ್ಟಿದ ಕೂಡಲೇ ಅಂಟುವ ಹೆಣ್ಣಿನ ಕರ್ತವ್ಯಗಳು ಗಂಡಿಗೂ ಸಮನಾಗಿ ವಿಭಜಿತವಾದರೆ ಮೊದಲ ಹಂತದ ಸಮಸ್ಯೆ ಪರಿಹಾರವಾಗುತ್ತದೆ. ಅದಿಲ್ಲದಿದ್ದರೆ ಕೇವಲ ಬಾಹ್ಯೋಪಚಾರದ ಯಾವ ಮಾತುಗಳೂ ಖಂಡಿತ ಬದಲಾವಣೆ ತರಲಾರವು. ಕಾನೂನುಗಳು ಘಟನೆಯ ನಂತರದ ಪರಿಹಾರ ಮಾರ್ಗವಾದರೆ ಬದುಕಿನ ಶಿಕ್ಷಣ ಘಟನೆಗಳನ್ನು ತಡೆಯಲು ಕಾರಣವಾಗುತ್ತದೆ. ●

JANASHAKTHI KANNADA VARA PATRIKE AUG 17, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಅತ್ಯಾಚಾರವೆಂಬ ಘೋರ......

ಕೆ.ಎಸ್. ವಿಮಲ

ಮಹಿಳೆಯರ ಮೇಲಿನ ಅತ್ಯಾಚಾರ, ಹಿಂಸೆ, ಕಿರುಕುಳ ತಡೆಯಿಲ್ಲದೇ ನಡೆಯುತ್ತಿದೆ. ಪುಟ್ಟ ಪುಟ್ಟ ಮಕ್ಕಳು ಅತ್ಯಾಚಾರದಂತಹ ಘೋರ ಕೃತ್ಯಕ್ಕೆ ಬಲಿಯಾಗುತ್ತಿದ್ದಾರೆ. ಮಾನಸಿಕ ಅಸ್ವಸ್ಥರು, ವಿಕಲ ಚೇತನರ ಮೇಲೆ ಅತ್ಯಾಚಾರಗಳು ನಡೆಯುತ್ತಿರುವುದು ಪ್ರತಿನಿತ್ಯ ವರದಿಯಾಗುತ್ತಿದೆ. ಹದಿಹರೆಯದ ಬಾಲಕರು ಕೂಡ ಅಪರಾಧಿಗಳ ಪಟ್ಟಿಗೆ ಸೇರುತ್ತಿರುವುದು ಅತ್ಯಂತ ಕಳವಳಕಾರಿ ಬೆಳವಣಿಗೆಯಾಗಿದೆ. ಶಾಲೆಗಳಲ್ಲಿ ಶಿಕ್ಷಕರು, ಮನೆಯಲ್ಲಿ ತಂದೆ, ಸೋದರ ಸಂಬಂಧಿಗಳು ಹೀಗೆ ಪರಿಚಿತರಿಂದಲೇ ನಡೆಯುತ್ತಿರುವ ಅತ್ಯಾಚಾರಗಳು, ವಯೋವೃದ್ಧರು ಮಕ್ಕಳ ಮೇಲೆ ನಡೆಸುತ್ತಿರುವ ಅತ್ಯಾಚಾರಗಳು. ಒಂದು ವರದಿಯ ಪ್ರಕಾರ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಗಳಲ್ಲಿ ಸರಿ ಸುಮಾರು 96% ಪರಿಚಿತರೇ ನಡೆಸುವ ದೌರ್ಜನ್ಯಗಳು. ಅದರಲ್ಲಿ ಕುಟುಂಬದ ಸದಸ್ಯರು, ನೆರೆಹೊರೆಯವರು, ಹತ್ತಿರದ ಸಂಬಂಧಿಕರು, ಸ್ನೇಹಿತರು ಬರುತ್ತಾರೆ. 13% ಮಕ್ಕಳು ಈ ತೆರನ ದೌರ್ಜನ್ಯದ ಬಲಿಪಶುಗಳು.

'ಉಡುಪು, ಚಲನ ವಲನ...' ಇತ್ಯಾದಿ ವಾದ

ಈ ರೀತಿಯ ಘಟನೆಗಳು ನಡೆದಾಗೆಲ್ಲ ಅದರ ಮೂಲ ಕಾರಣಗಳಿಗೆ ಗಮನ ಕೊಡದೇ ಬಹಳ ಸುಲಭವಾಗಿ ಅತ್ಯಾಚಾರ, ದೌರ್ಜನ್ಯಗಳಿಗೆ ಒಳಗಾದವರನ್ನೇ ದೂಷಿಸಲಾಗುತ್ತದೆ. ಅವಳ ಉಡುಪು, ಚಲನ ವಲನಗಳನ್ನೇ ಗುರಿಯಾಗಿಸಿ ಅತ್ಯಾಚಾರಿಯನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸುವುದಕ್ಕಿಂತ ಮೊದಲೇ ಸಮಾಜ ಅವಳನ್ನು ಕಟಕಟೆಯಲ್ಲಿ ನಿಲ್ಲಿಸಿ ಅವಳನ್ನೇ ಅಪರಾಧಿ ಎಂದು ತೀರ್ಪು ಕೊಟ್ಟುಬಿಡುತ್ತದೆ. ಇಲ್ಲಿ ಪುರುಷ ಪ್ರಧಾನ ಪಾಳೇಯಗಾರಿ ಆಲೋಚನಾ ಕ್ರಮ ತನ್ನೆಲ್ಲ ಶಕ್ತಿಯನ್ನೂ ಪ್ರಯೋಗಿಸಿ ಈ ಸಮಾಜದ ಆಲೋಚನೆ ಒಂದು ಆರೋಗ್ಯಕರವಾದ ರೀತಿಯಲ್ಲಿ ಮುಂದುವರೆಯದಂತೆ ತಡೆಯಲು ಉಪಕ್ರಮಿಸುತ್ತದೆ. ಇದಕ್ಕೆ ಉದಾಹರಣೆಯಾಗಿ ಡಿಸೆಂಬರ್ 2012 ರ ದೆಹಲಿಯ ಸಾಮೂಹಿಕ ಬರ್ಭರ ಅತ್ಯಾಚಾರ ಪ್ರಕರಣದ ಸಂದರ್ಭದಲ್ಲಿ ಆರ್‌ಎಸ್‌ಎಸ್ ಪ್ರಮುಖ ಮೋಹನ್ ಭಾಗವತ್ ಹೇಳಿದ "ಅತ್ಯಾಚಾರಗಳು 'ಇಂಡಿಯಾ'ದಲ್ಲಿ ಸಂಭವಿಸುತ್ತವೆ, 'ಭಾರತ'ದಲ್ಲಲ್ಲ", 'ವಿವಾಹ ಎನ್ನುವುದು ಗಂಡ ಮತ್ತು ಹೆಂಡತಿಯ ಮಧ್ಯೆಯ ಒಪ್ಪಂದ. ಹೆಂಡತಿ ಗಂಡನ ಎಲ್ಲ ಅವಶ್ಯಕತೆಗಳನ್ನು ಹೆಂಡತಿಯಾಗಿ ಪೂರೈಸುವ ವರೆಗೆ ಅವಳನ್ನು ನೋಡಿಕೊಳ್ಳುವ ಜವಾಬ್ದಾರಿ ಗಂಡನದು. ಅವಳು ಆ ಒಪ್ಪಂದವನ್ನು ಮುರಿದಲ್ಲಿ ಅವನು ಅವಳನು ತ್ಯಜಿಸಬಹುದು." ಎನ್ನುವ ಹೇಳಿಕೆಯ ಮೂಲಕ 'ಗೃಹಿಣಿ ಗೃಹಮುಚ್ಯತೆ'–'ಹೆಣ್ಣಿಗೆ ಗೃಹಿಣಿ ಸ್ಥಾನವೇ ಶೋಭೆ' ಅಥವಾ 'ಹೆಣ್ಣು ಹೊಸಿಲಿನ ಒಳಗೇ' ಎಂಬ ತಮ್ಮ ಸಂಕುಚಿತ ದೃಷ್ಟಿಕೋನವನ್ನು ಮತ್ತೊಮ್ಮೆ ಒತ್ತಿ ಹೇಳಿದ್ದಾರೆ. ಇದನ್ನೇ ಧರ್ಮ, 'ಸಂಸ್ಕೃತಿ' ಪರಂಪರೆ, ಸಂಪ್ರದಾಯ ಎಂದೆಲ್ಲ ವೈಭವೀಕರಿಸಿ ಹೇಳಲಾಗುತ್ತದೆ. ಮತ್ತು ಆ ಸಂದರ್ಭದಲ್ಲಿಯೇ ಇತರ ಹಲವಾರು 'ಧರ್ಮ ಪ್ರತಿಪಾದಕರು' ಎಲ್ಲರೂ ಹೇಳಿದ್ದು ಇಂತಹುದೇ ಅಭಿಪ್ರಾಯಗಳನ್ನು. ನಮ್ಮ ರಾಜ್ಯದಲ್ಲಿ ಆಗ ವಿಧಾನ ಪರಿಷತ್ತಿನ ಉಪಸಭಾಧ್ಯಕ್ಷರಾಗಿದ್ದ ಭಾರತೀಯ ಜನತಾ ಪಕ್ಷದ ಶ್ರೀಮತಿ ವಿಮಲಾ ಗೌಡ ರವರೂ 'ಹೆಣ್ಣು ಮಕ್ಕಳು ಹಾಕಿಕೊಳ್ಳುವ ಉಡುಪು ಪ್ರಚೋದನಕಾರಿಯಾಗಿರುತ್ತದಾದ್ದರಿಂದಲೇ ಅತ್ಯಾಚಾರದಂತಹ ಪ್ರಕರಣಗಳು ಹೆಚ್ಚುತ್ತಿವೆ.' ಎಂದು ಹೇಳಿಕೆ ಕೊಟ್ಟದ್ದನ್ನೂ ಇಲ್ಲಿ ಸ್ಮರಿಸಬಹುದು. ಸದ್ಯ ಕರ್ನಾಟಕದಲ್ಲಿ ಬಹು ಚರ್ಚೆಯಲ್ಲಿರುವ ಸಾಮಾಜಿಕ ಜಾಲ ತಾಣದಲ್ಲಿ ನಡೆಯುತ್ತಿರುವ ವೈಜ್ಞಾನಿಕ ಮತ್ತು ವೈಚಾರಿಕತೆಯ ಮೇಲಿನ ಭೀಕರ ಧಾಳಿಯನ್ನು ನಾವು ಪ್ರಗತಿಪರ ವಿಚಾರಧಾರೆಯ ಮೇಲೆ ನಡೆಯುತ್ತಿರುವ ಅತ್ಯಾಚಾರವೆಂದೇ ಕರೆಯಬಹುದು. ವಿಜ್ಞಾನ ಕಾರ್ಯಕರ್ತೆ ಪ್ರಭಾ ಹಾಗೂ ಪ್ರಗತಿಪರ ಲೇಖಕಿ ಮಲ್ಲಿಕಾ ಘಂಟಿಯವರ ವಿರುದ್ಧ ಬಳಸಿದ ಅತ್ಯಂತ ಕೀಳು ಶಬ್ದಗಳು ಅತ್ಯಾಚಾರಕ್ಕಿಂತ ಕಡಿಮೆಯದೇನಲ್ಲ. ಇದು ದೈಹಿಕ ಅತ್ಯಾಚಾರವಲ್ಲದಿದ್ದರೂ ಶಾಬ್ದಿಕ ಅತ್ಯಾಚಾರ. ಮೋದಿಯನ್ನು ಅಧಿಕಾರಕ್ಕೆ ತರಲು ಬಹಳ ಸಮರ್ಥವಾಗಿ ಬಳಸಲ್ಪಟ್ಟ ಜಾಲತಾಣದ ಗುಂಪು ಈಗ ಇಡೀ ದೇಶದಲ್ಲಿ ಜಾಲತಾಣ ಭಯೋತ್ಪಾದನೆಗೆ ಸಜ್ಜಾಗಿ ನಿಂತಿದೆ.

ಪ್ರಕರಣಗಳು ಹೊರಬಿದ್ದಾಗೆಲ್ಲ, ಪ್ರತಿಭಟನೆಗಳಿಗೆ ಪ್ರಚಾರ ಸಿಕ್ಕಾಗೆಲ್ಲ ಮಹಿಳೆಯರ ಸುರಕ್ಷತೆಯ ಬಗ್ಗೆ ಏಳುವ ಚರ್ಚೆಗಳು ಕೂಡ ಮೇಲ್ಪದರದ್ದೇ ಆಗಿರುತ್ತದೆ. ಮಹಿಳೆಯರ ಸುರಕ್ಷತೆಗಾಗಿ ಮಾಡುವ ಸಲಹೆಗಳು ಅವಳನ್ನು ಮತ್ತಿಷ್ಟು ಅಧೀರಳನ್ನಾಗಿಸುವ ನೆಲೆಯಲ್ಲಿಯೇ ಇರುತ್ತದೆ. "ಪೆಪ್ಪರ್ ಸ್ಪ್ರೇ ಇಟ್ಟುಕೊಳ್ಳಿ.. ಕರಾಟೆ ಕಲಿಯಿರಿ.. ಒಬ್ಬೊಬ್ಬರೇ ತಿರುಗಾಡಬೇಡಿ.." ಇತ್ಯಾದಿ ಇತ್ಯಾದಿ.....ಇವುಗಳು ಈ ಕ್ಷಣದ ಪರಿಹಾರ ಮಾರ್ಗವೆನಿಸಬಹುದಾದರೂ ನಿಜವಾದ ಕಾರಣ ಮತ್ತು ಪರಿಹಾರ ಹುಡುಕಲೇ ಬೇಕು. ನಮಗೆ ಬೇಕಾಗಿರುವುದು ರಕ್ಷಣೆಯ ಅಗತ್ಯವಿಲ್ಲದ ಒಂದು ಸಮಾಜ.


ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳಿಗೂ ಸಮಾಜದಲ್ಲಿ ಅವರಿಗಿರುವ ಸ್ಥಾನಕ್ಕೂ ನೇರ ಸಂಬಂಧವಿದೆ. ನಮ್ಮ ಸಮಾಜದ ಸಂರಚನೆಯಲ್ಲಿಯೇ ಮಹಿಳಾ ಅಸಮಾನತೆಯ ಭಾವ ಅಡಕವಾಗಿದೆ. ಇದಕ್ಕೆ ಪೂರಕವಾಗಿಯೆ ಸದಾ ಅನುಕರಣೀಯ, ಮಾರ್ಗದರ್ಶಕ ದೀಪಗಳು ನಮ್ಮ ಪರಂಪರೆಯ ಮಹಾದಿಗ್ದರ್ಶನಗಳು ಎಂದು ಹೆಗ್ಗಳಿಕೆಗೆ ಬಾಜನವಾಗಿ ಮಹಾಕಾವ್ಯಗಳೆನಿಸಿಕೊಂಡ ಮಹಾಭಾರತ, ರಾಮಾಯಣಗಳಲ್ಲಿಯೂ ಹೆಣ್ಣನ್ನು ಹೇಗೆ ಚಿತ್ರಿಸಿದೆ ಎನ್ನುವುದನ್ನು ಚರ್ಚೆಗಾಗಿಯೋ ಅಥವಾ ನಮ್ಮ ಆಲೋಚನಾ ಕ್ರಮದ ಬದಲಾವಣೆಗಾಗಿಯೋ ಈ ಕೆಲವು ಅಂಶಗಳು.

ಮಹಾಭಾರತ, ರಾಮಾಯಣಗಳಲ್ಲಿಯೂ ಹೆಣ್ಣು...

ಮಹಾಭಾರತದ ಉದಾಹರಣೆಯನ್ನೇ ತೆಗೆದುಕೊಂಡರೆ.....ಕುಂತಿ ಪಾಂಡುರಾಜನ ಮಡದಿಯಾದ ಮೇಲೂ ಪಡೆಯುವ ಐವರು 'ಗಂಡು' ಮಕ್ಕಳು.. ನಿಯೋಗ ಪದ್ಧತಿಯಿಂದಲೇ. ಕಾರಣ ಪಾಂಡು ರಾಜನಿಗೆ ಇರುವ ಒಂದು ಖಾಯಿಲೆ. ವಿವಾಹ ಪೂರ್ವ ಸೂರ್ಯನಿಂದ ಪಡೆಯುವ ಕರ್ಣನೂ ಗಂಡು ಮಗುವೇ! ವಿವಾಹದ ನಂತರವೂ ನಿಯೋಗವೇ ಎಂದಾದರೆ ವಿವಾಹ ಪೂರ್ವದ ಮಗುವನ್ನು ಲೋಕಾಪವಾದಕ್ಕೆ ಅಂಜಿ ನದಿಯ ಪಾಲು ಮಾಡುವ ಮೂಲಕ ಹೆಣ್ಣಿನ ಲೈಂಗಿಕತೆಗೆ ಪಾವಿತ್ರದ ಲೇಪ ಹಚ್ಚುವುದನ್ನು ಹೇಗೆ ಸ್ವೀಕರಿಸಬೇಕು? ಇನ್ನು ಕೌರವರು ಪಾಂಡವರನ್ನು ಜೂಜಾಟದಲ್ಲಿ ಸೋಲಿಸುತ್ತಾರೆ. ಆದರೆ ಅವರು ಅಹಂಕಾರ ಪ್ರದರ್ಶಿಸುವುದು ದ್ರೌಪತಿಯ ವಸ್ತ್ರಾಪಹರಣದ ಮೂಲಕ. ಇದು ಮಹಿಳೆಯ ಮೇಲೆ ಪುರುಷಾಧಿಕಾರಕ್ಕೆ ಒಂದು ಉದಾಹರಣೆಯಾದರೆ ಇನ್ನು ಹೆಣ್ಣು ಮಕ್ಕಳೇ ಬೇಡವೆಂಬ ಭಾವನೆಗೂ ಪೂರಕವಾದ ಅಂಶಗಳನ್ನೂ ಮಹಾಕಾವ್ಯಗಳಿಂದಲೇ ಎತ್ತಿಕೊಳ್ಳಬಹುದು. ಉದಾಹರಣೆಗೆ ರಾಮಾಯಣದ ದಶರಥ ಮಹಾರಾಜನಿಗೆ ಮಕ್ಕಳಿಲ್ಲ. ಯಜ್ಞ ಮಾಡಿ ಅರಸ ನಾಲ್ಕು ಜನ ಗಂಡು ಮಕ್ಕಳನ್ನೇ ಪಡೆಯುತ್ತಾನೆ. ನಂತರ ರಾಮ ಸೀತೆಯರಿಗೆ ಹುಟ್ಟುವುದೂ ಅವಳಿ–ಜವಳಿ ಗಂಡು ಮಕ್ಕಳೇ! (ಇದು ಹೆಚ್ಚು ಪ್ರಚಲಿತ ವಿರುವ ರಾಮಾಯಣದ ಕಥೆಗಳು. ವಿವಿಧ ಬುಡಕಟ್ಟುಗಳ ರಾಮಾಯಣಗಳು ಇನ್ನೂ ಬೇರೆಯದೇ ಆಗಿರಬಹುದು.) ನನ್ನಂತೆಯೇ ಉಳಿದವರಿಗೂ ಪ್ರಶ್ನೆ ಏಳಬಹುದಲ್ಲವೇ. ನಾಲ್ಕರಲ್ಲಿ ಒಂದಾದರೂ, ಮತ್ತು ಎರಡರಲ್ಲಿ ಒಂದಾದರೂ ಹೆಣ್ಣು ಮಗುವಾಗಬಾರದಿತ್ತೇ? ಇನ್ನು ಸೀತೆ ಜನಕ ಮಹಾರಾಜನಿಗೆ ಸಿಗುವುದು ಹೇಗೆ–ರೈತನೊಬ್ಬನಿಗೆ ಹೊಲ ಉಳುವಾಗ...ಸೀತೆ ಪದದ ಅರ್ಥವೇ ನೇಗಿಲ ಅಲಗು ಎಂದು. ಹಾಗಾಗಿ ಸೀತೆಯ ಹುಟ್ಟನ್ನು ಕೃಷಿಯ ಬೆಳವಣಿಗೆಯ ಸಂಕೇತವಾಗಿ ಗುರುತಿಸಬಹುದು. ಅದರ ಜೊತೆಯೇ ಈ ಪಾತ್ರವನ್ನು ಕಾವ್ಯ ರಚನೆಕಾರರು ಸೃಷ್ಟಿಸುವಾಗ ದೈವಾಂಶ ಸಂಭೂತ ರಾಮ ಹುಟ್ಟುವುದು ಯಜ್ಞವೆಂಬ 'ಪವಿತ್ರ' ಕಾರ್ಯದಿಂದ ಮತ್ತು ಆತನ ಪತ್ನಿಯಾಗಲೆಂದೇ ಹುಟ್ಟುವ ಸೀತೆ ಹೊಲದಲ್ಲಿ ಎಂಬ ಕಲ್ಪನೆಯ ಹಿಂದೆ 'ಹೆಣ್ಣು ಮಗು' ಬೇಡವೆಂದು ತ್ಯಜಿಸಿದ ಕೂಸಾಗಿತ್ತೇ ಅದು? ಇನ್ನು ತನ್ನದಲ್ಲದ ತಪ್ಪಿಗೆ ಮಹಿಳೆ ಬೆಲೆ ತೆರುವುದಕ್ಕೂ ಪೂರಕವಾದ ಅಂಶಗಳು ಅಲ್ಲಿಯೆ ಸಿಗುತ್ತವೆ. ಮಾರುವೇಷದಲ್ಲಿ ಇಂದ್ರ ಅಹಲ್ಯೆಯ ಮೇಲೆ ಅತ್ಯಾಚಾರ ನಡೆಸುತ್ತಾನೆ. ಪತಿಯ ಕೋಪಕ್ಕೆ ಎರವಾದ ಅಹಲ್ಯೆ ಶಿಲೆಯಾಗುತ್ತಾಳೆ.!!! ಯಾರ ತಪ್ಪಿಗೆ ಯಾರಿಗೆ ಶಿಕ್ಷೆ? ಮತ್ತೆ ತುಂಬಿದ ಗರ್ಭಿಣಿ ಪತ್ನಿಯನ್ನು ಲೋಕಾಪವಾದಕ್ಕೆ ಹೆದರಿ ಕಾಡಿಗಟ್ಟುವ ರಾಮನ ಪಾದ ಸ್ಪರ್ಶದಿಂದ ಶಾಪ ವಿಮುಕ್ತೆಯಾಗಬೇಕು!. ಪುರುಷ ಶ್ರೇಷ್ಟತೆಯ ಭಾವಕ್ಕೆ ಇನ್ನೂ ಎಷ್ಟು ಉದಾಹರಣೆಗಳು ಬೇಕು? ನಮ್ಮ ಭವ್ಯ ಪರಂಪರೆಯನ್ನು ಪ್ರತಿಪಾದಿಸುವವರೆಲ್ಲರೂ ಈ ಅಂಶಗಳನ್ನೇ ಮಾದರಿಯಾಗಿಟ್ಟು ಮಹಿಳೆಯರು ಲಕ್ಷ್ಮಣ ರೇಖೆಯನ್ನು ದಾಟಬಾರದೆಂಬ ಕಟ್ಟಳೆಯನ್ನು ವಿಧಿಸುತ್ತಾರೆ.

ಈ ವಿಷಯಗಳನ್ನು ಕೇವಲ ಮಹಿಳೆಯರ ಪ್ರಶ್ನೆಯಾಗಿ ಮಾತ್ರ ನೋಡದೇ ಅಂದಿನ

ಪುಟ 15 ಕ್ಕೆ



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**

CMYK